

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 26 ಬುಧವಾರ 2023

ಸಂಪುಟ: 44 | ಸಂಚಿಕೆ: 11 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾದರೆ ರಾಜ್ಯದ ಜನ ನೆಮ್ಮದಿಯಿಂದಿರಲು ಸಾಧ್ಯ

ಮಂಡ್ಯ ಬಳಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಐವರು ಜಲಸಮಾಧಿ

■ ಪುಟ–3

ಇದು ಲೂಟಿ ಸರ್ಕಾರ

● ತಿ.ನರಸೀಪುರದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾಗ್ದಾಳಿ, ರಾಜ್ಯ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆ ● ದರ್ಶನ್ ಧ್ರುವನಾರಾಯಣ್‌ಗೆ ಸಾಂತ್ವನ



ತಿ.ನರಸೀಪುರ, ಏ.25(ಎಂಟಿವೈ)– ಕರ್ನಾಟಕದಲ್ಲಿ ಆಪರೇಷನ್ ಕಮಲದ ಮೂಲಕ ಅನೈತಿಕವಾಗಿ ಅಧಿಕಾರ ಹಿಡಿದಿರುವ ಬಿಜೆಪಿ ಸರ್ಕಾರ ಕಳೆದ ನಾಲ್ಕು ವರ್ಷದಲ್ಲಿ 1500 ಲಕ್ಷ ಕೋಟಿ ಲೂಟಿ ಮಾಡಿದ್ದು, ಇಂತಹ ಲೂಟಿಕೋರ ಬಿಜೆಪಿ ಸರ್ಕಾರವನ್ನು ಈ ಬಾರಿ ಕಿತ್ತೊಗೆಯುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಜನತೆಯಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಹೆಳವರಹುಂಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಬಸವಣ್ಣ, ಕುವೆಂಪು ಸೇರಿದಂತೆ ಮಹಾ ಮಹನೀಯರ ನಾಡಲ್ಲಿ ಕಡು ಭ್ರಷ್ಟ ಸರ್ಕಾರವಿದ್ದು, ಜನರ ಹಣವನ್ನು ಲೂಟಿ ಮಾಡುತ್ತಿದೆ. ಶಾಸಕರನ್ನು ಖರೀದಿಸಿ ವಾಮ ಮಾರ್ಗದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಪಿಎಸ್ಐ, ಜೂನಿಯರ್ ಇಂಜಿನಿಯರ್, ಉಪನ್ಯಾಸಕರ ಹುದ್ದೆ ಸೇರಿದಂತೆ ವಿವಿಧ ನೇಮಕಾತಿಗಳಲ್ಲಿ ಅಕ್ರಮ ಎಗ್ಗಿಲ್ಲದೆ ನಡೆದಿರುವುದು ಜಗಜ್ಜಾಹೀರಾಗಿದೆ. ವಿವಿಧ ಹುದ್ದೆಗಳಿಗೆ ಇಂತಿಷ್ಟು ಮೊತ್ತ ನಿಗದಿ ಮಾಡಿರುವ ಬಿಜೆಪಿ, ಕಳೆದ ನಾಲ್ಕು ವರ್ಷದಲ್ಲಿ ಕರ್ನಾಟಕ ಜನರ 1500 ಲಕ್ಷ ಕೋಟಿ ಲೂಟಿ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.



ತಿ.ನರಸೀಪುರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯನ್ನು ಆತ್ಮೀಯವಾಗಿ ಆಲಿಂಗಿಸಿದ ಪ್ರಿಯಾಂಕಾ ಗಾಂಧಿ

ರಾಜ್ಯದಲ್ಲಿ ಶೇ.40ರಷ್ಟು ಕಮಿಷನ್ ದಂಧೆ ನಡೆಯುತ್ತಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷರು ಪ್ರಧಾನಿ ಮೋದಿಗೆ ಪತ್ರ ಬರೆದರು. ಗುತ್ತಿಗೆದಾರರೊಬ್ಬರು ಕಮಿಷನ್ ದಂಧೆಗೆ ತತ್ತರಿಸಿ ಆತ್ಮಹತ್ಯೆ ಮಾಡಿಕೊಂಡರು. ಬಿಜೆಪಿ ಶಾಸಕರೊಬ್ಬರ ಪುತ್ರನ ಬಳಿ 8 ಕೋಟಿ ರೂ. ಲಂಚದ ಹಣ ಸಿಕ್ಕಿ ಬಿದ್ದ ವಿಚಾರ ನಿಮಗೆಲ್ಲ ಗೊತ್ತಿದೆ. ಆತನ ವಿಚಾರಣೆ ಸರಿಯಾಗಿ ನಡೆಸಲಿಲ್ಲ. ಈ ದಂಧೆ ಹಿಂದಿದ್ದ ಆತನ ತಂದೆ, ಶಾಸಕ ತಲೆಮರೆಸಿಕೊಂಡರು. ಇದು ಮಾತ್ರವಲ್ಲ, ಶಾಲಾ ಮಕ್ಕಳಿಗೆ ನೀಡುವ ಮೊಟ್ಟೆಯಲ್ಲಿ ಹಣ ನುಂಗಿದ್ದಾರೆ. ಬಿಜೆಪಿ ಸರ್ಕಾರ ಕೊಳ್ಳೆ ಹೊಡೆದ 1500 ಲಕ್ಷ ಕೋಟಿ ರೂ.ನಲ್ಲಿ 2025 ಕಿ.ಮೀ ಹೆದ್ದಾರಿ, 30 ಸಾವಿರ ಸ್ಮಾರ್ಟ್ ತರಗತಿಗಳ ಕೊಠಡಿ ನಿರ್ಮಾಣ ಮಾಡಬಹುದಾಗಿತ್ತು. 750 ಕಿ.ಮೀ. ಮೆಟ್ರೋ ಲೈನ್ ನಿರ್ಮಾಣ ಮಾಡಬಹುದಿತ್ತು. ಅಲ್ಲದೆ, ● 7ನೇ ಪುಟಕ್ಕೆ

ರಾಜ್ಯದಲ್ಲಿ ಜೆಡಿಎಸ್ ಸ್ವತಂತ್ರವಾಗಿ ಸರ್ಕಾರ ರಚಿಸುವುದು ನಿಶ್ಚಿತ

● ಚಾಮುಂಡೇಶ್ವರಿಯಲ್ಲಿ ಜಿ.ಟಿ.ದೇವೇಗೌಡರು ಈ ಬಾರಿ 50 ಸಾವಿರ ಮತಗಳ ಅಂತರದಿಂದ ಗೆಲ್ತಾರೆ; ಕಾಂಗ್ರೆಸ್ ಅಭ್ಯರ್ಥಿ ಸೋಲಿನ ಭಯದಿಂದ ಸುಳ್ಳು ಹೇಳುತ್ತಿದ್ದಾರೆ ● ಮೈಸೂರಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯೆ ● ಪಕ್ಷದ ಮುಖಂಡರೊಂದಿಗೆ ಚಾಮುಂಡೇಶ್ವರಿ ದರ್ಶನ



ಮೈಸೂರು, ಏ. 25(ಆರ್‌ಕೆ)– ವಿಧಾನಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗೆದ್ದು ಜಾತ್ಯತೀತ ಜನತಾದಳ ಈ ಬಾರಿ ಸ್ವತಂತ್ರವಾಗಿ ಸರ್ಕಾರ ರಚಿಸುವುದು ನಿಶ್ಚಿತ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಅತೀವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಮಿತ್ ಶಾ, ಪ್ರಿಯಾಂಕ ಆಟ ನಡೆಯಲ್ಲ: ಜೆಡಿಎಸ್ ಅಭ್ಯರ್ಥಿಗಳ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸಲೆಂದು ಮೈಸೂರಿಗೆ ಆಗಮಿಸಿದ ಅವರು ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಅಮಿತ್ ಶಾ, ಪ್ರಿಯಾಂಕಾ ಗಾಂಧಿ ಆಟ ಇಲ್ಲಿ ನಡೆಯುವುದಿಲ್ಲ. ಕರ್ನಾಟಕಕ್ಕೆ, ಕನ್ನಡ ನಾಡಿಗೆ ಅವರ ಕೊಡುಗೆ ಏನೂ ಇಲ್ಲ. ಅಮಿತ್ ಶಾಗೆ ರಾಜ್ಯದಲ್ಲಿ ಬೆಂಬಲ ವ್ಯಕ್ತವಾಗುತ್ತಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಬೆಂಬಲ ಕಳೆದುಕೊಂಡಿದ್ದಾರೆ ಎಂದರು.

ಒಳ ಒಪ್ಪಂದ ಇಲ್ಲ: ಜೆಡಿಎಸ್ ಯಾರೊಂದಿಗೂ ಒಳ ಒಪ್ಪಂದ ಮಾಡಿಕೊಂಡಿಲ್ಲ. ಈ ಚುನಾವಣೆಯಲ್ಲಿ ನಮ್ಮ ಪಕ್ಷ ಅತೀ ಹೆಚ್ಚು ಸ್ಥಾನ ಪಡೆದು ಸ್ವತಂತ್ರವಾಗಿ ಸರ್ಕಾರ ರಚಿಸುವುದು ನಿಶ್ಚಿತ. ಹೊಸದಾಗಿ ಪಕ್ಷಕ್ಕೆ ಸೇರ್ಪಡೆಗೊಂಡವರ ಪೈಕಿ 20ಕ್ಕೂ ಹೆಚ್ಚು ಅಭ್ಯರ್ಥಿಗಳು ಗೆಲ್ಲುತ್ತಾರೆ. ನಿಗದಿತ ಗುರಿ ತಲುಪಿ ಯಾರ ಹಂಗೂ ಇಲ್ಲದೆ ನಾವೇ ಸ್ವಂತ ● 9ನೇ ಪುಟಕ್ಕೆ

ಬಿಜೆಪಿ ಕಾರ್ಯಕರ್ತರ ಹುರಿದುಂಬಿಸಲು ಮೋದಿ ಹೊಸ ತಂತ್ರ

ನಾಳೆ ರಾಜ್ಯದ 50 ಲಕ್ಷ ಕಾರ್ಯಕರ್ತರೊಂದಿಗೆ ವರ್ಚುವಲ್ ಮೂಲಕ ಪ್ರಧಾನಿ ಸಂವಾದ

- ಬೆಳಗ್ಗೆ 9.30ಕ್ಕೆ ರಾಜ್ಯದ 58,112 ಬೂತ್‌ಗಳಲ್ಲಿ ಇದಕ್ಕಾಗಿ ಸಕಲ ವ್ಯವಸ್ಥೆ
- ಈಗಾಗಲೇ 24 ಲಕ್ಷ ಕಾರ್ಯಕರ್ತರಿಂದ ನರೇಂದ್ರ ಮೋದಿ ಆ್ಯಪ್ ಡೌನ್‌ಲೋಡ್
- ತಂತ್ರಜ್ಞಾನ ಬಳಸಿಕೊಂಡು ಕಾರ್ಯಕರ್ತರ ಸಂಪರ್ಕ ಸಾಧಿಸುವ ವಿನೂತನ ಮಂತ್ರ

ಬೆಂಗಳೂರು, ಏ.25(ಕೆಎಂಶಿ)– ಕರ್ನಾಟಕದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಪ್ರಧಾನಿ ನರೇಂದ್ರ ಮೋದಿ, ವಿಧಾನ ಸಭಾ ಚುನಾವಣೆಯಲ್ಲಿ ಕಾರ್ಯಕರ್ತರನ್ನು ಮತ್ತಷ್ಟು ಸಕ್ರಿಯಗೊಳಿಸಲು ತಾವೇ ಖುದ್ದಾಗಿ ಅವರ ಜೊತೆ ನೇರ ಸಂವಾದ ನಡೆಸುತ್ತಿದ್ದಾರೆ.

ಮೋದಿ ಅವರು ಈ ತಿಂಗಳ 27ರಂದು ಬೆಳಗ್ಗೆ 9.30ಕ್ಕೆ ರಾಜ್ಯದ 50 ಲಕ್ಷ ಬಿಜೆಪಿ ಕಾರ್ಯಕರ್ತ ರೊಂದಿಗೆ ವರ್ಚುವಲ್ ಮೂಲಕ ನೇರ ಸಂವಾದ ನಡೆಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯದ 58,112 ಬೂತ್‌ಗಳಲ್ಲಿ, ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಈ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಬೂತ್‌ಗಳಲ್ಲಿ ಟಿವಿಗಳನ್ನು, ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಎಲ್‌ಇಡಿ ಸ್ಕ್ರೀನ್ ಅಳವಡಿಸಲಾಗುವುದು. ಸಂವಾದಕ್ಕಾಗಿ ಈಗಾಗಲೇ 24 ಲಕ್ಷ ಕಾರ್ಯಕರ್ತರು ಮೋದಿ ಆ್ಯಪ್ ಡೌನ್‌ಲೋಡ್ ಮಾಡಿ ಕೊಂಡಿದ್ದಾರೆ ಎಂದರು. ಬೂತ್ ಮಟ್ಟದಲ್ಲಿ 58 ಸಾವಿರ ಸ್ಥಳಗಳಲ್ಲಿ ಈ ಆ್ಯಪ್‌ಗಳ ಮೂಲಕ ಕಾರ್ಯಕರ್ತರು



ಸಂವಾದವನ್ನು ವೀಕ್ಷಿಸಲಿದ್ದಾರೆ. ಎಲ್‌ಇಡಿ ಸ್ಕ್ರೀನ್ ಇರುವ ಕಡೆ ಸುಮಾರು 1,000 ಕಾರ್ಯಕರ್ತರನ್ನು, ಬೂತ್‌ಗಳಲ್ಲಿ 200 ಕಾರ್ಯಕರ್ತರನ್ನು ಈ ಕಾರ್ಯ ಕ್ರಮಕ್ಕಾಗಿ ಸಂಯೋಜಿಸಲಾಗುವುದು. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 5,000 ನಮೋ ಆ್ಯಪ್ ಡೌನ್ ಲೋಡ್ ಮಾಡಿಕೊಳ್ಳಲು ಯೋಜನೆ ರೂಪಿಸಲಾಗಿದೆ.

ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳ 15 ಕಡೆ ಪ್ರಧಾನಿಯವರು ಕಾರ್ಯಕರ್ತರ ಪ್ರಶ್ನೆಗಳಿಗೆ ಉತ್ತರಿ ಸಲಿದ್ದಾರೆ. ಹೊಸ ತಂತ್ರಜ್ಞಾನ ಬಳಸಿಕೊಂಡು ಇದೇ ಮೊದಲ ಬಾರಿ ಬೃಹತ್ ಪ್ರಮಾಣದಲ್ಲಿ ನೇರ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಬಿಜೆಪಿ ಮಾತ್ರ ಗರಿಷ್ಠ ಕಾರ್ಯಕರ್ತರನ್ನು ಹೊಂದಿದೆ. ಕಾರ್ಯಕರ್ತರ ಆಧಾರಿತ ಪಕ್ಷ, ಈ ಶ್ರಮದ ಮೇಲೆ ಗೆಲ್ಲುವ ಪಕ್ಷವಾಗಿದೆ. ಮೋದಿಯವರು ರಾಜ್ಯದಲ್ಲಿ ಪೂರ್ಣ ಬಹುಮತದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಅಪೇಕ್ಷೆ ಹೊಂದಿದ್ದಾರೆ ಎಂದರು. ಕಾರ್ಯ ಕರ್ತರ ಶ್ರಮಕ್ಕೆ ಪ್ರಧಾನಿಯವರು ಬೆನ್ನೆಲುಬಾಗಿರಲು ಸಿದ್ಧರಾಗಿ ದ್ದಾರೆ. ಕಡಿಮೆ ಅವಧಿಯಲ್ಲಿ ಅಭ್ಯರ್ಥಿಗಳು ಎಲ್ಲ ಮನೆ ಗಳಿಗೆ ಭೇಟಿ ನೀಡಲು ಕಷ್ಟ ಸಾಧ್ಯವಾದ್ದರಿಂದ ಕಾರ್ಯ ಕರ್ತರು ಒಂದೊಂದು ಮನೆಯನ್ನು ಎರಡರಿಂದ ಮೂರು ಬಾರಿ ಸಂಪರ್ಕಿಸಿ, ಡಬಲ್ ಇಂಜಿನ್ ಸರ್ಕಾರದ ಸಾಧನೆ ಮತ್ತು ಯೋಜನೆಗಳನ್ನು ತಿಳಿಸಲಿದ್ದಾರೆ ಎಂದು ಶೋಭಾ ಕರಂದ್ಲಾಜೆ ವಿವರಿಸಿದರು.

ಇಂದಿನಿಂದ 2 ದಿನದ 'ವಿಶೇಷ ಮಹಾ ಪ್ರಚಾರ ಅಭಿಯಾನ' ಆರಂಭವಾಗಿದೆ. ಎಲ್ಲ 224 ಕ್ಷೇತ್ರ ಗಳಲ್ಲಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಬೆಳಗ್ಗೆ ಮಠ-ಮಂದಿರಗಳಿಗೆ ಭೇಟಿ ನೀಡಿ ಆ ನಂತರ ರಾಷ್ಟ್ರ ನಾಯಕರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದ್ದಾರೆ. ಮನೆ–ಮನೆಗೂ ಭೇಟಿ ನೀಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆಗಳು ಮತ್ತು ಯೋಜನೆಗಳ ಬಗ್ಗೆ ತಿಳಿಸುತ್ತಿದ್ದಾರೆ. ಅಭಿಯಾನದ ಭಾಗವಾಗಿ ಗೋಷ್ಠಿಗಳು, ವಿವಿಧ ಸಮುದಾಯಗಳ ಮುಖಂಡರೊಂದಿಗೆ ಸಂವಾದ, ರೋಡ್ ಶೋಗಳು, ಸಾರ್ವಜನಿಕ ಸಭೆಗಳನ್ನು ಆಯೋಜಿಸಲಾಗಿದೆ ಎಂದರು.

ಸ್ವೀಪ್ ಜಿಲ್ಲಾ ಐಕಾನ್ ಆಗಿ ಖುಷಿ ಆಯ್ಕೆ



ಮೈಸೂರು ಜಿಲ್ಲಾ ಸ್ವೀಪ್ ಐಕಾನ್ ಆಗಿ ಆಯ್ಕೆಯಾಗಿರುವ ಅಂತರರಾಷ್ಟ್ರೀಯ ಯೋಗಪಟು ಖುಷಿ ಅವರನ್ನು ಸ್ವೀಪ್ ನೋಡಲ್ ಅಧಿಕಾರಿ ಕೆ.ಎಂ.ಗಾಯತ್ರಿ ಅಭಿನಂದಿಸಿದರು. (ಎಡದಿಂದ) ಖುಷಿ ತಂದೆ ಹೆಚ್.ಹೇಮಚಂದ್ರ, ಬಿಇಒ ಕೃಷ್ಣ ಹಾಗೂ ಪಾರಂಪರಿಕ ಆಯುಕ್ತ ಎ.ದೇವರಾಜು ಅವರನ್ನು ಚಿತ್ರದಲ್ಲಿ ಕಾಣಬಹುದು.

ಮುಂದಿನ ಸಿಎಂ ಸಿ.ಟಿ.ರವಿ ಆಗಲಿ



ಚಿಕ್ಕಮಗಳೂರು, ಏ.25– ಮುಂದಿನ ಮುಖ್ಯಮಂತ್ರಿ ಸಿ.ಟಿ.ರವಿ ಆಗಲೆಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.

ಕಡೂರು ತಾಲೂಕಿನ ನಿಡಘಟ್ಟದಲ್ಲಿ ನಡೆಯುತ್ತಿದ್ದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಸಿ.ಟಿ.ರವಿ ಪಡೆದಿರುವುದು ನಮ್ಮ ಪುಣ್ಯ. ತನ್ನ ಕ್ಷೇತ್ರ ಬಿಟ್ಟು ಪೂರ್ಣ ಬಹುಮತದ ಸರ್ಕಾರಕ್ಕೆ ಓಡಾಡುತ್ತಿದ್ದಾರೆ. ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆಗಿರೋದು ನಮ್ಮ ಹೆಮ್ಮೆ. ಸಿ.ಟಿ.ರವಿ, ಹಿಂದೂ ಹುಲಿ ಎಂದೇ ಖ್ಯಾತಿಯಾಗಿದ್ದಾರೆ. ಚಿಕ್ಕಮಗಳೂರಿನಿಂದ ಸಿ.ಟಿ.ರವಿ ಅವರನ್ನು ಗೆಲ್ಲಿಸಿ, ಅವರು ಮುಂದಿನ ಮುಖ್ಯಮಂತ್ರಿ ಆಗಬೇಕು ಎಂದು ಇಂಗಿತ ವ್ಯಕ್ತಪಡಿಸಿದರು.


ರಾಷ್ಟ್ರದ್ರೋಹಿ ಮುಸ್ಲಿಮರ ಮತ ಬೇಡ ಎಂದು ನಿನ್ನೆ ಇಂದು, ನಾಳೆಯೂ ಹೇಳುತ್ತೇನೆ. ರಾಷ್ಟ್ರಭಕ್ತ ಮುಸ್ಲಿಮರು ಬಿಜೆಪಿ ಜೊತೆಯೇ ಇದ್ದಾರೆ. ಸಿದ್ದು–ಡಿಕೆಶಿ ಬಿಜೆಪಿಯನ್ನು ಜಾತಿವಾದಿ ಅಂತಾರೆ. ಒಕ್ಕಲಿಗರು ನನ್ನ ಹಿಂದೆ ಬನ್ನಿ ನಾನು ಸಿಎಂ ಆಗುತ್ತೇನೆ ಅಂತಾರೆ ಡಿಕೆಶಿ, ಸಿದ್ದರಾಮಯ್ಯನವರೂ ಅದೇ ರೀತಿ ಮಾತನಾಡುತ್ತಾರೆ. ಸಿದ್ದು–ಡಿಕೆಶಿ ನೇರವಾಗಿ ಜಾತಿ ರಾಜಕಾರಣ ಮಾಡಿದ್ದಾರೆ. ಬಿಜೆಪಿಗೆ ಕೋಮುವಾದಿ ರಾಜಕಾರಣ ಅಂತಾರೆ ಎಂದು ಕಿಡಿಕಾರಿದರು. ನಿನ್ನೆ ಮೈಸೂರಿನಲ್ಲಿ ಸಿ.ಟಿ.ರವಿ ಸಿಎಂ ಆಗುವ ಇಂಗಿತವನ್ನು ಹೊರಹಾಕಿದ್ದರು. ಇಂದು ಈಶ್ವರಪ್ಪ ಬಹಿರಂಗ ಸಭೆಯಲ್ಲೇ ಸಿಎಂ ಆಗಲಿ ಎನ್ನುವ ಹೇಳಿಕೆ ನೀಡಿರುವ ಬೆನ್ನಲ್ಲೇ ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಮಹತ್ವ ಪಡೆದುಕೊಂಡಿದೆ.



ಜೆಡಿಎಸ್ ಮುಖಂಡ ಅಜಯ್ ಶಾಸ್ತ್ರಿ ತಮ್ಮ ಹಲವು ಬೆಂಬಲಿಗರೊಂದಿಗೆ ಬಿಜೆಪಿ ಮೈಸೂರು ವಿಭಾಗ ಪ್ರಭಾರಿ ಮೈ.ವಿ.ರವಿಶಂಕರ್ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು. ಈ ವೇಳೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಬಿಜೆಪಿ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್, ಮಾಧ್ಯಮ ವಕ್ತಾರ ಮೋಹನ್, ನಗರಪಾಲಿಕೆ ಸದಸ್ಯ ಮಾ.ವಿ.ರಾಂಪ್ರಸಾದ್, ಪ್ರಮೀಳಾ ಭರತ್, ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯಮೂರ್ತಿ, ಬಿಜೆಪಿ ಹಿಂದುಳಿದ ವರ್ಗದ ಅಧ್ಯಕ್ಷ ಜೋಗಿ ಮಂಜು, ಬಿಜೆಪಿ ಯುವ ಮೋರ್ಚಾ ನಗರ ಉಪಾಧ್ಯಕ್ಷ ಕೆ.ಎಂ.ನಿಶಾಂತ್ ಇನ್ನಿತರರಿದ್ದರು.

ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಮತ್ತೆ ಸ್ಪರ್ಧಿಸಲು ಜೋ ಬೈಡನ್ ತೀರ್ಮಾನ

ವಾಷಿಂಗ್ಟನ್, ಏ.25– ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಮತ್ತೆ ಸ್ಪರ್ಧಿಸುವುದಾಗಿ ಜೋ ಬೈಡನ್ ಅವರು ಅಧಿಕೃತವಾಗಿ ಘೋಷಿಸಿಕೊಂಡಿದ್ದಾರೆ.



ಈ ಬಗ್ಗೆ ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಬೈಡನ್, ಪ್ರತಿ ಪೀಳಿಗೆಯೂ ಪ್ರಜಾಪ್ರಭುತ್ವದ ಪರವಾಗಿ ನಿಲ್ಲಬೇಕಾದ ಕ್ಷಣ. ಮೂಲಭೂತ ಸ್ವಾತಂತ್ರ್ಯಕ್ಕಾಗಿ ನಿಲ್ಲುವುದು ಅಗತ್ಯವಿದೆ. ಈ ಜವಾಬ್ದಾರಿ ನಮ್ಮದು ಎಂದು ನಾನು ನಂಬುತ್ತೇನೆ. ಅದಕ್ಕಾಗಿಯೇ ನಾನು, ಅಮೆರಿಕ ಅಧ್ಯಕ್ಷೀಯ ಮರು ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ ನಮ್ಮ ಜತೆಗೂಡಿ ಎಂದು ತಿಳಿಸಿದ್ದಾರೆ. ಈ ಹಿಂದೆ ಅಮೆರಿಕ ಅಧ್ಯಕ್ಷರಾಗಿ ಒಬಾಮ 2 ಬಾರಿ ಆಯ್ಕೆಯಾಗಿದ್ದರು.

ಸೂಡಾನ್‌ನಿಂದ ಹೊರಟ 278 ಮಂದಿ

ನವದೆಹಲಿ, ಏ.25– ಅಮೆರಿಕ ಹಾಗೂ ಸೌದಿ ಅರೇಬಿಯಾ ಸಂಘಟಿತವಾಗಿ ಮಾಡಿದ ಪ್ರಯತ್ನದಿಂದಾಗಿ ಸೂಡಾನ್‌ನಲ್ಲಿ ಅಂತರ್ಯುದ್ಧ ಮುಂದಿನ 72 ಗಂಟೆಗಳ ಕಾಲ ನಿಲ್ಲಲಿದೆ. ಕದನ ವಿರಾಮ ಘೋಷಣೆಯಾದ ಬೆನ್ನಲ್ಲಿಯೇ ಭಾರತ ಕಾರ್ಯಪ್ರವೃತ್ತವಾಗಿದ್ದು, ಆಪರೇಷನ್‌ಕಾವೇರಿ ಹೆಸರಿನಲ್ಲಿ 4 ಸಾವಿರ ಭಾರತೀಯರನ್ನು ಸಂಘರ್ಷಪೀಡಿತ ಸೂಡಾನ್‌ನಿಂದ ಹೊರತರಲಿದೆ. ಇದರ ಮೊದಲ ಹಂತವಾಗಿ 278 ಜನರನ್ನು ದೇಶಕ್ಕೆ ವಾಪಸ್ ಕರೆತರಲಾಗುತ್ತಿದೆ. ನವದೆಹಲಿಯಲ್ಲಿ ಈ ಕುರಿತಾಗಿ ಮಾತನಾಡಿದ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ಮೊದಲ ಬ್ಯಾಚ್‌ನಲ್ಲಿ, 278 ಭಾರತೀಯರನ್ನು ದೇಶಕ್ಕೆ ಮರಳಿ ಕರೆತರಲಾಗುತ್ತಿದೆ. ಇದಕ್ಕಾಗಿ ನೌಕಾಪಡೆಯ ಹಡಗು ಐಎನ್‌ಎಸ್ ಸುಮೇಧಾ ಪೋರ್ಟ್ ಸೂಡಾನ್‌ನಿಂದ ಸೌದಿ ಅರೇಬಿಯಾದ ಜೆಡ್ಡಾಕ್ಕೆ ತೆರಳಿದೆ. ಅಲ್ಲಿಂದ ಈ ನಾಗರಿಕರನ್ನು ಏರ್ ಲಿಫ್ಟ್ ಮಾಡಲಾಗುತ್ತದೆ ಎಂದಿದ್ದಾರೆ.ಸುಡಾನ್‌ನಲ್ಲಿ ಅರೆಸೈನಿಕ ಪಡೆ (ಆರ್‌ಎಸ್‌ಎಫ್) ಮತ್ತು ಸೇನೆಯ ನಡುವಿನ ಯುದ್ಧ ಕಳೆದ 10 ದಿನಗಳಿಂದ ನಡೆಯುತ್ತಿದೆ. ಎರಡೂ ಪಡೆಗಳು ಕೂಡ ದೇಶದಲ್ಲಿ ಅಧಿಕಾರ ಹಿಡಿಯಲು ಬಯಸುತ್ತಿದ್ದು, ಈವರೆಗೂ ಯುದ್ಧದಲ್ಲಿ 416 ಜನರು ಮತ್ತು ಸೈನಿಕರು ಸಾವನ್ನಪ್ಪಿದ್ದಾರೆ.



ಭಾರತೀಯ ನೌಕಾಪಡೆಯ ಐಎನ್‌ಎಸ್ ಸುಮೇಧಾ ಹಡಗಿನಲ್ಲಿ ಜನರು ಕುಳಿತಿರುವ ಚಿತ್ರ ಕೂಡ ಬಿತ್ತರವಾಗಿದೆ. ಅವರನ್ನು ಮೊದಲು ಸೌದಿ ಅರೇಬಿಯಾದ ಜೆಡ್ಡಾ ನಗರಕ್ಕೆ ಕರೆತರಲಾಗುತ್ತದೆ. ಮತ್ತೆ ಅಲ್ಲಿಂದ ಏರ್ ಲಿಫ್ಟ್ ಮಾಡಲಾಗುವುದು. ಪೋರ್ಟ್ ಸುಡಾನ್‌ನಲ್ಲಿ ಐಎನ್‌ಎಸ್ ಸುಮೇಧಾ ಹತ್ತಲು ಜನರು ತಯಾರಿ ನಡೆಸುತ್ತಿರುವ ಚಿತ್ರಗಳನ್ನೂ ಕೂಡ ಪ್ರಕಟಿಸಲಾಗಿದೆ

ಸತತ 2 ದಿನಗಳ ಕಾಲ ನಡೆದ ಮಾತುಕತೆಯ ಫಲವೇ ಈ ಕದನ ವಿರಾಮ. ಈ 72 ಗಂಟೆಗಳಲ್ಲಿ ಉಭಯ ಪಕ್ಷಗಳ ನಡುವೆ ಸಾಮರಸ್ಯ ಮೂಡಿಸಲು ಪ್ರಯತ್ನಿಸಲಾಗುವುದು. ಅದೇ ಸಮಯದಲ್ಲಿ, ಉಳಿದ ದೇಶಗಳು ತಮ್ಮ ನಾಗರಿಕರನ್ನು ಸುಡಾನ್‌ನಿಂದ ಸ್ಥಳಾಂತರಿಸುವ ಕಾರ್ಯಾಚರಣೆಯನ್ನು ನಡೆಸುತ್ತಿವೆ. ಯುಎನ್ ಪ್ರಕಾರ, ಇದುವರೆಗೆ 427 ಜನರು ಸಾವನ್ನಪ್ಪಿದ್ದಾರೆ.

ಪ್ರಚಾರಕ್ಕೆ ಮಕ್ಕಳನ್ನು ಬಳಸಿಕೊಂಡ ಆರೋಪ

ಸಂಘಟಕರ ವಿರುದ್ಧ ಏಳು ಎಫ್‌ಐಆರ್ ದಾಖಲು

ಬೆಂಗಳೂರು, ಏ.25– ರಾಜ್ಯ ವಿಧಾನ ಸಭಾ ಚುನಾವಣಾ ಕಣ ರಂಗೇರುತ್ತಿದೆ. ಇದೆ ವೇಳೆ ಚುನಾವಣಾ ಆಯೋಗದ ಫ್ಲೈಯಿಂಗ್ ಸ್ಕ್ವಾಡ್ ಬಳ್ಳಾರಿ, ಕೊಪ್ಪಳ ಸೇರಿದಂತೆ 7 ಜಿಲ್ಲೆಗಳಲ್ಲಿ ನೀತಿಸಂಹಿತೆ ಉಲ್ಲಂಘನೆ ಹಿನ್ನೆಲೆಯಲ್ಲಿ 7 ಎಫ್‌ಐಆರ್ ದಾಖಲಿಸಿದ್ದಾರೆ.

ಹಣ ಹಂಚಿಕೆ, ರ್‍ಯಾಲಿಗಳಲ್ಲಿ ಮಕ್ಕಳನ್ನು ಬಳಸಿಕೊಂಡ ಕಾರಣ ಆಯೋಜಕರ ವಿರುದ್ಧ ಕೇಸ್ ದಾಖಲಿಸಲಾಗಿದೆ. ಏಪ್ರಿಲ್ 18 ಮತ್ತು 19 ರಂದು ರ್‍ಯಾಲಿಯಲ್ಲಿ ಮಕ್ಕಳನ್ನು ಬಳಸಿಕೊಂಡ ಹಿನ್ನೆಲೆಯಲ್ಲಿ ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ತಿದ್ದುಪಡಿ ಕಾಯ್ದೆ ಮತ್ತು ಬಾಲಾಪರಾಧಿ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಲಾಗಿದೆ.

ಮಾಜಿ ಸಚಿವ ಡಿ.ಬಿ.ಇನಾಂದಾರ್ ನಿಧನ


ಬೆಂಗಳೂರು, ಏ. 25– ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಚಿವ ಡಿ.ಬಿ ಇನಾಂದಾರ್ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ತಡರಾತ್ರಿ ವಿಧಿವಶರಾಗಿದ್ದಾರೆ. ಹಲವು ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಇನಾಂದಾರ್, ಚಿಕಿತ್ಸೆ ಫಲಿಸದೇ ಮಂಗಳವಾರ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನರಾದರು.



74 ವರ್ಷದ ಇನಾಂದಾರ್ ಅವರು, ಶ್ವಾಸಕೋಸ ಸಮಸ್ಯೆಯಿಂದ ಬಳಲುತ್ತಿದ್ದರು. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಕಿತ್ತೂರು ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿ ಆಯ್ಕೆ ಆಗಿದ್ದರು. ಮಾತ್ರವಲ್ಲ, ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ಅವರು ಸಿರಸಂಗಿ ದೇಸಾಯಿ ಫೌಂಡೇಷನ್ ಟ್ರಸ್ಟ್‌ನ ಖಾಯಂ ಸದಸ್ಯರಾಗಿದ್ದರು. ಈ ಬಾರಿ ಚುನಾವಣೆಯಲ್ಲೂ ಇನಾಂದಾರ್ ಕಿತ್ತೂರು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದರು. ಆದರೆ ಅನಾರೋಗ್ಯದ ಕಾರಣ ಇನಾಂದಾರ್‌ಗೆ ಟಿಕೆಟ್ ನೀಡಲು ಕಾಂಗ್ರೆಸ್ ನಿರಾಕರಿಸಿತ್ತು. ಇನಾಂದಾರ್ ನಿಧನಕ್ಕೆ ಗಣ್ಯರು ಕಂಬನಿ ಮಿಡಿದಿದ್ದಾರೆ.


ಇನಾಂದಾರ್ 1983ರಲ್ಲಿ ಜನತಾ ಪಕ್ಷದಿಂದ ಕಿತ್ತೂರು ಕ್ಷೇತ್ರದಿಂದ ಸ್ಪರ್ಧಿಸಿ ಮೊದಲ ಬಾರಿ ಗೆಲುವು ಸಾಧಿಸಿದ್ದರು. 1994ರಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು. ಈವರೆಗೆ 9 ಚುನಾವಣೆ ಎದುರಿಸಿದ್ದ ಇನಾಂದಾರ್ 1983, 1985ರಲ್ಲಿ ಜನತಾ ಪಕ್ಷದಿಂದ, 1994, 1999, 2013ರ ಕಾಂಗ್ರೆಸ್ ಪಕ್ಷದಿಂದ ಜಯ ಗಳಿಸಿದ್ದರು. 1989, 2004, 2008 ಹಾಗೂ 2018ರಲ್ಲಿ ಸೋಲು ಕಂಡಿದ್ದರು. ಮಾಜಿ ಮುಖ್ಯಮಂತ್ರಿ ಎಸ್.ಎಂಕೃಷ್ಣ, ಎಸ್.ಬಂಗಾರಪ್ಪ ಸರ್ಕಾರದಲ್ಲಿ ಇವರು ಸಚಿವರಾಗಿದ್ದರು.

ಮೇರಿಯಂಡ ಕೆ. ತಿಮ್ಮಯ್ಯ (ಚಿಮ್ಮ)



ಮೈಸೂರು ಗೋಕುಲಂ ಎರಡನೇ ಹಂತದ ನಿವಾಸಿ ಹಾಗೂ ಹಿರಿಯ ವಕೀಲರಾದ ಮೇರಿಯಂಡ ಕೆ.ತಿಮ್ಮಯ್ಯ (ಚಿಮ್ಮ) ಅವರು ಇಂದು ಬೆಳಗ್ಗೆ ನಿಧನರಾದರು. ಇವರಿಗೆ 91 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಶ್ರೀಮತಿ ಶಾರದ, ಪುತ್ರ, ಸೊಸೆ, ಪುತ್ರಿ, ಮೊಮ್ಮಕ್ಕಳು, ಸಹೋದರ ವಿರಾಜಪೇಟೆಯ ಖ್ಯಾತ ವಕೀಲ ಎಂ.ಕೆ.ಪೂವಯ್ಯ ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ತಿಮ್ಮಯ್ಯ ಅವರ ಪುತ್ರಿ ಅಮೇರಿಕಾದಿಂದ ವಾಪಸ್ಸಾದ ನಂತರ ಏ.27(ಗುರುವಾರ)ರಂದು ಬೆಳಗ್ಗೆ 11 ಗಂಟೆಗೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಹೆಚ್ಚಿನ ಮಾಹಿತಿಗೆ 7760138014, 9986845068 ಸಂಪರ್ಕಿಸಬಹುದು.)

ಮೂಲಿಯಾ ಸರಸ್ವತಿ



ಮೈಸೂರಿನ ಶ್ರೀರಾಂಪುರ 2ನೇ ಹಂತದ ನಿವಾಸಿ ಹಾಗೂ ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್‌ನ ನಿವೃತ್ತ ಸೈಂಟಿಫಿಕ್ ಆಫೀಸರ್ ಮೂಲಿಯಾ ರಾಗವಯ್ಯ ಅವರ ಪತ್ನಿ ಮೂಲಿಯಾ ಸರಸ್ವತಿ (79) ಏ.22ರಂದು ತಮ್ಮ ನಿವಾಸದಲ್ಲಿ ನಿಧನರಾದರು.

ಇವರು ಸಂಗೀತ ವಿದ್ವಾನ್ ದಿವಂಗತ ಸಿ.ಎನ್. ಶಾಸ್ತ್ರಿ ಅವರ ಪುತ್ರಿ ಹಾಗೂ ಸಾಹಿತಿ ದಿವಂಗತ ಪಂಡಿತ ಮೂಲಿಯಾ ತಿಮ್ಮಪ್ಪಯ್ಯ ಅವರ ಸೊಸೆ. ಮೃತರು ಪತಿ, ಪುತ್ರ ಎಂ. ಶ್ರೀರಮಣ, ಸೊಸೆ ಹೆಚ್.ಎಸ್. ಅನುಪಮಾ, ಪುತ್ರಿ ಅರುಣ ಉಪ್ಪಾಲ್, ಅಳಿಯ ಅಭಿಕ್ ಉಪ್ಪಾಲ್, ಮೊಮ್ಮಕ್ಕಳಾದ ಆಯುಷಿ ಭಟ್ ಮೂಲಿಯಾ, ಆಹನಾ ಉಪ್ಪಾಲ್ ಮತ್ತು ಅರವ್ ಉಪ್ಪಾಲ್ ಸೇರಿದಂತೆ ಅಪಾರ ಸ್ನೇಹಿತರು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಏ.23ರಂದು ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಸರೋಜಮ್ಮ



ಮೈಸೂರು ನಗರದ ದೇವಾಂಬ ಅಗ್ರಹಾರ ನಿವಾಸಿ ಲೇಟ್ ಸರ್ದಾರ್ ಎನ್.ನಾಗರಾಜಪ್ಪ ಪತ್ನಿ ಎನ್.ಸರೋಜಮ್ಮ(94) ಅವರು ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಶಾರದಾ ವಿದ್ಯಾಮಂದಿರ ಜಯಚಾಮರಾಜೇಂದ್ರ ಪಿಯು ಕಾಲೇಜು ಹಾಗೂ ಡಿಎವಿ ಶಾಲೆಯ ಅಧ್ಯಕ್ಷರಾದ ಸಚ್ಚಿದಾನಂದ ಮೂರ್ತಿ ಮೃತರ ಪುತ್ರರಲ್ಲಿ ಒಬ್ಬರು. ಅಂತ್ಯಕ್ರಿಯೆ ನಾಳೆ(ಬುಧವಾರ) ಮಧ್ಯಾಹ್ನ 3 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಎ.ಎಂ. ರಾಜೇಶ್ವರಿ



ಮೈಸೂರಿನ ಶ್ರೀರಾಂಪುರ ಬಿಇಎಂಎಲ್ ಬಡಾವಣೆ ನಿವಾಸಿ ಹಾಗೂ ನಿವೃತ್ತ ಪ್ರಿನ್ಸಿಪಾಲ್ ಸಿ. ನಟರಾಜು ಅವರ ಪತ್ನಿ ಎ.ಎಂ.ರಾಜೇಶ್ವರಿ (58) ಮಂಗಳವಾರ ನಿಧನರಾದರು.

ಮೂಲತಃ ಕೊಳ್ಳೇಗಾಲದವರಾದ ಇವರು, ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಅವರ ನೇತೃತ್ವದಲ್ಲಿ ಬೋರೆ ಆನಂದೂರು ಗ್ರಾಮದ ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರು, ಯುವಕರು ಬಿಜೆಪಿ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಚಾಮುಂಡೇಶ್ವರಿ ಕ್ಷೇತ್ರದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ವರುಣದಲ್ಲಿ ಬಿಜೆಪಿ ಅಭ್ಯರ್ಥಿ ಸೋಮಣ್ಣ ಪರ ಪ್ರಚಾರ ನಡೆಸದಂತೆ ಧಮ್ಕಿ; ದೂರು

ಮೈಸೂರು,ಏ.25–ವರುಣ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರ ಪ್ರಚಾರ ನಡೆಸದಂತೆ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೈಸೂರು ಗ್ರಾಮಾಂತರ ಬಿಜೆಪಿ ಕಾನೂನು ಪ್ರಕೋಷ್ಠದ ವತಿಯಿಂದ ಜಿಲ್ಲಾ ಚುನಾವಣಾಧಿಕಾರಿಗೆ ದೂರು ನೀಡಲಾಗಿದೆ.

ಮನ್ನೆಹುಂಡಿ ಗ್ರಾಪಂ ಸದಸ್ಯರೂ ಆದ ಬಿಜೆಪಿ ಕಾರ್ಯಕರ್ತ ಪಿ.ನಾಗರಾಜು (ಏ.24)ರ ರಾತ್ರಿ ವಿ.ಸೋಮಣ್ಣನವರನ್ನು ಸ್ವಾಗತಿಸಲು ಮನ್ನೆಹುಂಡಿ ಗ್ರಾಮದ ಬಳಿ ಕಾಯುತ್ತಿದ್ದರು. ಈ ವೇಳೆ ಗ್ರಾಮದ ಬಸವರಾಜು ಅಲಿಯಾಸ್ ಉದಾರಿ, ಮಹೇಶ್, ಸುರೇಶ್, ಪ್ರಕಾಶ್ ಹಾಗೂ ಪುಟ್ಟನಂಜ ಎಂಬುವರು, ಪಿ.ನಾಗರಾಜು ವಿರುದ್ಧ ಮುಗಿಬಿದ್ದು ಹಲ್ಲೆ ನಡೆಸಿ, ಅವಾಚ್ಯ ಶಬ್ಧಗಳಿಂದ ನಿಂದಿಸಿ, ಸೋಮಣ್ಣ ಪರ ಪ್ರಚಾರ ನಡೆಸದಂತೆ ಬೆದರಿಕೆ ಹಾಕುವ ಮೂಲಕ ಗೂಂಡಾವರ್ತನೆ ತೋರಿದ್ದಾರೆ. ಕ್ಷೇತ್ರದಲ್ಲಿ ಅಶಾಂತಿ ಉಂಟುಮಾಡುವ ಇಂತಹ ಘಟನೆಗಳು ಪುನರಾವರ್ತನೆ ಯಾಗುವ ಸಾಧ್ಯತೆ ಇರುವುದರಿಂದ ಹಲ್ಲೆ ನಡೆಸಿದವರನ್ನು ಚುನಾವಣೆ ಮುಗಿಯು ವವರೆಗೆ ವರುಣ ಕ್ಷೇತ್ರದಿಂದ ಗಡೀಪಾರು ಮಾಡಬೇಕೆಂದು ಪ್ರಕೋಷ್ಠದ ಜಿಲ್ಲಾ ಸಂಚಾಲಕ ವಕೀಲ ರುದ್ರಮೂರ್ತಿ ಆಗ್ರಹಿಸಿದ್ದಾರೆ.

ಧರ್ಮಾಧಾರಿತ ಮೀಸಲಾತಿಯಲ್ಲಿ ಬಿಜೆಪಿಗೆ ನಂಬಿಕೆ ಇಲ್ಲ

ಬಾಗಲಕೋಟೆ, ಏ.25– ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ರದ್ದುಗೊಳಿಸುವ ಬಿಜೆಪಿ ಸರ್ಕಾರದ ನಿರ್ಧಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಸಮರ್ಥಿಸಿಕೊಂಡಿದ್ದಾರೆ.



ಪಕ್ಷವು ಎಂದಿಗೂ 'ಧರ್ಮ ಆಧಾರಿತ ಮೀಸಲಾತಿ'ಯಲ್ಲಿ ನಂಬಿಕೆ ಇಟ್ಟಿಲ್ಲ ಎಂದು ಹೇಳಿದ್ದಾರೆ. ಮೇ 10ರ ವಿಧಾನಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಮೀಸಲಾತಿ ಮರುಸ್ಥಾಪಿಸಲಾಗುವುದು ಎಂಬ ಕಾಂಗ್ರೆಸ್ ನಿಲುವಿಗೆ ಶಾ ಕಿಡಿಕಾರಿದರು.

ಮುಸ್ಲಿಮರಿಗೆ ಧರ್ಮಾಧಾರಿತ ಶೇ ನಾಲ್ಕರಷ್ಟು ಮೀಸಲಾತಿ ಇತ್ತು. ಮತಬ್ಯಾಂಕ್ ರಾಜಕಾರಣಕ್ಕೆ ಮಣಿಯದೆ ಬಿಜೆಪಿ ಸರ್ಕಾರ ಮುಸ್ಲಿಂ ಮೀಸಲಾತಿಯನ್ನು ರದ್ದುಗೊಳಿಸಿದೆ. ಧರ್ಮ ಆಧಾರಿತ ಮೀಸಲಾತಿ ನೀಡಬಾರದೆಂದು ನಾವು ನಂಬುತ್ತೇವೆ ಎಂದು ಜಿಲ್ಲೆಯ ತೇರದಾಳದಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮುಸ್ಲಿಂ ಮೀಸಲಾತಿ ರದ್ದುಗೊಳಿಸಿದ ನಂತರ ಬಿಜೆಪಿ ಸರ್ಕಾರವು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಒಕ್ಕಲಿಗರು ಮತ್ತು ಲಿಂಗಾಯತರಿಗೆ ಮೀಸಲಾತಿಯನ್ನು ಹೆಚ್ಚಿಸಿದೆ. ಎಸ್‌ಸಿ ಮೀಸಲಾತಿಯನ್ನು ಶೇ.15 ರಿಂದ ಶೇ.17ಕ್ಕೆ ಹೆಚ್ಚಿಸುವ ಬಸವರಾಜ ಬೊಮ್ಮಾಯಿ ಸರ್ಕಾರದ ನಿರ್ಧಾರವನ್ನು ಉಲ್ಲೇಖಿಸಿದ ಶಾ, ಎಸ್‌ಸಿ(ಎಡ) ಆಂತರಿಕ ಮೀಸಲಾತಿ ಈಗ ಶೇ.6, ಎಸ್‌ಸಿ(ಬಲ)– ಶೇ.5.5 ಮತ್ತು ಇತರ ಎಸ್‌ಸಿಗಳಿಗೆ ಶೇ.5.5ರಷ್ಟು ಮೀಸಲಾತಿ ಇದೆ ಎಂದು ಉಲ್ಲೇಖಿಸಿದರು.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮುಸ್ಲಿಂ ಮೀಸಲಾತಿಯನ್ನು ಮರುಸ್ಥಾಪಿಸುವುದಾಗಿ ಭರವಸೆ ನೀಡಿರುವ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಾ, ಕರ್ನಾಟಕದಲ್ಲಿ ಸರ್ಕಾರ ರಚಿಸಲು ಯಶಸ್ವಿಯಾದರೆ, ಪಕ್ಷವು ಯಾರ ಮೀಸಲಾತಿಯನ್ನು ರದ್ದುಗೊಳಿಸುತ್ತದೆ ಎಂದು ಕೇಳಿದರು. ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ಮರುಸ್ಥಾಪಿಸಿದರೆ, ಯಾವ ಸಮುದಾಯದ ಮೀಸಲಾತಿ ಕಡಿಮೆಯಾಗುತ್ತದೆ. ಅದು ಒಕ್ಕಲಿಗರು ಅಥವಾ ಲಿಂಗಾಯತರು, ದಲಿತರು, ಪರಿಶಿಷ್ಟ ಪಂಗಡಗಳು ಅಥವಾ ಇತರ ಹಿಂದುಳಿದ ಜಾತಿಗಳು ಎಂಬುದನ್ನು ಸೂಚಿಸಲಿ ಎಂದರು.



ಹುಣಸೂರು ತಾಲೂಕು ಟಿಎಪಿಸಿಎಂಎಸ್ ನಿರ್ದೇಶಕ, ರಾಜ್ಯ ಕೃಷಿಕ್ ಸಮಾಜದ ನಿರ್ದೇಶಕ ಗೆರಸನಹಳ್ಳಿ ರೇವಣ್ಣ, ಹಳೇಬೀಡು ಗ್ರಾಪಂ ಅಧ್ಯಕ್ಷ ಹೆಚ್.ಆರ್.ಮಹೇಶ್, ಉಪಾಧ್ಯಕ್ಷೆ ಗೌರಮ್ಮ ಕೃಷ್ಣಶೆಟ್ಟಿ, ಸದಸ್ಯರಾದ ಮಲ್ಲೇಶ್, ರವಿಕುಮಾರ್, ಸಬ್ಬನಹಳ್ಳಿ ಮಹದೇವ್, ಬೆಟ್ಟದೂರು ಮಹದೇವ್, ಲಕ್ಷ್ಮಿ, ಶೃತಿ, ತಾಯಮ್ಮ ಗೋವಿಂದೇಗೌಡ, ಪವಿತ್ರ, ಲೀಲಾವತಿ ಮಹದೇವಸ್ವಾಮಿ, ಹಳೇಬೀಡು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಕೆಎಂಎಫ್ ನಿರ್ದೇಶಕರು, ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಗ್ರಾಮಸ್ಥರು ಇದ್ದರು.

ಪಿಎಚ್.ಡಿ ಪದವಿ



ಮೈಸೂರು,ಏ.25–ಡಾ.ಎಂ.ಸುಮಿತ್ರ ಅವರ ಮಾರ್ಗದರ್ಶನದಲ್ಲಿ ಕೆ.ವಿ.ರಾಕೇಶ್ ಶರ್ಮ ಅವರು ಸಮಕಾಲೀನ ದಲಿತ ಸಂವೇದನೆಯ ನಾಟಕಗಳಲ್ಲಿ ಸಂಬಂಧಗಳ ಸ್ವರೂಪ ಕುರಿತು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.4.2023 ಬುಧವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 27.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕೆ.ಎಲ್. ಪ್ರಸನ್ನಾಕ್ಷಿ, 6.15 ಗೀತಾರಾಧನ, 6.40 ಅರಿವಿನ ಶಿಖರ, ಗಾಯನ– ಜಿ.ಪುಷ್ಪಲತಾ, ವ್ಯಾಖ್ಯಾನ –ಡಾ.ಬೋರೇಗೌಡ ಚಿಕ್ಕಮರಳಿ, 8.30 ಜನಪದ ರೂಪಕ "ನೆಲದ ಹಾಡು", ಪ್ರಸ್ತುತಿ–ಡಾ.ಮೈಸೂರು ಉಮೇಶ್, 9.00 ವೃತ್ತಿ ಮಾರ್ಗದರ್ಶನ–ಜೀವರಾಸಾಯನ ಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊಫೆಸರ್ ಡಾ.ಕೆ.ವಿ. ಹರೀಶ್ ಪ್ರಶಾಂತ್ ಅವರೊಂದಿಗೆ ಮಾತುಕತೆ, 9.30 ಚುನಾವಣೆ 2023 –ವಿಧಾನಸಭಾ ಕ್ಷೇತ್ರ ಪರಿಚಯ, 10.00 ಹಿಂದೂಸ್ಥಾನಿ ಸಂಗೀತ–ಮಾಧವ್ ಗುಡಿ–ಗಾಯನ, 11.00 ಸ್ಪೆಷಲ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ. ಮೀನಾ

ಮಧ್ಯಾಹ್ನ: 12.00 ಮಿಶ್ರ ಮಾಧುರ್ಯ, 12.30ದೇವರನಾಮ–ವಿದ್ಯಾಭೂಷಣ, ಕೆ.ಎಸ್. ಸುರೇಖ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಮೃಗಾಲಯದಲ್ಲಿ ಪ್ರಯೋಗ", ರಚನೆ–ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 1.00 ರಂಗಗೀತೆಗಳು –ಶಿವ ಜಾಲಂಧರ ನಾಟಕದ ಹಾಡುಗಳು, 3.00 ಲಯ ಸಂಭ್ರಮ–"ತಾಳ ಮತ್ತು ವಿವಿಧ ಲಯ ವಾದ್ಯಗಳ ಪರಿಚಯ", ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ –ಸ್ತ್ರೀ ಚೇತನ. ಭಾಗವಹಿಸುವವರು ರೇಲ್ವೇ ಪೋರ್ಟರ್ ರಿಜ್ವಾನಾ, 5.05 ಮಿಶ್ರ ಮಾಧುರ್ಯ, 6.55 ಕೃಷಿರಂಗ–ಕಿಸಾನ್‌ವಾಣಿ, ಟೊಮ್ಯಾಟೋ ಬೆಳೆಯಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕುರಿತು ಡಾ. ಬಿ. ಪಂಪನಗೌಡ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ– ಅಜಯ್ ಪೋಹಂಕರ್–ಗಾಯನ, 10.00 ಜನಪದ ಸಂಗೀತ–ಬಸವಯ್ಯ ಮತ್ತು ವೃಂದ

- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 99ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 6 ಗಂಟೆಗೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಿಯರಿಗೆ ಪ್ರಾಥಕಾಲ ಪ್ರಥಮ ಅಭಿಷೇಕ, ಬೆಳಗ್ಗೆ 8.30ಕ್ಕೆ ಶ್ರೀ ನಾಗಲಕ್ಷ್ಮಿ ದೇವಸ್ಥಾನದಿಂದ ಹಾಲಿನ ಕೊಡ ಮೆರವಣಿಗೆ ಮೂಲಕ ಭಕ್ತಾದಿಗಳಿಂದ ಹಾಲಿನ ಅಭಿಷೇಕ, ಬೆಳಗ್ಗೆ 11ಕ್ಕೆ ದೇವಸ್ಥಾನದಿಂದ ಬೆಟ್ಟದ ಪಾದಕ್ಕೆ ಹೊರಟು ಅಲ್ಲಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮೆರವಣಿಗೆ, ಮಧ್ಯಾಹ್ನ 1ಕ್ಕೆ ದೇವಸ್ಥಾನದಿಂದ ಶ್ರೀ ಕೋಟೆ ಮಾರಿಯಮ್ಮನ ದೇವಸ್ಥಾನಕ್ಕೆ ಹೊರಟು ಶ್ರೀ ಶಕ್ತಿ ಕರಗ ಮತ್ತು ಶ್ರೀ ಮಾರಿಯಮ್ಮನವರ ಕರಗ ಮೆರವಣಿಗೆ, ಸಂಜೆ 4ಕ್ಕೆ ಕರಗವು ದೇವಸ್ಥಾನದಿಂದ ಹೊರಟು ಪ್ರಥಮ ಪೂಜೆ ಶ್ರೀ ಮಡಿವಾಳರ ದೇವಸ್ಥಾನದಲ್ಲಿ ಸ್ವೀಕರಿಸಿ, ರಾತ್ರಿ ದೇವಸ್ಥಾನಕ್ಕೆ ತೆರಳಿದ ನಂತರ ಮಹಾಮಂಗಳಾರತಿ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸ ಮುರಳೀಧರದಾಸ್ ಅವರಿಂದ ಶ್ರೀನಿವಾಸ ಕಲ್ಯಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾದರೆ ರಾಜ್ಯದ ಜನ ನೆಮ್ಮದಿಯಿಂದಿರಲು ಸಾಧ್ಯ

ಜೆಡಿಎಸ್ ಕಾರ್ಯಕರ್ತರ ಬೃಹತ್ ಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿಶ್ವಾಸ

ಪಿರಿಯಾಪಟ್ಟಣ, ಏ.25– ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ಖಚಿತ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ತಿಳಿಸಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರು ರೈತರ ಅನುಕೂಲಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಹೀಗಾಗಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡಲು ಶಾಸಕ ಕೆ.ಮಹದೇವ್ ಅವರನ್ನು ಗೆಲ್ಲಿಸಿ ಎಂದು ಹೇಳಿದರು.

ಕಳೆದ ಬಾರಿ ಕಾಂಗ್ರೆಸ್ ಪಕ್ಷ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿ ನಂತರ ಅವರನ್ನು ನಡು ನೀರಿನಲ್ಲಿ ಕೈ ಬಿಟ್ಟರು. ಹೀಗಾಗಿ ಈ ಚುನಾವಣೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸುವುದು ಖಚಿತ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರಣಾಳಿಕೆಯಲ್ಲಿರುವ ಎಲ್ಲಾ ಯೋಜನೆಗಳನ್ನು ಜಾರಿಗೆ ತಂದು ರೈತರು, ಮಹಿಳೆಯರು, ಕಾರ್ಮಿಕರು ಹಾಗೂ ದುಡಿಯುವ ವರ್ಗದ ಜನರು ನೆಮ್ಮದಿಯಿಂದ ಜೀವನ ನಡೆಸಲು ಯೋಜನೆ ರೂಪಿಸಲಿದೆ ಎಂದರು.



ಶಾಸಕ ಕೆ.ಮಹದೇವ್ ಅವರು ಪಿರಿಯಾಪಟ್ಟಣವನ್ನು ಅಭಿವೃದ್ಧಿಗೊಳಿಸಿದ್ದು, ಅವರ ಅಭಿವೃದ್ಧಿ ಕಾರ್ಯದ ಬಗ್ಗೆ ಇಲ್ಲಿನ ಜನತೆ ನನಗೆ ಮಾಹಿತಿ ನೀಡುತ್ತಿದ್ದರು. ಕ್ಷೇತ್ರದ ಜನತೆ ಈ ಬಾರಿ ಯಾವುದೇ ಗೊಂದಲಕ್ಕೆ ಒಳಗಾಗದೇ ಮಹದೇವ್ ಅವರನ್ನು ಗೆಲ್ಲಿಸಿದರೆ ತಾಲೂಕು ಇನ್ನೂ ಹೆಚ್ಚಿನ ರೀತಿ ಅಭಿವೃದ್ಧಿ ಹೊಂದಲಿದೆ. ಮಹದೇವ್ ಒಬ್ಬ ಒಳ್ಳೆಯ ಕೆಲಸಗಾರ. ಆತನಿಗೆ ಪಕ್ಷದಲ್ಲಿ ಉನ್ನತ ಹುದ್ದೆ ನೀಡಲಾಗುವುದು ಎಂದರು.

ಶಾಸಕ ಕೆ.ಮಹದೇವ್ ಮಾತನಾಡಿ, ಮಾಜಿ ಪ್ರಧಾನಿ ದೇವೇಗೌಡರು ತಮ್ಮ ಇಳಿ ವಯಸ್ಸಿನಲ್ಲೂ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಹಗಲು ರಾತ್ರಿ ಶ್ರಮಿಸುತ್ತಿದ್ದಾರೆ. ಹೀಗಾಗಿ ಈ ಬಾರಿ ನನ್ನನ್ನು ಅಧಿಕ ಮತಗಳಿಂದ ಗೆಲ್ಲಿಸುವ ಮೂಲಕ ಮಾಜಿ ಸಿಎಂ ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕು ಎಂದರು. ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿದರು. ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಗೋವಿಂದೇಗೌಡ, ತಾಪಂ ಮಾಜಿ ಸದಸ್ಯ ಐಲಾಪುರ ರಾಮು, ಪುರಸಭಾಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯರಾದ ಕೆ.ಎಸ್.ಮಂಜುನಾಥ್, ಚಂದ್ರ, ಮೈಮುಲ್ ನಿರ್ದೇಶಕ ರಾಜೇಂದ್ರಪ್ಪ, ಜೆಡಿಎಸ್ ಮುಖಂಡ ಗಗನ್, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ ಜಿಲ್ಲಾ ಬ್ಯಾಂಕ್ ನಿರ್ದೇಶಕ ರವಿ ಇತರರು ಉಪಸ್ಥಿತರಿದ್ದರು.

ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೋಮಶೇಖರ್ ಮತಯಾಚನೆ



ಮೈಸೂರು, ಏ.25(ಜಿಎ)–ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಾರ್ಡ್ ನಂ.65ರಲ್ಲಿ ಮಂಗಳವಾರ ತಮ್ಮ ಬೆಂಬಲಿಗರೊಂದಿಗೆ ಮತಯಾಚಿಸಿದರು.

ಈ ಸಂದರ್ಭದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಎಂ.ಕೆ. ಸೋಮಶೇಖರ್, ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳಿಂದ ಯಾವುದೇ ಅಭಿವೃದ್ಧಿಯಾಗಿಲ್ಲ. ಮತಯಾಚನೆ ಮಾಡುವಾಗ ಮತದಾರರೇ ಅವರ ಸಮಸ್ಯೆಗಳನ್ನು ಹೇಳುತ್ತಿದ್ದು, ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಹಣಾಹಣಿ ಇದ್ದು, ಈ ಬಾರಿ ಬದಲಾವಣೆ ಬಯಸಿದ್ದಾರೆ. ನನ್ನ ಪರ ಕಾರ್ಯಕರ್ತರು ಪ್ರಚಾರ ಮಾಡುತ್ತಿದ್ದು, ಸ್ಟಾರ್ ಪ್ರಚಾರಕರು ಬರುವ ನಿರೀಕ್ಷೆಗಳಿವೆ. ಈ ಬಗ್ಗೆ ನಾಯಕರು ಚರ್ಚೆ ನಡೆಸುತ್ತಿದ್ದಾರೆ ಎಂದರು. ಈ ವೇಳೆ ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಮಹಿಳಾ ಮುಖಂಡರು ಇನ್ನಿತರರಿದ್ದರು.

ಕೆ.ಆರ್.ನಗರ, ಪಿರಿಯಾಪಟ್ಟಣ ಕ್ಷೇತ್ರಗಳಿಗೆ ಸಾಮಾನ್ಯ ವೀಕ್ಷಕರ ನೇಮಕ

ಮೈಸೂರು, ಏ.25– ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2023ರ ಸಂಬಂಧ ಚುನಾವಣಾ ಆಯೋಗವು ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಗೆ ಸಾಮಾನ್ಯ ವೀಕ್ಷಕರನ್ನು ನೇಮಕ ಮಾಡಿದೆ.

ಈ ಸಂಬಂಧ 210 ಪಿರಿಯಾಪಟ್ಟಣ ಹಾಗೂ 211 ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರಗಳಿಗೆ ಯಶು ರುಸ್ತುಂ ಅವರನ್ನು ಸಾಮಾನ್ಯ ವೀಕ್ಷಕರನ್ನಾಗಿ ನೇಮಕ ಮಾಡಿದ್ದು, ಸಾರ್ವಜನಿಕರು ಸದರಿ ಕ್ಷೇತ್ರಗಳ ಪಿರಿಯಾಪಟ್ಟಣ ಚುನಾವಣಾ ಸಂಬಂಧ ದೂರುಗಳನ್ನು ನೀಡಲು ದೂ.ಸಂ: 7349776593 ಹಾಗೂ ಕೆ.ಆರ್.ನಗರ ಚುನಾವಣಾ ಸಂಬಂಧ ದೂ.ಸಂ: 7795662991ಗೆ ಕರೆ ಮಾಡಬಹುದು.

ಬೆಳಗ್ಗೆ 11ರಿಂದ 1 ಗಂಟೆವರೆಗೆ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದವರು ಪಿರಿಯಾಪಟ್ಟಣ ಐಬಿಯಲ್ಲಿ ಮತ್ತು ಕೆ.ಆರ್.ನಗರ ಕ್ಷೇತ್ರದವರು ಕೆ ಆರ್ ನಗರ ಐಬಿಯಲ್ಲಿ ಸಾಮಾನ್ಯ ವೀಕ್ಷಕರನ್ನು ನೇರವಾಗಿ ಭೇಟಿ ಮಾಡಬಹುದು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಕಾರ್ಯನಿರ್ವಹಿಸಿ: ದಿಲ್‌ರಾಜ್‌ಸಿಂಗ್



ಮೈಸೂರು,ಏ.25–ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನಿರ್ವಹಣೆ ಹಾಗೂ ಚುನಾವಣೆ ಖರ್ಚು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ವೀಕ್ಷಕರಾದ ದಿಲ್‌ರಾಜ್ ಸಿಂಗ್ ಸೂಚನೆ ನೀಡಿದರು.

ಚುನಾವಣೆ ಮಾಹಿತಿ ನೀಡುವ ನಿಟ್ಟಿನಲ್ಲಿ ಕ್ಷೇತ್ರದ ಚುನಾವಣಾಧಿಕಾರಿ ಕಮಲಾಬಾಯಿ ಹಾಗೂ ಸಹಾಯಕ ಚುನಾವಣಾಧಿಕಾರಿ ಬಿ.ಎನ್.ಗಿರೀಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವೀಕ್ಷಕರು ಮತದಾನ ಪ್ರಕ್ರಿಯೆ ಹಾಗೂ ವೆಚ್ಚದ ನಿರ್ವಹಣೆಯ ಮಾಹಿತಿ ನೀಡಿದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಒಟ್ಟು 14 ಅಭ್ಯರ್ಥಿಗಳಿದ್ದು ಅಭ್ಯರ್ಥಿಗಳ ಕರಪತ್ರದ ವೆಚ್ಚದ ಕುರಿತು ತಿಳಿದುಕೊಳ್ಳಬೇಕು. ಅಭ್ಯರ್ಥಿಗಳಿಗೆ ನೀಡುವ 3 ರಿಜಿಸ್ಟರ್‌ಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕು ಎಂದು ಹೇಳಿದರು.

ಈ ಬಾರಿ ಅಂಚೆ ಮತದಾನಕ್ಕೆ ಅವಕಾಶ ನೀಡಿದ್ದು 80 ವರ್ಷ ಮೇಲ್ಪಟ್ಟ ಮತದಾರರಿಗೆ ಮನೆಯಿಂದಲೇ ಮತದಾನ ಮಾಡುವ ಅವಕಾಶ ನೀಡಲಾಗಿದೆ. ಹಾಗಾಗಿ ಪಕ್ಷಗಳು ಅಥವಾ ಅಭ್ಯರ್ಥಿ ಸಾಮಾನ್ಯ ಮತದಾರರನ್ನು ವಾಹನದಲ್ಲಿ ಮತಗಟ್ಟೆಗೆ ಕರೆತಂದರೆ ಆ ವಾಹನ ಜಪ್ತಿ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಚುನಾವಣಾ ಅಧಿಕಾರಿಗಳು ಬೂತ್ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಚುನಾವಣಾ ವೆಚ್ಚ 40 ಲಕ್ಷಕ್ಕೆ ಮಿತಿ: ಡಿಸಿ





ಮೈಸೂರು, ಏ.25– ಸಾರ್ವತ್ರಿಕ ವಿಧಾನ ಸಭೆ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಗರಿಷ್ಠ 40 ಲಕ್ಷದವರೆಗೆ ಚುನಾವಣಾ ವೆಚ್ಚ ಮಾಡಲು ಅವಕಾಶವಿದೆ. ಪ್ರತಿ ಅಭ್ಯರ್ಥಿಯು ಚುನಾವಣೆಯಲ್ಲಿ ತಾವು ಮಾಡುವ ವೆಚ್ಚವನ್ನು ತಮ್ಮ ಖರ್ಚು ವೆಚ್ಚ ಖಾತೆಯ ಮೂಲಕ ಮಾಡಿ ಲೆಕ್ಕ ಇಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಹಮ್ಮಿಕೊಂಡಿದ್ದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವೆಚ್ಚ ವೀಕ್ಷಕರು ಚುನಾವಣಾ ವೆಚ್ಚವನ್ನು 3 ಬಾರಿ ಪರಿಶೀಲನೆ ಮಾಡುತ್ತಾರೆ. ಒಬ್ಬ ಅಭ್ಯರ್ಥಿ 40 ಲಕ್ಷ ವೆಚ್ಚ ಮಾಡಲು ಮಿತಿ ಇರುತ್ತದೆ. 11 ವಿಧಾನಸಭಾ ಕ್ಷೇತ್ರಗಳಿಗೆ 9 ವೆಚ್ಚ ವೀಕ್ಷಕರು ಇದ್ದಾರೆ. ಜಿಲ್ಲೆಗೆ ಸಾಮಾನ್ಯ ವೀಕ್ಷಕರು, ವೆಚ್ಚ ವೀಕ್ಷಕರು ಹಾಗೂ ಪೊಲೀಸ್ ವೀಕ್ಷಕರು ಇರುತ್ತಾರೆ ಎಂದರು.

ಅಭ್ಯರ್ಥಿ ನಾಮಪತ್ರ ಸಲ್ಲಿಸುವ ಮುಂಚೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತಮ್ಮ ಖಾತೆಯನ್ನು ತೆರೆದಿರಬೇಕು. 10 ಸಾವಿರಕ್ಕಿಂತ ಹೆಚ್ಚಿನ ಖರ್ಚು ಮಾಡಲು ಚೆಕ್, ಗೂಗಲ್ ಪೇ ಮೂಲಕವೇ ತಮ್ಮ ಖಾತೆಯ ಮೂಲಕವೇ ಮಾಡಬೇಕು. ನಾಮಪತ್ರ ಸಲ್ಲಿಸಿದ ದಿನದಿಂದ ಚುನಾವಣಾ ಫಲಿತಾಂಶ ಬರುವವರೆಗೆ ವೆಚ್ಚವನ್ನು ಲೆಕ್ಕ ಹಾಕಲಾಗುತ್ತದೆ. ಅಭ್ಯರ್ಥಿಗಳು ಮಾಡಿರುವ ಖರ್ಚು ವೆಚ್ಚಗಳನ್ನು ಅಭ್ಯರ್ಥಿಗಳು ಚುನಾವಣೆ ಮುಗಿದ 30 ದಿನಗಳ ಒಳಗೆ ನೀಡದಿದ್ದರೆ 3 ವರ್ಷದವರೆಗೆ ಅನರ್ಹನಾಗುತ್ತಾನೆ ಎಂದರು.

ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳು ಯಾರಿಂದ ಆದರೂ ದೇಣಿಗೆ ಪಡೆದರೂ ಅದನ್ನು ತಮ್ಮ ಅಕೌಂಟ್‌ಗೆ ತೆಗೆದುಕೊಳ್ಳಬೇಕು. ಯಾವುದೇ ವ್ಯಕ್ತಿಗೆ 10 ಸಾವಿರಕ್ಕಿಂತ ಹೆಚ್ಚಿನ ನಗದನ್ನು ಪೂರ್ಣ ಚುನಾವಣಾ ಪ್ರಕ್ರಿಯೆ ಅವಧಿಯಲ್ಲಿ ನೀಡುವಂತಿಲ್ಲ ಎಂದು ಮಾಹಿತಿ ನೀಡಿದರು.

ಎಲ್ಲಾ ವೆಚ್ಚ ವೀಕ್ಷಕರು ಆಡಳಿತ ತರಬೇತಿ ಸಂಸ್ಥೆಯ ಕಬಿನಿ ಗೆಸ್ಟ್ ಹೌಸ್‌ನಲ್ಲಿ ಇರುತ್ತಾರೆ ತಮಗೆ ಮಾಹಿತಿ ಬೇಕಿದ್ದರೆ ಸಂಪರ್ಕಿಸಬಹುದು. ಅಭ್ಯರ್ಥಿಯು ಸ್ವತಃ ನಿಧಿಯಿಂದ ಹಣ ಖರ್ಚು ಮಾಡಲು ತಮ್ಮ ಹಣವನ್ನು ಚುನಾವಣೆಗೆ ತೆರೆದಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಿ ನಂತರ ಖರ್ಚು ಮಾಡಬೇಕು. ಚುನಾವಣಾ ವೆಚ್ಚಕ್ಕೆ ಸಂಬಂದಿಸಿದ ಮಾಹಿತಿಗಳು ಆಂಗ್ಲ ಭಾಷೆಯಲ್ಲಿ ಇದ್ದು, ಇದನ್ನು ಆದಷ್ಟು ಕನ್ನಡ ಭಾಷೆಯಲ್ಲಿ ಒದಗಿಸಲು ಪ್ರಯತ್ನ ಮಾಡಲಾಗುವುದು. 7 ಎ ಅಂತಿಮವಾಗುತ್ತಿದ್ದು ಸೀರಿಯಲ್ ಸಂಖ್ಯೆಯನ್ನು ಅಭ್ಯರ್ಥಿಗಳಿಗೆ ನೀಡಲಾಗುವುದು. ಕಾರ್ಯಾಗಾರದಲ್ಲಿ ವೆಚ್ಚ ವೀಕ್ಷಕರು, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಮ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ರಮೇಶ ಜಾರಕಿಹೊಳಿ ಸೋಲಿಸಲು ಕಾಂಗ್ರೆಸ್ ಜೊತೆ ಜೆಡಿಎಸ್ ಮೈತ್ರಿ

ಬೆಳಗಾವಿ, ಏ.25– ಬೆಳಗಾವಿ ಜಿಲ್ಲೆಯ ಗೋಕಾಕ್ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಚಂದನ್ ಗಿಡ್ಡನವರ್ ಪಕ್ಷದ ವರಿಷ್ಠರಿಗೇ ತಿಳಿಯದಂತೆ ನಾಮಪತ್ರ ಹಿಂಪಡೆದಿದ್ದಾರೆ.

ಮಾಜಿ ಸಚಿವ ಮತ್ತು ಬಿಜೆಪಿ ನಾಯಕ ರಮೇಶ್ ಜಾರಕಿಹೊಳಿ ವಿರುದ್ಧ ಚಂದನ್ ಕಾಂಗ್ರೆಸ್ ಜೊತೆ ಕೈಜೋಡಿಸಿದ್ದಾರೆ. ಈ ಬೆಳವಣಿಗೆ ನಂತರ ಜೆಡಿಎಸ್ ಅಭ್ಯರ್ಥಿಯನ್ನು ಪಕ್ಷದಿಂದ ಉಚ್ಚಾಟಿಸಲು ನಿರ್ಧರಿಸಿದೆ. ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಬದ್ಧ ವೈರಿಯಾದ ರಮೇಶ್ ಜಾರಕಿಹೊಳಿ ಬಿಜೆಪಿ ಅಭ್ಯರ್ಥಿ. ಜೆಡಿಎಸ್ ಅಭ್ಯರ್ಥಿಯು ಕಣದಿಂದ ಹಿಂದೆ ಸರಿದಿರುವುದರಿಂದ ಈಗ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಮತ ಹಂಚಿಕೆಯಾಗುವ ನಿರೀಕ್ಷೆಯಿದ್ದ ಅಲ್ಪಸಂಖ್ಯಾತರ ಮತಗಳು ಈಗ ಮತ್ತೆ ಹಳೆಯ ಪಕ್ಷಕ್ಕೆ ಒಲಿದು ಬರಲಿವೆ. ಜಾರಕಿಹೊಳಿ ಈಗ ಹಿಂದೂ ಮತಗಳ ಧ್ರುವೀಕರಣಕ್ಕೆ ಶ್ರಮಿಸಬೇಕಾಗಿದೆ. ಮಹಾಂತೇಶ ಕಡಾಡಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಗಿಡ್ಡನವರ್ ಈಗಾಗಲೇ ಕಾಂಗ್ರೆಸ್‌ಗೆ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. ಲಿಂಗಾಯತ ಮತಗಳ ಪ್ರಾಬಲ್ಯವಿರುವ ಕ್ಷೇತ್ರದಲ್ಲಿ ಜಾರಕಿಹೊಳಿ ಅವರನ್ನು ಸೋಲಿಸಲು ಡಿಕೆಶಿ ಸರ್ವ ಪ್ರಯತ್ನ ನಡೆಸುತ್ತಿರುವುದರಿಂದ ಗೋಕಾಕ್ ಇದೀಗ ಹೈವೋಲ್ಟೇಜ್ ಸ್ಪರ್ಧೆಗೆ ಸಾಕ್ಷಿಯಾಗಿದೆ.

PUBLIC NOTICE

This is to inform the general public at large that. our clients Smt.Malathi.G.Pathange W/o Late P.Gopalakrishna Rao, Sri. Vishal Pathange G. S/o Late P. Gopalakrishna Rao, Smt. Ruthvi K. Narang D/o Late P.Gopalakrishna Rao residing at Flat No.110, Nagarjuna Princess Manor, No.2628. KRS Road. V.V.Mohalla, Mysuru have filed a suit against Sri P.J. Jaganatha Rao, S/o Late Jaya Rao, Sri P.J. Dayashankar Rao, S/o Late Jaya Rao, Sri P.J. Rajashekar Rao, S/o Late Jaya Rao & Smt. Bharathi Rajashekar W/o P.J. Rajashekar Rao all are residing at Mysuru in O.S. No. 131 of 2014 on the file of Principal Senior Civil Judge, at Mysuru with respect to below mentioned schedule properties and the Hon'ble court was pleased to pass interim order of Temporary Injunction against the aforesaid persons as not to alienate the below mentioned properties till the disposal of the suit and the aforesaid suit is still pending awaiting adjudication.

Now it is learnt from our client that, the aforesaid persons by suppressing the true facts of pendency of the suit are trying to alienate or to create fresh charges against the below mentioned schedule properties by entering into Agreement of Sale / Joint Development Agreement etc., just to deprive and defraud our client's right over the schedule properties.

As such, it is hereby cautioned the general public/any company / institutions / any body corporate etc.. not to deal or enter into any type of transaction/s with the aforesaid persons with respect to below mentioned schedule properties. if any persons do so they will be doing at their own risk and peril as the same is illegal and does not create any legal right / binding in whatsoever manner against our clients.

SCHEDULE :

Item No. 1: All that piece and parcel of the commercial building bearing No. 1979, Dhanvanthri Road Cross, Near Rajkamal Talkies Road, Mysore-570001, wherein the aforesaid persons are running a Hotel under the name and style "S.K. Residency" (formerly Hotel Chalukya), bounded on: East by: Private Property ; West by: Road; North by: Road ; South by: Road.

Item No. 2: All that piece and parcel of the residential property bearing No. 39, 1st Main, Gokulam III Stage. Mysore-570002, measuring 80 feet X 90 feet, totally measuring 7,200 square feet;

Item No. 3: All that piece and parcel of the land measuring 1 acre 25 guntas comprised in Sy.No. 337/2, situated at Bogadi Village, Kasaba Hobli, Mysore Taluk and District, bounded on: East by: Sy. No. 336/2 ; West by: Sy. No. 53/1 ; North by: Land of Chamundaiah; South by: Gaddige Road.

Item No. 4: All that piece and parcel of the land measuring 5 acres 25 guntas comprised in Sy.No.25, situated at Kammannapura Village. Jayapura Hobli, Myosre Taluk and District, bounded on: East by: Property of Byanna ; West by: Property of Hemanth ; North by: Road ; South by: Property of Mahadevagowda.

Item No. 5: All that piece and parcel of the land measuring 2 acres 25 guntas comprised in Sy.No.53/2, situated at Bogadi Village, Kasaba Hobli, Mysore Taluk and District, bounded on:

East by: Land bearing Sy.No. 337/2 ; West by: Land bearing Sy. No. 53/2 ; North by: Land of Chamundaiah ; South by: Gaddige Road.

Item No. 6: All that piece and parcel of the land measuring 2 acres 25 guntas comprised in Sy.No.53/2, situated at Bogadi Village, Kasaba Hobli, Mysore Taluk and District, bounded on: East by: Land bearing Sy. No. 53/1 ; West by: Land bearing Sy.No. 53/3 ; North by: Land Chamundaiah ; South by: Gaddige Road.

Item No. 7: All that piece and parcel of the land measuring 2 acres 25 guntas comprised in Sy.No.53/3, situated at Bogadi Village, Kasaba Hobli, Mysore Taluk and District, bounded on: East by: Land bearing Sy.No. 53/2 ; West by: Cart Road ; North by: Land bearing Sy.No. 54/1 ; South by: Gaddige Road.

Item No. 8: All that piece and parcel of the land measuring 1 acre 10 guntas comprised in Sy.No.54/1, situated at Bogadi Village, Kasaba Hobli, Mysore Taluk and District, bounded on:

East by: Land of Chamundaiah ; West by: Cart Road ; North by: Remaining portion of Sy.No. 54 ; South by: Land bearing Sy.No. 53/3.

Sd/- P. Bharathishankar, B.Sc., LL.B, D. Arun, MBA., LL.B,
Advocates, #204, Meridian apartments, 1039, Geetha Road,
Chamarajapuram, Mysuru-570005. Mobile No. 9845790472

Date: 24.04.2023 Mysuru

ಮಂಡ್ಯ ಬಳಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಐವರು ಜಲಸಮಾಧಿ

ಮಂಡ್ಯ,ಏ.25–ವಿಶ್ವೇಶ್ವರಯ್ಯ ನಾಲೆಯಲ್ಲಿ ಆಡಲು ಹೋದ ಐವರು ಜಲಸಮಾಧಿಯಾದ ದಾರುಣ ಘಟನೆ ತಾಲೂಕಿನ ದೊಡ್ಡಕೊತ್ತಗೆರೆ ಗ್ರಾಮದಲ್ಲಿ ಸಂಭವಿಸಿದೆ. ಬೆಂಗಳೂರಿನ ನೀಲಸಂದ್ರದ ನಿವಾಸಿಗಳಾದ ಶಕೀಲ್ ಅಹಮ್ಮದ್ ಅವರ ಪತ್ನಿ ಅನಿಶ್ ಬೇಗಂ(34), ಇವರ ಪುತ್ರಿ ಮೆಹ್ತಾಬ್(10), ಅಮಾನುಲ್ಲಾ ಅವರ ಪುತ್ರಿಯರಾದ ತಸ್ಮಿಯಾ(23), ಅತಿಕಾ ಬೇಗಂ(22), ಪುತ್ರ ಅಸ್ವಾಕ್ ಅಹಮ್ಮದ್(28) ದುರಂತ ಸಾವಿಗೀಡಾದವರು.



ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಬೆಂಗಳೂರಿನ ನೀಲಸಂದ್ರದ ಒಂದೇ ಕುಟುಂಬದ 15ಕ್ಕೂ ಹೆಚ್ಚು ಮಂದಿ ಮಂಡ್ಯ ತಾಲೂಕಿನ ಹಲ್ಲೇಗೆರೆ ಗ್ರಾಮದ ಗೌಸ್ ಪಾಷಾ ಎಂಬುವರ ಮನೆಗೆ ಆಗಮಿಸಿದ್ದರು. ಮಂಗಳವಾರ ಮಧ್ಯಾಹ್ನ 2 ಕಾರುಗಳಲ್ಲಿ ಎಲ್ಲರೂ ಮನೆಯಿಂದ ಹೊರಟು, ದೊಡ್ಡಕೊತ್ತಗೆರೆ ಗ್ರಾಮದ ಬಂದು, ವಿಶ್ವೇಶ್ವರಯ್ಯ ನಾಲೆಯ ನೀರಿನಲ್ಲಿ ಆಡಲು ಮುಂದಾಗಿದ್ದಾರೆ. ಈ ವೇಳೆ ಮೆಹ್ತಾಬ್ ಸುಳಿಗೆ ಸಿಲುಕಿದ್ದಾಳೆ. ಆಕೆಯನ್ನು ರಕ್ಷಿಸಲು ಹೋದ ತಾಯಿ ಅನಿಶ್ ಬೇಗಂ, ತಸ್ಮೀಯ, ಅತಿಕಾ ಹಾಗೂ ಅಸ್ವಾಕ್ ಅಹಮ್ಮದ್ ಒಬ್ಬರಾದ ಮೇಲೆ ಒಬ್ಬರು ನೀರಿನ ಸೆಳತಕ್ಕೆ ಬಲಿಯಾಗಿದ್ದಾರೆ. ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ನೀರು ಪಾಲಾದ ಐವರ ಶರೀರವನ್ನು ನಾಲೆಯಿಂದ ಹೊರ ತೆಗೆದರು. ಮಂಡ್ಯ ಡಿವೈಎಸ್‌ಪಿ ಓಂಪ್ರಕಾಶ್, ಬಸರಾಳು ಎಸ್‌ಐ ಶೇಷಾದ್ರಿಕುಮಾರ್, ಕೆರೆಗೋಡು ಎಸ್‌ಐ ರಘು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಬಸರಾಳು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಜಾಬ್ ಮಾಜಿ ಸಿಎಂ ಪ್ರಕಾಶ್ ಸಿಂಗ್ ಬಾದಲ್ ನಿಧನ

ನವದೆಹಲಿ: ಪಂಜಾಬ್‌ನ ಮಾಜಿ ಮುಖ್ಯಮಂತ್ರಿ, ಶಿರೋಮಣಿ ಅಕಾಲಿದಳದ ಸಂಸ್ಥಾಪಕ ಪ್ರಕಾಶ್ ಸಿಂಗ್ ಬಾದಲ್ ಮಂಗಳವಾರ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು. ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಅವರನ್ನು ಏ.21ರಂದು ಮೊಹಾಲಿಯ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಐದು ಬಾರಿ ಪಂಜಾಬ್ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದ ಪ್ರಕಾಶ್ ಸಿಂಗ್ ಬಾದಲ್ ಅವರು ಕಳೆದ ವರ್ಷ ನಡೆದ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಹಿರಿಯ ಅಭ್ಯರ್ಥಿಯಾಗಿದ್ದರು. ಕಳೆದ ವರ್ಷ ಜೂನ್‌ನಲ್ಲಿಯೇ ಅನಾರೋಗ್ಯಕ್ಕೀಡಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಕಳೆದ ವರ್ಷ ಅವರಿಗೆ ಕೋವಿಡ್–19 ಸೋಂಕು ಸಹ ತಗುಲಿತ್ತು.

ಬಾದಲ್ ನೇತೃತ್ವದ ಶಿರೋಮಣಿ ಅಕಾಲಿ ದಳ ಪಂಜಾಬ್‌ನಲ್ಲಿ ಎನ್‌ಡಿಎ ಮಿತ್ರಪಕ್ಷವಾಗಿತ್ತು.



2020ರಲ್ಲಿ ಕೇಂದ್ರ ಸರ್ಕಾರ ಮೂರು ಕೃಷಿ ಮಸೂದೆಗಳನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದಾಗ ಅದನ್ನು ಪ್ರತಿಭಟಿಸಿ ಎನ್‌ಡಿಎ ಮೈತ್ರಿಕೂಟದಿಂದ ಹೊರನಡೆದಿತ್ತು.

ಹಲವು ದಾಖಲೆ: ಬಾದಲ್ ಅವರು ರಾಜಕೀಯ ಇತಿಹಾಸದಲ್ಲಿ ಹಲವು ದಾಖಲೆಗಳನ್ನು ಮಾಡಿದ್ದಾರೆ. 1952ರಲ್ಲಿ ಅವರು ಕಿರಿಯ ಸರಪಂಚ್ ಆಗಿ ಆಯ್ಕೆಯಾಗಿದ್ದರು. ಆಗ ಅವರು ಬಾದಲ್ ಗ್ರಾಮದಿಂದ ಚುನಾಯಿತರಾಗಿದ್ದರು. 1970ರಲ್ಲಿ ಅವರು ರಾಜ್ಯದ ಅತ್ಯಂತ ಕಿರಿಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಆಗ ಅವರಿಗೆ 43 ವರ್ಷ ವಯಸ್ಸಾಗಿತ್ತು. 2012ರಲ್ಲಿ ಮುಖ್ಯಮಂತ್ರಿಯಾದಾಗ ಪಂಜಾಬ್‌ನ ಅತ್ಯಂತ ಹಿರಿಯ ಮುಖ್ಯಮಂತ್ರಿ ಎಂಬ ದಾಖಲೆಯನ್ನೂ ನಿರ್ಮಿಸಿದ್ದರು. ಆಗ ಅವರ ವಯಸ್ಸು 85 ವರ್ಷ ಆಗಿತ್ತು. ಪಂಜಾಬ್ ಪ್ರಾಂತ್ಯದ ಅಬುಲ್ ಖುರಾನಾದಲ್ಲಿ 1927ರ ಡಿಸೆಂಬರ್ 8ರಂದು ಬಾದಲ್ ಅವರು ಜನಿಸಿದ್ದರು. ಅವರು 1970ರಿಂದ 71, 1977ರಿಂದ 80, 1997ರಿಂದ 2002 ಹಾಗೂ 2007ರಿಂದ 2012 ಮತ್ತು 2012ರಿಂದ 2017ರವರೆಗೆ 5 ಬಾರಿ ಪಂಜಾಬ್ ಮುಖ್ಯಮಂತ್ರಿಯಾಗಿದ್ದರು. ಒಂದು ಬಾರಿ ಲೋಕಸಭೆಯ ಸದಸ್ಯರೂ ಆಗಿದ್ದರು. 1997ರಲ್ಲಿ ಕೆಲವು ತಿಂಗಳು ಕೇಂದ್ರ ಕೃಷಿ ಸಚಿವರೂ ಆಗಿದ್ದರು.

20ನೇ ವಯಸ್ಸಿನಲ್ಲೇ ರಾಜಕೀಯ ಜೀವನ ಆರಂಭಿಸಿದ್ದ ಅವರು 1957ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. 1972, 1980 ಮತ್ತು 2002ರಲ್ಲಿ ವಿರೋಧ ಪಕ್ಷದ ನಾಯಕರೂ ಆಗಿದ್ದರು. 10 ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. 1995ರಿಂದ 2008ರವರೆಗೆ ಶಿರೋಮಣಿ ಅಕಾಲಿದಳದ ಅಧ್ಯಕ್ಷರೂ ಆಗಿದ್ದರು. ಇದಾದ ನಂತರ ಅವರ ಪುತ್ರ ಸುಖಬೀರ್ ಸಿಂಗ್ ಬಾದಲ್ ಪಕ್ಷದ ಮುಖ್ಯಸ್ಥರಾಗಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : ತರಕಾರಿಗೆ ಅಂತ ಸಾವಿರ ರೂಪಾಯಿ ತಗೊಂಡಲ್ಲ ಏನಾಯ್ತು?

ಹೆಂಡತಿ : ಅಯ್ಯೋ! ನಿಮ್ಮಮ್ಮ ಹೇಳಿದಾರೆ ಸಂಸಾರ ಅಂದ್ಮೇಲೆ ಸಾವಿರ ಬರುತ್ತೆ ಸಾವಿರ ಹೋಗುತ್ತೆ. ಅದೆಲ್ಲ ಲೆಕ್ಕ ಇಡಬಾರದು ಅಂತ.

ಮೈಸೂರು ಮಿತ್ರ

ಬುಧವಾರ, 26 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ವೈಫಲ್ಯಗಳ ಋತು ಎದುರಾದರೆ ಯಶಸ್ಸಿನ ಬೀಜಗಳನ್ನು ಬಿತ್ತಲು ಸಕಾಲ

–ಪರಮಹಂಸ ಯೋಗಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕನಸಿನ ಭತ್ತಕ್ಕೆ ಗೋಣಿ ಚೀಲ ತಂದ್ರಂತೆ

ನಿಮ್ಮ ಪತ್ರಗಳು

ಬತ್ತುತ್ತಿರುವ ಕೆರೆಗೆ ನೀರು ಬಿಡಿ

ಮಾನ್ಯರೆ,



ಬೇಸಿಗೆ ಬಂತೆಂದರೆ ಸಾಕು, ಎಲ್ಲೆಡೆ ನೀರಿಗೆ ಹಾಹಾಕಾರ ಶುರುವಾಗುತ್ತಿದೆ. ನೀರಿನ ಮೂಲ ಆಕರವೆನಿಸಿರುವ ಕೆರೆ–ಕಟ್ಟೆಗಳು ಬತ್ತುತ್ತಿವೆ. ಇದರಿಂದ ಪ್ರಾಣಿ, ಪಕ್ಷಿ, ಜಾನುವಾರುಗಳಿಗೆ, ಜನರಿಗೆ ನೀರಿನ ಅಭಾವ ತಲೆದೋರುತ್ತಿದೆ. ಈ ಅಭಾವಕ್ಕೆ ಎಡೆಮಾಡಿಕೊಡದೇ ಸಂಬಂಧಿಸಿದ ಅಧಿಕಾರಿಗಳು ಈ ಮೊದಲೇ ಅಂದರೆ ಬೇಸಿಗೆಯ ಆರಂಭಕ್ಕೂ ಮುನ್ನ ನೀರು ಶೇಖರಿಸುವ ಕೆಲಸ ಮಾಡಬೇಕಲ್ಲವೇ.!

ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಗ್ರಾಮದಲ್ಲಿ ಎರಡು ಕೆರೆಗಳಿದ್ದು ನೀರಾವರಿ ಇಲ್ಲದೆ ಮುಕ್ಕಾಲು ಪಾಲು ಜನರು ಮಳೆ ಆಶ್ರಯದಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಇವರಿಗೆ ಈ ಕೆರೆಗಳೇ ಮೂಲ ಆಧಾರ. ಜಾನುವಾರುಗಳು ನೀರು ಕುಡಿಯಲು, ಗದ್ದೆಯಲ್ಲಿ ಭತ್ತ ಬೆಳೆಯಲು ಕೆರೆಯ ನೀರೇ ಬೇಕು. ಹೊಸಕಟ್ಟೆ ಮತ್ತು ಮುಳ್ಳಕೆರೆಗಳ ಈಗಿನ ದುರಂತದ ಸ್ಥಿತಿ ಏನೆಂದರೆ ಕೂನಿಬಾಯಿ ಸರಿಯಾಗಿ ದುರಸ್ತಿ ಆಗದೇ ಅದರಲ್ಲೇ ಎಲ್ಲಾ ನೀರು ಹೊರಹೋಗುತ್ತಿರುವುದು. ಬೆಳೆಗೆ ಬೇಕಾದಾಗ ನೀರು ಸಿಗದೇ ಉತ್ತಮ ಫಸಲು ಬಾರದೇ ರೈತಾಪಿ ಜನರು ಕಂಗಾಲಾಗಿದ್ದಾರೆ. ಈ ಬಗ್ಗೆ ಈಗಿರುವ ಗ್ರಾಮ ಪಂಚಾಯಿತಿ ಸದಸ್ಯರು ಯಾವುದೇ ಬಗೆಯ ಕ್ರಮ ಕೈಗೊಳ್ಳದೇ ಸುಖಾಸುಮ್ಮನೆ ಇರುವುದು ಇವರ ಬೇಜವಾಬ್ದಾರಿ ನಡೆಯನ್ನು ತೋರುತ್ತದೆ.

ಮೊದಲು ಇದನ್ನು ಸರಿಪಡಿಸಿ ಒಣಗುತ್ತಿರುವ ಕೆರೆಗಳಿಗೆ ನೀರು ಬಿಟ್ಟು ಪ್ರಾಣಿಪಕ್ಷಿ ಸಂಕುಲ ಮತ್ತು ಜಾನುವಾರು ಹಾಗೂ ಜನರನ್ನು ರಕ್ಷಿಸುವುದು ಪಿರಿಯಾಪಟ್ಟಣ ನೀರಾವರಿ ಇಲಾಖೆ ಮತ್ತು ಸ್ಥಳೀಯ ಆಡಳಿತದ ಗುರುತರ ಹೊಣೆಗಾರಿಕೆ. ಆದಷ್ಟು ಬೇಗ ಈ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ತುರ್ತು ಕ್ರಮ ಕೈಗೊಳ್ಳಬೇಕೆಂದು ಮನವಿ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿ.ಪಟ್ಟಣ ತಾ.

ಅಹಿತಕರ ಘಟನೆಗಳಿಗೆ ಅವಕಾಶ ನೀಡಬೇಡಿ

ಮಾನ್ಯರೆ,

2023ರ ರಾಜ್ಯ ವಿಧಾನಸಭೆ ಚುನಾವಣೆಯ ಬಿರುಗಾಳಿ ಬೀಸಿದ್ದು, ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ಸ್ಥಳೀಯ ಪಕ್ಷಗಳ ಹೋರಾಟ ಗರಿಗೆದರಿದೆ. ಇಂತಹ ಸಮಯದಲ್ಲಿ ರಾಜ್ಯದ ಜನತೆಗೆ ಕೆಲವು ಪುಂಡರು ವಿಧಾನಸಭೆಯ ಚುಕ್ಕಾಣಿ ಹಿಡಿಯಲು ಜನಪ್ರತಿನಿಧಿಯಾಗಬೇಕೆಂದು, ಹಣ, ಹೆಂಡದ ಆಸೆ, ಆಮಿಷ ಒಡ್ಡುತ್ತಿದ್ದಾರೆ. ದಯವಿಟ್ಟು ಜನತೆಯು ಇಂತಹ ಯಾವುದೇ ಕೆಟ್ಟ ಚಟುವಟಿಕೆಗಳಿಗೆ ಒಳಗಾಗಬಾರದು. ಇಂತಹ ಘಟನೆಗಳು ಕಂಡುಬಂದರೆ ತಕ್ಷಣ ಚುನಾವಣೆ ಆಯೋಗಕ್ಕೆ ದೂರು ನೀಡಲು ಮುಂದಾಗಬೇಕು.

ವಿಧಾನಸಭೆಯ ಚುನಾವಣೆಯ ಜೊತೆಗೆ ಐಪಿಎಲ್ ಕ್ರಿಕೆಟ್ ಮ್ಯಾಚ್ ಕೂಡ ಶುರುವಾಗಿದ್ದು, ಬೆಟ್ಟಿಂಗ್ ದಂಧೆಯಿಂದ ಅನೇಕ ಜನಸಾಮಾನ್ಯರು ದುಡ್ಡಿನ ವ್ಯಾಮೋಹಕ್ಕೆ ಒಳಗಾಗಿ ಕೆಲವರು ಮನೆ –ಮಠ ಹಣ ಕಳೆದುಕೊಂಡು, ಇನ್ನಿತರರು ಸಾವಿನ ಅರಮನೆ ಸೇರಲು ಅನೇಕ ಮಾರ್ಗ ಹಿಡಿಯುತ್ತಿದ್ದಾರೆ. ಇಂತಹ ಯಾವುದೇ ಅಹಿತಕರ ಘಟನೆಗಳು ನಡೆಯಬಾರದೆಂದು ಮನವಿ ಸಲ್ಲಿಸುತ್ತ ಇಂತಹ ಚಟುವಟಿಕೆಗಳು ಕಂಡು ಬಂದರೆ ಪೊಲೀಸ್ ಇಲಾಖೆಗೆ ತಕ್ಷಣ ಮಾಹಿತಿ ನೀಡಲು ಸಾರ್ವಜನಿಕರು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ.

ನಂದಿನಿ ಮೂಲೆಗೆ ತಳ್ಳುವ ಮತ್ತೊಂದು ಹುನ್ನಾರವೇ?

ಮಾನ್ಯರೇ

ಕಳೆದ ಕೆಲವು ವಾರಗಳಿಂದ ಗುಜರಾತಿನ ಅಮುಲ್ ಅನ್ನು ನಂದಿನಿಯೊಂದಿಗೆ ಪೈಪೋಟಿ ನೀಡಲು ಮಾರುಕಟ್ಟೆಗೆ ತರಬೇಕೆನ್ನುವ ಪ್ರಯತ್ನಗಳ ಬಗ್ಗೆ ಹಲವಾರು ರಾಜಕೀಯ ಪಕ್ಷಗಳು, ಧುರೀಣರು ಖಂಡಿಸುತ್ತಿದ್ದು, ಇದಕ್ಕೆ ರಾಜಕೀಯ ಲೇಪನವನ್ನೂ ಬಳಿಯಲಾಗಿದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದರು. 22 ವರುಷ ಕಹಾಮದೊಂದಿಗೆ ಒಡನಾಟವಿದ್ದ ನನಗೆ ಇದರಲ್ಲೇನೋ ಇದೆ ಎಂದೆನಿಸಿದ್ದರೂ ಇತ್ತೀಚೆಗೆ ನಡೆದ ಕೆಲವು ವಿದ್ಯಮಾನಗಳು ಇದಕ್ಕೆ ಪುಷ್ಟಿ ನೀಡುವಂತಿದೆ.

ದಿನಾಂಕ 23.4.2023ರಂದು ನನ್ನ ಬಂಧುಗಳೊಬ್ಬರ ವಿವಾಹವು ಮೈಸೂರಿನಲ್ಲಿ ನಡೆಯಿತು. ಇದಕ್ಕಾಗಿ 12 ಲೀಟರ್ ನಂದಿನಿ ತುಪ್ಪದ ಅವಶ್ಯಕತೆ ಇತ್ತು. ಯಾವ ನಂದಿನಿ ಅಧಿಕೃತ ಮಾರಾಟಗಾರರನ್ನು ಸಂಪರ್ಕಿಸಿದರೂ ಇಷ್ಟು ಮೊತ್ತದ ತುಪ್ಪ ದೊರಕಲೇ ಇಲ್ಲ, ಬದಲಿಗೆ ಮಾರಾಟಗಾರರು ಕೆಲವೇ ನಿರ್ದಿಷ್ಟ ದಿನಗಳಂದು ತುಪ್ಪವನ್ನು ಅದೂ ಕೇವಲ ಕಡಿಮೆ ಪರಿಮಾಣದಲ್ಲಿ ವಿತರಿಸುವುದಾಗಿ ತಿಳಿಸಿದರು. ಕೊನೆಗೆ ನಗರದ ಎಲ್ಲ ಕ್ಷೀರಕೇಂದ್ರಗಳು, ಅಧಿಕೃತ ಮಾರಾಟಗಾರರಲ್ಲಿ ಬೇಡಿ ಹೊಂದಿಸಿದ್ದಾಯಿತು. ಬಹುಶಃ ಇದನ್ನು ಗಮನಿಸಿದಾಗ ನನಗೆ, ಸರ್ಕಾರವೇ ಮಾರುಕಟ್ಟೆಯಲ್ಲಿ ನಂದಿನಿಯ ಉತ್ಪನ್ನಗಳ ಕ್ಷಾಮ ಸೃಷ್ಟಿಸಿ, ಗ್ರಾಹಕರು ಇತರೆ ಬ್ರಾಂಡ್‌ಗಳತ್ತ ಹೊರಳುವಂತೆ ಮಾಡುತ್ತಿರಬಹುದು ಎನಿಸಿತು. ಈ ನಡುವೆ ಮೈಮುಲ್ ಸಂಪರ್ಕಿಸಿದಾಗ, ಅಲ್ಲಿ ಯಾರೂ ಫೋನ್‌ಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಪ್ರತಿ ಜಿಲ್ಲಾ ಹಾಲು ಒಕ್ಕೂಟಗಳಲ್ಲಿಯೂ ರೈತ ಪ್ರತಿನಿಧಿಗಳೇ ನಿರ್ದೇಶಕರಾಗಿದ್ದು, ಅವರಲ್ಲೊಬ್ಬ ಆಯ್ದ ಪ್ರತಿನಿಧಿ ಕರ್ನಾಟಕ ಹಾಲು ಮಹಾಮಂಡಳದ ನಿರ್ದೇಶಕರಾಗಿರುತ್ತಾರೆ. ಅದೂ ಅಲ್ಲದೇ ಮಾಜಿ ಮುಖ್ಯಮಂತ್ರಿಯವರ ನಿಕಟ ಸಂಬಂಧಿಯೊಬ್ಬರೂ ಕೂಡಾ ಮಂಡಳಿ ನಿರ್ದೇಶಕರಾಗಿದ್ದು ಈ ಬಗ್ಗೆ ಎಲ್ಲರೂ ಕಣ್ಣು ಮುಚ್ಚಿ ಕುಳಿತಿರುವುದು ವಿಪರ್ಯಾಸವೇ ಸರಿ. ರೈತರಿಗೇ ಆಗುತ್ತಿರುವ ಅನ್ಯಾಯಕ್ಕೆ ಅವರೇ ಪ್ರತಿಭಟನೆ ಮಾಡದೇ ಮತ್ತು ಮಾರುಕಟ್ಟೆಯಲ್ಲಿ ನಂದಿನಿ ಉತ್ಪನ್ನಗಳ ಅಲಭ್ಯತೆಗೆ ಅವರೇ ಕಾರಣವಾಗಿರುವಾಗ, ಕನ್ನಡದ ಅಸ್ಮಿತೆಯಾದ ನಂದಿನಿಗೆ ನಮ್ಮವರಿಂದಲೇ ಧಕ್ಕೆ ಬರುತ್ತಿದೆಯಲ್ಲವೇ. ಜೊತೆಗೆ ನಮ್ಮ ರೈತರು, ನಮ್ಮ ನಂದಿನಿ ನಮ್ಮ ಉತ್ಪನ್ನವೆಂದು ಬಡಾಯಿ ಕೊಚ್ಚಿಕೊಳ್ಳುವ ಸರ್ಕಾರವೇ ಕಣ್ಣು ಮುಚ್ಚಿ ಕುಳಿತು, ಬೇರೆ ರಾಜ್ಯದ ಬ್ರಾಂಡ್‌ಗಳಿಗೆ ಮಣೆ ಹಾಕುತ್ತಿರುವುದು, ನಮ್ಮ ರೈತರ ಮೇಲಿನ ಕಾಳಜಿಯನ್ನು ತೋರಿಸುತ್ತದೆ. ಇನ್ನಾದರೂ ಕಹಾಮ ಅಥವಾ ಸಂಬಂಧಿತ ಜಿಲ್ಲಾ ಹಾಲು ಒಕ್ಕೂಟಗಳ ಆಡಳಿತ ವರ್ಗ ಮಾರುಕಟ್ಟೆಯಲ್ಲಿ ನಂದಿನಿ ಉತ್ಪನ್ನಗಳ ಲಭ್ಯತೆ ಇರುವಂತೆ ಮಾಡುವರೇ? ಇಲ್ಲದೇ ಹೋದಲ್ಲಿ ಗ್ರಾಹಕರು ಬೇರೆ ಗತ್ಯಂತರವಿಲ್ಲದೇ ಅವಶ್ಯಕತೆ ಎಂದು ಇತರೆ ಬ್ರಾಂಡ್‌ಗಳತ್ತ ಮುಖ ಮಾಡಿದಲ್ಲಿ, ನಂದಿನಿ ಕೂಡಾ ಇವರ ದುರಾಡಳಿತಕ್ಕೆ ಒಳಗಾಗಿ ನಂದಿನಿ ಬ್ರಾಂಡ್ ನೇಪಥ್ಯಕ್ಕೆ ಸರಿಯುವ ದಿನಗಳು ದೂರವಿಲ್ಲ. ಸಾಮಾನ್ಯ ನಾಗರಿಕನಾದ ನನ್ನಂತಹವರಿಗೆ ಈ ಬಗ್ಗೆ ಸ್ಪಷ್ಟೀಕರಣ ಅಗತ್ಯವಾಗಿ ಬೇಕಿದೆ.

–ವಿಜಯ್ ಹೆಮ್ಮಿಗೆ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ


ಆಚಾರ್ಯ ಶಂಕರ–ಜ್ಞಾನದ ಮೇರು ಶಿಖರ

ಕ್ರಿ.ಶ. ಏಳನೆಯ ಅಥವಾ ಎಂಟನೆಯ ಶತಮಾನದಲ್ಲಿ ಹುಟ್ಟಿ ಭಾರತದ ಜನಜೀವನಕ್ಕೂ ಚಿಂತನೆಯ ದಾರಿಗೂ ಹೊಸ ತಿರುವನ್ನು ತಂದು ಕೊಟ್ಟ ಶ್ರೀ ಶಂಕರಾಚಾರ್ಯರು ಮಹಾ ಮೇಧಾವಿಗಳಾಗಿದ್ದರೆಂಬುದರಲ್ಲಿ ಸಂಶಯವಿಲ್ಲ. ದೇಶದ ಒಂದು ತುದಿಯಲ್ಲಿ, ಕೇರಳದ ಕಾಲಟಿಯಲ್ಲಿ ಹುಟ್ಟಿ ದೇಶದ ಎಲ್ಲಾ ಮುಖ್ಯ ಪ್ರದೇಶಗಳಲ್ಲಿ ಕಾಲು ನಡಿಗೆಯಿಂದ ಸಂಚರಿಸಿ ಗುಣದಲ್ಲೂ ಗಾತ್ರದಲ್ಲೂ ಬೃಹತ್ತಾದ ಸಾಹಿತ್ಯವನ್ನು ಸಂಸ್ಕೃತದಲ್ಲಿ ರಚಿಸಿರುವುದು ಆಶ್ಚರ್ಯ ಜನಕ ಸಂಗತಿ. ಅವರು ಬದುಕಿದ್ದು ಕೇವಲ ಮೂವತ್ತೆರಡು ವರ್ಷಗಳೆಂದು ಹೇಳುತ್ತಾರೆ.

ಅಷ್ಟವರ್ಷೇ ಚತುರ್ವೇದೀ
ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ
ದ್ವಾತ್ರಿಂಶೇ ಮುನಿರಭ್ಯಗಾತ್ ॥

ಎಂಟು ವರ್ಷ ಆಗುವ ವೇಳೆಗೆ ಬಾಲಕ ಶಂಕರ ನಾಲ್ಕು ವೇದಗಳನ್ನು ಕಂಠಸ್ಥ ಮಾಡಿಕೊಂಡಿದ್ದನಂತೆ. ಋಗ್ವೇದ ಒಂದರಲ್ಲೇ ಹತ್ತು ಸಾವಿರದ ಐನೂರ ಐವತ್ತೆರಡು ಮಂತ್ರಗಳಿವೆ. ಒಂದು ವೇದವನ್ನು ಸಂಪೂರ್ಣವಾಗಿ ಕಲಿಯುವುದು ಕಷ್ಟ. ನಾಲ್ಕು ವೇದಗಳನ್ನು ಕಲಿಯುವುದೆಂದರೆ ಸಾಮಾನ್ಯವೆ? ದ್ವಾದಶೇ ಸರ್ವಶಾಸ್ತ್ರವಿತ್. ಹನ್ನೆರಡನೆಯ ವರ್ಷದ ವೇಳೆಗೆ ಎಲ್ಲ ಶಾಸ್ತ್ರಗಳನ್ನು ಅರಿತುಕೊಂಡಿದ್ದರು – ಎಂದರೆ ಅವರ ಪ್ರತಿಭೆ ಹೇಗಿರಬೇಕು? ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ, ಶಿಕ್ಷಾ, ವ್ಯಾಕರಣ, ಛಂದಸ್, ನಿರುಕ್ತ, ಜ್ಯೌತಿಷ, ಕಲ್ಪ ಮುಂತಾದ ಎಲ್ಲಾ ಶಾಸ್ತ್ರಗಳ ಪ್ರಾವೀಣ್ಯ ಅವರಿಗಿತ್ತು ಎಂಬುದು ಅವರ ಗ್ರಂಥಗಳನ್ನು ಓದಿದವರಿಗೆ ಅರ್ಥವಾಗುತ್ತದೆ. ಅಷ್ಟೇ ಅಲ್ಲದೆ ಎಲ್ಲ ಪುರಾಣಗಳ ಮತ್ತು ಇತಿಹಾಸಗಳ ತಲಸ್ಪರ್ಶಿ ಜ್ಞಾನವೂ ಅವರದಾಗಿತ್ತು. ವಿಷ್ಣು ಸಹಸ್ರನಾಮಸ್ತೋತ್ರಕ್ಕೆ ಶಂಕರರು ಬರೆದಿರುವ ಭಾಷ್ಯದ ಪೀಠಿಕೆಯನ್ನು ನೋಡಿದರೆ ಸಾಕು, ಅವರ ವಿಶಾಲ ಜ್ಞಾನದ ಅರಿವು ನಮಗಾಗುತ್ತದೆ. ಜ್ಞಾನ ಒಂದೇ ಅಲ್ಲ, ಅದನ್ನು ತಮ್ಮ ವಾದದ ಸಮರ್ಥನೆಗಾಗಿ ಬಳಸುವ ಕೌಶಲವೂ ಅವರಿಗೆ ಕರಗತ. ಆಸ್ತಿಕ ದರ್ಶನಗಳಷ್ಟೇ ಅಲ್ಲ, ಚಾರ್ವಾಕ, ಬೌದ್ಧ, ಜೈನದರ್ಶನಗಳನ್ನೂ ಅವರು ಅರಿತಿದ್ದರೆಂಬುದು ಬ್ರಹ್ಮಸೂತ್ರ ಭಾಷ್ಯದಲ್ಲಿ ಸ್ಪಷ್ಟವಾಗುತ್ತದೆ. ಈ ಭಾಷ್ಯವನ್ನು ಅವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಬರೆದರಂತೆ. ಅದೊಂದು ಗ್ರಂಥವನ್ನು ಓದಿ ಅರಗಿಸಿಕೊಳ್ಳುವುದಕ್ಕೆ ಸಾಮಾನ್ಯರಿಗೆ ಹದಿನಾರು ವರ್ಷಗಳು ಸಾಲವು. ಇಷ್ಟೇ ಅಲ್ಲದೆ ಭಗವದ್ಗೀತೆಗೆ, ಈಶಾವಾಸ್ಯ, ಕೇನ, ಕಠ, ಪ್ರಶ್ನೆ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಎಂಬ ಹತ್ತು ಉಪನಿಷತ್ತುಗಳಿಗೂ ಅವರು ಭಾಷ್ಯಗಳನ್ನು ಬರೆದರು. ಇವುಗಳ ಮೇಲೆ ಅನಂತರ ಕಾಲದಲ್ಲಿ ಹುಟ್ಟಿದ ವ್ಯಾಖ್ಯಾನಗಳು ಅನೇಕ. ಔಪನಿಷದ ದರ್ಶನವನ್ನು ದೇಶಕ್ಕೆ ತಿಳಿಸಿಕೊಟ್ಟ ಮಹಾನುಭಾವರು ಶ್ರೀಶಂಕರಾಚಾರ್ಯರು.

ಈ ಭಾಷ್ಯಗಳು ಪೂರ್ವಜನ್ಮ ಸಂಸ್ಕಾರ



ದಿಂದ ವೈರಾಗ್ಯ ಸಂಪನ್ನರಾಗಿ ಮುಮುಕ್ಷುಗಳಾದವರಿಗಾಗಿ ರಚಿತವಾದುವೆನ್ನಬಹುದು. ಬೇರೆಯವರಿಗಾಗಿ ಆಚಾರ್ಯ ಶಂಕರರು ಆತ್ಮಬೋಧ, ವಿವೇಕ ಚೂಡಾಮಣಿ, ಉಪದೇಶ ಸಾಹಸ್ರೀ ಮುಂತಾದ ಪ್ರಕರಣ ಗ್ರಂಥಗಳನ್ನೂ ರಚಿಸಿದ್ದಾರೆ. ಮತ್ತೆ ಸಾಮಾನ್ಯ ಜನರಿಗಾಗಿ ನಾನಾ ದೇವತೆಗಳನ್ನು ಸ್ತುತಿಸುವ ನೂರಾರು ಸ್ತೋತ್ರಗಳನ್ನು ರಚಿಸಿದ್ದಾರೆ. ಅವರಿಗೆ ಈ ದೇವರು ಹೆಚ್ಚು, ಆ ದೇವರು ಕಡಿಮೆ ಎಂಬ ಭಾವನೆ ಇಲ್ಲ. ನಿರಾಕಾರನಾದ ಪರಮಾತ್ಮನಲ್ಲಿ ಆಕಾರವು ಈಶ್ವರನೆಂಬ ಸ್ಥಿತಿಯಲ್ಲಿ ಬರುವುದು. ಸರ್ವಶಕ್ತನಾದ ಈಶ್ವರನು ಭಕ್ತರ ಧ್ಯಾನದ ಅನುಕೂಲತೆಗಾಗಿ ಯಾವ ರೂಪವನ್ನಾದರೂ ಧರಿಸಬಹುದು, ಆದ್ದರಿಂದ ಅವುಗಳ ಭೇದವನ್ನಿಟ್ಟುಕೊಂಡು ವೈಮನಸ್ಯವನ್ನು ತಂದುಕೊಳ್ಳಬಾರದು ಎಂದು ಅವರ ಭಾವನೆ. ಯಾವ ದೇವರನ್ನು ಪೂಜಿಸಿದರೂ ಎಲ್ಲ ಪೂಜೆಯೂ ಸಲ್ಲುವುದು ಒಬ್ಬನಿಗೇ. ಸರ್ವದೇವ ನಮಸ್ಕಾರ: ಕೇಶವಂ ಪ್ರತಿಗಚ್ಛತಿ.

ಶಂಕರಾಚಾರ್ಯರು ರಚಿಸಿರುವ ಸೌಂದರ್ಯ ಲಹರೀ, ಶಿವಾನಂದಲಹರೀ ಮುಂತಾದ ಸ್ತೋತ್ರಗಳಲ್ಲಿ ಉತ್ಕೃಷ್ಟವಾದ ಕಾವ್ಯಾಂಶಗಳಿವೆ. ಇವನ್ನು ಬೇರೆ ಯಾರೋ ರಚಿಸಿರಬಹುದು ಎಂದು ಕೆಲವರು ಊಹಿಸುತ್ತಾರೆ. ಆದರೆ ಹಾಗೆ ಬರೆದ ಬೇರೆಯವರು ಯಾರು? ಅವರು ತಮ್ಮ ಹೆಸರನ್ನು ಹೇಳದೆ ಶಂಕರಾಚಾರ್ಯ ವಿರಚಿತ ಎಂದು ಏಕೆ ಹೇಳಿದರು ಎಂಬ ಪ್ರಶ್ನೆಗೆ ಉತ್ತರ ಸಿಕ್ಕುವುದಿಲ್ಲ. ಸರ್ವಜ್ಞರಾಗಿದ್ದ ಶಂಕರಾಚಾರ್ಯರು ಅದ್ಭುತವಾದ ಈ ಸುಂದರ ಸ್ತೋತ್ರಗಳನ್ನು ರಚಿಸಿರಬಹುದು ಎಂದೇ ತೋರುತ್ತದೆ. ಶಾಕ್ತಮತವನ್ನು ಅನುಸರಿಸುತ್ತಿದ್ದ ಶಿಷ್ಯರಿಗಾಗಿ ಅವರು ಸೌಂದರ್ಯ ಲಹರಿಯನ್ನೂ, ಶಿವಾಭಿಮಾನಿಗಳಾಗಿದ್ದ ಶಿಷ್ಯರಿಗಾಗಿ ಶಿವಾನಂದ ಲಹರಿಯನ್ನೂ ರಚಿಸಿದರೆಂದುಕೊಳ್ಳೋಣ. ಹಾಗೆಯೇ ಸುಬ್ರಹ್ಮಣ್ಯ, ಗಣೇಶ, ಶಾರದಾ ಮುಂತಾದ ದೇವತೆಗಳ ಸ್ತೋತ್ರಗಳೂ ಅವರಿಂದ ರಚಿತವಾಗಿವೆ. ವಿಷ್ಣು ಪಾದಾದಿಕೇಶಾಂತ ಸ್ತೋತ್ರವು ಪ್ರೌಢವಾಗಿದೆ. ಗಣೇಶ ಪಂಚ ರತ್ನ ಸ್ತೋತ್ರವು ತಾಳಬದ್ಧವಾಗಿ, ಅಲಂಕಾರಸಹಿತವಾಗಿ ಶೋಭಿಸುತ್ತದೆ.

ದಾರ್ಶನಿಕವಾಗಿ ಶಂಕರಾಚಾರ್ಯರು ಎಂಬ ವಿಷಯವಾಗಿ ಆಲೋಚಿಸಿದರೆ ಅವರ ಸ್ಥಾನ ಉನ್ನತವಾದುದು. ಆ ಕಾಲದಲ್ಲಿ ಬೌದ್ಧ ಮತ್ತು ಜೈನಮತಗಳು ದೇಶದಲ್ಲೆಲ್ಲ ಹರಡಿದ್ದುವು. ಬೌದ್ಧರು ಸರ್ವಂ ಕ್ಷಣಿಕಂ ಎಂಬ ಸಿದ್ಧಾಂತವನ್ನು ಹಿಡಿದು ನಿತ್ಯವಾದ ಆತ್ಮ ಎಂಬುದೇ ಇಲ್ಲ ಎನ್ನುತ್ತಿದ್ದರು. ಜೈನರು ನಿತ್ಯವಾದ ಆತ್ಮವನ್ನು ಒಪ್ಪಿಕೊಂಡಿದ್ದರೂ ಜಗತ್ಕರ್ತೃವಾದ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿರಲಿಲ್ಲ. ಚಾರ್ವಾಕರಂತೂ ಪ್ರತ್ಯಕ್ಷವಲ್ಲದ ಯಾವ ವಸ್ತುವೂ ಇಲ್ಲವೆಂದು ಹೇಳುತ್ತಿದ್ದರು.

ಆಸ್ತಿಕರೂ, ವೇದಗಳಿಗೆ ಪರಮಪ್ರಾಮಾಣ್ಯವನ್ನು ಘೋಷಿಸಿದ ಮೀಮಾಂಸಕರೂ ಕರ್ಮಗಳಿಗೆ ಪ್ರಾಧಾನ್ಯವನ್ನು ಕೊಟ್ಟು ಜ್ಞಾನ ಬೋಧಕವಾದ ಉಪನಿಷತ್ತುಗಳನ್ನು ಪಕ್ಕಕ್ಕೆ ತಳ್ಳಿದ್ದರು. ಇಂತಹ ಸಂದರ್ಭದಲ್ಲಿ ಜ್ಞಾನಕ್ಕೆ ಪ್ರಥಮ ಸ್ಥಾನವನ್ನು ಪ್ರತಿಷ್ಠಾಪಿಸುವುದಕ್ಕಾಗಿ ಅವತರಿಸಿದ ಮಹಾನುಭಾವರು ಶ್ರೀ ಶಂಕರಾಚಾರ್ಯರು.

ಕರ್ಮಗಳನ್ನು, ವೇದೋಕ್ತವಾದ ಯಜ್ಞಗಳನ್ನು ಸ್ವಾರ್ಥವಿಲ್ಲದ ಲೋಕದ ಕಲ್ಯಾಣಕ್ಕಾಗಿ ಭಗವತ್ ಸಮರ್ಪಣೆ ಎಂದು ಆಚರಿಸಬೇಕು. ಅದರಿಂದ ಮನಸ್ಸೂ ಬುದ್ಧಿಯೂ ಶುದ್ಧವಾಗುತ್ತದೆ. ಆಗ ಜ್ಞಾನ ಮಾರ್ಗವನ್ನು ಅನುಸರಿಸುವ ಅರ್ಹತೆ ಬರುತ್ತದೆ. ಅಜ್ಞಾನದಿಂದ ಬಂಧ, ಜ್ಞಾನದಿಂದ ಮುಕ್ತಿ. ಅಜ್ಞಾನವನ್ನು ತೊಲಗಿಸಲು ಜ್ಞಾನಕ್ಕೆ ಮಾತ್ರ ಸಾಧ್ಯ. ಆ ಜ್ಞಾನವು ಗುರುವಿನ ಅನುಗ್ರಹದಿಂದ, ಭಗವಂತನ ಕರುಣೆಯಿಂದ ಬರಬೇಕು. ಅದಕ್ಕೆ ಭಕ್ತಿ ಕಾರಣ.

ಯಸ್ಯ ದೇವೇ ಪರಾಭಕ್ತಿರ್ಯಥಾ
ದೇವೇ ತಥಾಗುರೌ।
ತಸ್ಯೈತೇ ಕಥಿತಾ ಹ್ಯರ್ಥಾಃ
ಪ್ರಕಾಶಂತೇ ಮಹಾತ್ಮನಃ॥

ಎಂಬುದು ಶ್ವೇತಾಶ್ವತರೋಪನಿಷತ್ತಿನ ಮಾತು. ಹೀಗೆ ಮೂರೂ ಬೇಕು. ಕೊನೆಯಲ್ಲಿ ಮುಕ್ತಿಗೆ ಕಾರಣ ಜೀವಬ್ರಹ್ಮೈಕ್ಯಜ್ಞಾನ. ಬ್ರಹ್ಮವನ್ನು ಬಿಟ್ಟು ಬೇರೆ ಏನೂ ಇಲ್ಲ, ಸರ್ವಂ ಬ್ರಹ್ಮಮಯಂ ಎಂಬ ಜ್ಞಾನವು ಹುಟ್ಟಿದಾಗ 'ಅಹಂ ಬ್ರಹ್ಮಾಸ್ಮಿ' ಎಂಬ ಅನುಭವ ಉಂಟಾಗುತ್ತದೆ. ಆಗ ಜೀವನ್ಮುಕ್ತಿ, ಆ ಸಾಧಕನು ಜೀವನ್ಮುಕ್ತ. ಜೀವನ್ಮುಕ್ತನಾದ ಮೇಲೂ ಪ್ರಾರಬ್ಧಕರ್ಮ ಕರಗುವವರೆಗೂ ಆ ಜೀವನು ಸಶರೀರನಾಗಿ ಜಗತ್ತಿನಲ್ಲಿರಬಹುದು. ದೇಹಪಾತ ಆದಾಗ ಅವನಿಗೆ ವಿದೇಹಮುಕ್ತಿ. ಅದನ್ನೇ ಬ್ರಹ್ಮೈಕ್ಯ ಎಂದು ಕರೆಯುವುದು.

ಮುಕ್ತಿ ಸ್ಥಿತಿಯಲ್ಲಿ ಯಾವ ಭೇದವೂ ಇಲ್ಲ. ಅದು ಪರಮಾರ್ಥ. ಆಗ ಜಗತ್ತೆಲ್ಲ ಮಿಥ್ಯೆ. ಕನಸ್ಸನ್ನು ಕಾಣುತ್ತಿದ್ದಾಗ ಅಲ್ಲಿ ಕಂಡ ಹುಲಿಯಿಂದ ನಾನು ಹೆದರುತ್ತೇನೆ, ತಪ್ಪಿಸಿಕೊಳ್ಳಲು ಓಡುತ್ತೇನೆ, ಮನೆಯಲ್ಲಿ ಬಚ್ಚಿಟ್ಟುಕೊಳ್ಳುತ್ತೇನೆ. ಆಗ ಅದೆಲ್ಲ ಸತ್ಯ. ಕನಸು ಕಳೆದು ಎಚ್ಚರವಾದ ಮೇಲೆ ಆ ಹುಲಿ ಮಿಥ್ಯೆ, ಆ ಮನೆ ಮಿಥ್ಯೆ. ಹಾಗೆ ಮುಕ್ತಿ ದೊರಕಿದ ಮೇಲೆ ಈ ಜಗತ್ತು, ಇಲ್ಲಿದ್ದ ಸಂಬಂಧಗಳು, ಉಚ್ಚ ನೀಚಭಾವ ಎಲ್ಲ ಮಿಥ್ಯಾ. ಅಲ್ಲಿಯವರೆಗೆ ಇದೆಲ್ಲ ಸತ್ಯ, ವ್ಯಾವಹಾರಿಕ ಸತ್ಯ.

ಪಾರಮಾರ್ಥಿಕ ಸ್ಥಿತಿಯಲ್ಲಿ ಎರಡು ಎಂಬ ಭಾವನೆಯಿಲ್ಲ. ಅದು ಅದ್ವೈತ. ಆ ಸ್ಥಿತಿಯಲ್ಲಿ ಮೋಹವಾಗಲಿ ಶೋಕವಾಗಲಿ ಇಲ್ಲ.

ತತ್ರ ಕೋ ಮೋಹಃ ಕಃ ಶೋಕಃ
ಏಕತ್ವ ಮನುಪಶ್ಯತಃ ।

ಆದರೆ ಈ ಸ್ಥಿತಿಯನ್ನು ಮುಟ್ಟುವುದು ಕೋಟಿಗೊಬ್ಬರಿಗೂ ಸಾಧ್ಯವೋ ಇಲ್ಲವೋ ತಿಳಿಯದು. ಇದಕ್ಕೆ ಕಾರಣ ಅಜ್ಞಾನ. ಈ ದೇಹವೇ ನಾನು, ಈ ಮನಸ್ಸೇ ನಾನು, ಈ ಇಂದ್ರಿಯಗಳೇ ನಾನು ಎಂಬ ಅಜ್ಞಾನ ನಮ್ಮಲ್ಲಿದೆ. ಇದು ಅತ್ಯಂತ ಗಾಢವಾಗಿರುವುದರಿಂದ ಇದನ್ನು ಹೊಡೆದಟ್ಟಲು ಸಾಧನೆಗಳು ಬೇಕಾಗುತ್ತವೆ. ಇವು ಮುಖ್ಯವಾಗಿ ನಾಲ್ಕು (1) ನಿತ್ಯಾನಿತ್ಯ ವಸ್ತುವಿವೇಕ, (2) ಇಹಾಮುತ್ರ ಫಲಭೋಗ ವಿರಾಗ, (3) ಶಮಾದಿಷಟ್ಕ ಸಂಪತ್ತಿ ಮತ್ತು (4) ಮುಮುಕ್ಷುತ್ವ. ಇವುಗಳನ್ನು ಸಾಧನ ಚತುಷ್ಟಯ ಎನ್ನುತ್ತಾರೆ.

ಇವುಗಳಲ್ಲಿ ಮೊದಲನೆಯದು ವಿವೇಕ. ನನ್ನ ದೇಹ ಅನಿತ್ಯ. ಏನೇ ಮಾಡಿದರೂ ಇದು ಇಂದೋ ನಾಳೆಯೋ ಬಿದ್ದು ಹೋಗುವುದೇ. ಈ ದೇಹದಿಂದ ಅರ್ಜಿಸಿದ ಹಣ, ಗಳಿಸಿದ ಅಧಿಕಾರ, ಪಡೆದ ಕೀರ್ತಿ ನಿತ್ಯವಾಗಿರುವುದು ಹೇಗೆ ಎಂಬ ವಿವೇಕ ಮನುಷ್ಯನಲ್ಲಿ ಹುಟ್ಟಬೇಕು. ನಿತ್ಯವಾದುದು ಮುಕ್ತಿ ಮಾತ್ರ ಎಂಬ ನಿರ್ಣಯ ಜಪಿಸಬೇಕು. ಆಗ ವೇದಾಂತಧ್ಯಯನದ ಅರ್ಹತೆ.

ಎರಡನೆಯದು ಇಹಾಮುತ್ರ ಫಲಭೋಗ ವಿರಾಗ. ಈ ಲೋಕದಲ್ಲಿ ಮತ್ತು ಸ್ವರ್ಗದಲ್ಲಿ ಅನುಭವಿಸಬಹುದಾದ ಸುಖಗಳ ಬಗೆಗೆ ವೈರಾಗ್ಯ. ಈ ಸುಖಗಳ ಬಗೆಗೆ ಆಸೆ ಇದ್ದರೆ ಆ ವ್ಯಕ್ತಿ ವೇದಾಂತವನ್ನು ಕಲಿಯುವುದಕ್ಕೆ ಅನರ್ಹ.

ಮೂರನೆಯದು ಶಮಾದಿಷಟ್ಕಸಂಪತ್ತಿ. ಶಮ, ದಮ, ತಿತಿಕ್ಷಾ, ಉಪರತ, ಶ್ರದ್ಧಾ, ಸಮಾಧಾನ ಎಂಬ ಆರೂ ಸಾಧಕನಲ್ಲಿ ದೃಢವಾಗಿ ಬೇರೂರಿದ್ದರೆ ಅದನ್ನು ಶಮಾದಿಷಟ್ಕ ಸಂಪತ್ತಿ ಎಂದು ಕರೆಯುತ್ತಾರೆ.


ನಾಲ್ಕನೆಯದು ಮುಮುಕ್ಷುತ್ವ. ನಾನು ಮುಕ್ತನಾಗಬೇಕು, ಮೋಕ್ಷವನ್ನು ಹೊಂದಬೇಕು ಎಂಬ ಉತ್ಕಟಾಪೇಕ್ಷೆ. ಈ ನಾಲ್ಕು ಇದ್ದವನು ಗುರು ಕರುಣೆಯಿಂದ ಮಹಾವಾಕ್ಯ ಶ್ರವಣವನ್ನು ಮಾಡುತ್ತಾನೆ. ಶ್ರವಣಾನಂತರ ಮನಸ್ಸಿನಲ್ಲಿ ದೃಢೀಕರಣಕ್ಕಾಗಿ ಮಾಡುವ ಚಿಂತನೆಯನ್ನು ಮನನ ಎಂದು ಕರೆಯುತ್ತಾರೆ. ಅನಂತರ ಏಕಾಗ್ರತೆಯಿಂದ ಮಾಡುವ ಧ್ಯಾನವು ನಿದಿಧ್ಯಾಸನ. ಅದರಿಂದ ಲೋಕೋತ್ತರವಾದ ಬ್ರಹ್ಮಾನುಭವ. ಅದೇ ಮುಕ್ತಿ. ಮುಕ್ತನಿಗೆ ಪುನರ್ಜನ್ಮವಿಲ್ಲ. ಅವನು ಅದ್ವೈತ ಸ್ಥಿತಿಯನ್ನು ಹೊಂದಿ ಬ್ರಹ್ಮದಲ್ಲಿ ಲೀನನಾಗುತ್ತಾನೆ. ಬ್ರಹ್ಮವೇ ಆಗುತ್ತಾನೆ. ಬ್ರಹ್ಮವಿದ್ ಬ್ರಹ್ಮೈವ ಭವತಿ. ಈ ಜ್ಞಾನಮಾರ್ಗವನ್ನು ತೋರಿಸಿದ ಸಾಕ್ಷಾತ್ ಶಂಕರನ ರೂಪಾಂತರವೆಂದು ಭಕ್ತರು ನಂಬಿರುವ ಶಂಕರಾಚಾರ್ಯರಿಗೆ ನಮನಗಳು.

ಅಜ್ಞಾನಾಂತರ್ಗಹನಪತಿತಾನ್
ಆತ್ಮವಿದ್ಯೋಪದೇಶೈ
ಸ್ತ್ರಾತುಂ ಲೋಕಾನ್
ಭವದವಶಿಖಾತಾಪಪಾಪಚ್ಯಮಾನಾನ್ ।
ಮುಕ್ತ್ವಾ ಮೌನಂ ವಟವಿಟಪಿನೋ
ಮೂಲತೋ ನಿಷ್ಪತಂತೀ
ಶಂಭೋರ್ಮೂರ್ತಿರ್ಜಯತಿ
ಭುವನೇ ಶಂಕರಾಚಾರ್ಯರೂಪಾ॥

ಪ್ರಜಾಪ್ರಭುತ್ವ ಉಳಿಯಬೇಕಾದರೆ ಬಿಜೆಪಿ ಅಧಿಕಾರದಿಂದ ಹೋಗಬೇಕು

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ

ಮಂಗಳೂರು: ಕೇಂದ್ರ ಮತ್ತು ಕರ್ನಾಟಕದಲ್ಲಿನ ಬಿಜೆಪಿ ನೇತೃತ್ವದ ಭ್ರಷ್ಟ ಸರ್ಕಾರವನ್ನು ಅಧಿಕಾರದಿಂದ ಹೊರಹಾಕಿದರೆ ಮಾತ್ರ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಲು ಅವಕಾಶವಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಹೇಳಿದ್ದಾರೆ.



ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಖರ್ಗೆ, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ನೇತೃತ್ವದ ಸರ್ಕಾರಗಳಲ್ಲಿನ (ಬಿಜೆಪಿ ಆಡಳಿತವಿರುವ ರಾಜ್ಯಗಳು) ಭ್ರಷ್ಟಾಚಾರದ ಬಗ್ಗೆ ಮೌನವಾಗಿದ್ದಾರೆ. ವಿರೋಧ ಪಕ್ಷದ ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಕೇಂದ್ರ ತನಿಖಾ ದಳ (ಸಿಬಿಐ) ಸೇರಿದಂತೆ ತನಿಖಾ ಸಂಸ್ಥೆಗಳನ್ನು ಬಳಸುತ್ತಿದ್ದಾರೆ ಎಂದು ದೂರಿದರು.

ವಿರೋಧ ಪಕ್ಷದ ನಾಯಕರ ವಿರುದ್ಧದ ವಿಷಯ ಬಂದಾಗ ಮಾತ್ರ ಮೋದಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ದೇಶದಲ್ಲಿ ಹಲವಾರು ಯೋಜನೆಗಳೊಂದಿಗೆ ಕಾಂಗ್ರೆಸ್ ಯಾವಾಗಲೂ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದೆ. 70 ವರ್ಷಗಳಲ್ಲಿ ಕಾಂಗ್ರೆಸ್ ಏನು ಮಾಡಿದೆ ಎಂದು ಮೋದಿ ಪ್ರಶ್ನಿಸುತ್ತಾರೆ. ಆದರೆ, ಅವರು ಬಿಜೆಪಿಯ ಅವಧಿಯನ್ನು ಮರೆತಿದ್ದಾರೆ. ಕಳೆದ ಒಂಬತ್ತು ವರ್ಷಗಳಲ್ಲಿ ದೇಶ ಮತ್ತು ಕರ್ನಾಟಕದಲ್ಲಿ ಡಬಲ್ ಎಂಜಿನ್ ಸರ್ಕಾರ ಏನು ಮಾಡಿದೆ ಎಂದು ಪ್ರಶ್ನಿಸಿದರು.

ಎಂಜಿನ್ ಹಳಿ ತಪ್ಪಿದೆ. ಸಿಂಗಲ್ ಇಂಜಿನ್ ಎಂದರೆ ಶೇ 40 ಕಮಿಷನ್, ಡಬಲ್ ಇಂಜಿನ್ ಶೇ 80ರಷ್ಟು ಕಮಿಷನ್ ಅನ್ನು ಹೊರತೆಗೆಯುತ್ತಿದೆ ಎಂದರ್ಥವೇ. ರಾಜ್ಯದಲ್ಲಿ ಮುಂಬರುವ ವಿಧಾನಸಭಾ ಚುನಾವಣೆ ಸಾರ್ವಜನಿಕರು ಸೇರಿದಂತೆ ಎಲ್ಲರಿಗೂ ಅತ್ಯಂತ ಮಹತ್ವದ್ದಾಗಿದೆ ಎಂದು ಖರ್ಗೆ ಹೇಳಿದರು.

ಬಿಜೆಪಿಯ ಅಡಿಯಲ್ಲಿ ಪ್ರಜಾಪ್ರಭುತ್ವ ಉಳಿಯುವುದು ಮತ್ತು ಸಾಂವಿಧಾನಿಕ ತತ್ವಗಳನ್ನು ಅನುಸರಿಸುವುದು ನಡೆಯುತ್ತಿಲ್ಲ. 224 ಸದಸ್ಯ ಬಲದ ವಿಧಾನಸಭೆಯಲ್ಲಿ ಜನರು 150 ಸ್ಥಾನಗಳನ್ನು ನೀಡುವ ಮೂಲಕ ಕಾಂಗ್ರೆಸ್‌ಗೆ ಬಹುಮತ ನೀಡಬೇಕು ಎಂದು ಮತದಾರರನ್ನು ಒತ್ತಾಯಿಸಿದ ಖರ್ಗೆ, ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸಲು ಜನರು ಮುಂದಾಗಬೇಕು ಎಂದರು.

ನಾವು ಕರ್ನಾಟಕದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಆಡಳಿತ ಮತ್ತು ರಾಜ್ಯದಲ್ಲಿ ಆಗಿರುವ ಅಭಿವೃದ್ಧಿಯ ಬಗ್ಗೆ ಮಾತನಾಡಬೇಕು. ರಾಜ್ಯದಲ್ಲಿ ಈಗ ಕಮಿಷನ್ ಇಲ್ಲದೆ ಯಾವುದೇ ಕೆಲಸ ಸಾಧ್ಯವಿಲ್ಲ. ಸಮರ್ಥ ಆಡಳಿತ, ಅಭಿವೃದ್ಧಿ ಮತ್ತು ಬಂಡವಾಳ ಹೂಡಿಕೆಗೆ ಹೆಸರಾಗಿದ್ದ ಕರ್ನಾಟಕ, ಬಿಜೆಪಿ ಸರ್ಕಾರದ ದುರಾಡಳಿತದಿಂದ ಎಲ್ಲ ಖ್ಯಾತಿಯನ್ನು ಕಳೆದುಕೊಳ್ಳುತ್ತಿದೆ. ಬಿಜೆಪಿ ಸರ್ಕಾರ ಶಿಕ್ಷಣ ಮತ್ತು ಬಂಡವಾಳ ಹೂಡಿಕೆಯನ್ನು ನಿರ್ಲಕ್ಷಿಸಿ ನೇರವಾಗಿ ಭ್ರಷ್ಟಾಚಾರದಲ್ಲಿ ತೊಡಗಿದೆ. ದೇಶದಲ್ಲಿ ನಿರುದ್ಯೋಗ ಯುವಕರ ಮುಖ ನೋಡುತ್ತಿದೆ ಎಂದರು. ರಾಜ್ಯವನ್ನು 'ಎಟಿಎಂ' ಮಾಡಲು ಕಾಂಗ್ರೆಸ್ ಬಯಸುತ್ತಿದೆ ಎಂಬ ಬಿಜೆಪಿ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಖರ್ಗೆ, ಬಿಜೆಪಿ ಹಣ ಮತ್ತು ಬಲವನ್ನು ಬಳಸುತ್ತಿದೆ, ರಾಜಕೀಯ ಲಾಭಕ್ಕಾಗಿ ಸರ್ಕಾರಿ ಯಂತ್ರವನ್ನು ಬಳಸುತ್ತಿದೆ ಎಂದು ದೂರಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್, ಹಾಲಿ ಶಾಸಕ ಯು.ಟಿ.ಖಾದರ್, ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಜೆ.ಆರ್.ಲೋಬೋ, ಬಂಟ್ವಾಳ ಅಭ್ಯರ್ಥಿ ಬಿ.ರಮಾನಾಥ್ ರೈ, ಮಂಜುನಾಥ್ ಭಂಡಾರಿ ಇತರರಿದ್ದರು.



ನಂಜನಗೂಡು ತಾಲೂಕು, ರಾಂಪುರ ಗ್ರಾಪಂ ವ್ಯಾಪ್ತಿಯ ಬಿದರಗೂಡು ಗ್ರಾಮದಲ್ಲಿ ನರೇಗಾ ಯೋಜನೆಯ ರಸ್ತೆ ಅಭಿವೃದ್ಧಿ ಕಾಮಗಾರಿ ಸ್ಥಳದಲ್ಲಿ ಕಾರ್ಮಿಕರಿಗೆ ಮತದಾನದ ಅರಿವು ಮೂಡಿಸಲಾಯಿತು. ಈ ವೇಳೆ ಮಹಿಳಾ ಕಾರ್ಮಿಕರು 'ಮೇ 10 ರಂದು ತಪ್ಪದೆ ಮತ ಚಲಾಯಿಸಿ' ಎಂದು ರಂಗೋಲಿ ಮೂಲಕ ಜಾಗೃತಿ ಮೂಡಿಸಿದರು. ಪಿಡಿಓ ಮಂಜುಳಾ, ಐಇಸಿ ಸಂಯೋಜಕಿ ಕಾವ್ಯ, ಎನ್‌ಆರ್‌ಎಲ್‌ಎಂ ಲತಾ ಇದ್ದರು.

ನಾಳೆ ಭವಿಷ್ಯ ನಿಧಿ ನಿಮ್ಮ ಹತ್ತಿರ ವಿಶೇಷ ಕಾರ್ಯಕ್ರಮ

ಮೈಸೂರು, ಏ.25– ಭವಿಷ್ಯ ನಿಧಿ ನಿಮ್ಮ ಹತ್ತಿರ 2.0 ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮವನ್ನು ಮೈಸೂರು ಪ್ರಾದೇಶಿಕ ಕಚೇರಿ ವತಿಯಿಂದ ಏ.27 (ಗುರುವಾರ)ರ ಬೆಳಗ್ಗೆ 9 ಗಂಟೆಯಿಂದ ಮೈಸೂರು ಇಪಿಎಫ್‌ಓ ವ್ಯಾಪ್ತಿಯ ಎಲ್ಲಾ ನಾಲ್ಕು ಜಿಲ್ಲೆಗಳಲ್ಲಿ ಅಂದರೆ, ಮೈಸೂರು, ಮಂಡ್ಯ, ಮಡಿಕೇರಿ ಮತ್ತು ಚಾಮರಾಜನಗರ ದಲ್ಲಿ ಏರ್ಪಡಿಸಲಾಗಿದೆ. ಪಿಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಈ ಕಾರ್ಯಕ್ರಮಕ್ಕೆ ಹಾಜರಾಗಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು 0821–2599200/ 222 ಮೂಲಕ ಸಂಪರ್ಕಿಸಬಹುದು. ಇಲ್ಲವೆ ro.mysore@epfindia.gov.in ಇದಕ್ಕೆ ಮೇಲ್ ಮಾಡಿ ಅಥವಾ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿ, ಮೈಸೂರು ಸಾಮಾಜಿಕ ಮಾಧ್ಯಮ ವೇದಿಕೆ(@epfomysore) ಗೆ ಭೇಟಿ ನೀಡಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚಾಮರಾಜದಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಗೆಲ್ಲಿಸಿಕೊಡಿ

● ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಟಾಸ್ಕ್ ● ಇಲ್ಲದೇ ಹೋದಲ್ಲಿ ನನ್ನ ಬಳಿ ಯಾವ ನೆರವೂ ಕೇಳಬೇಡಿ





ಮೈಸೂರು, ಏ.25(ಆರ್‌ಕೆ)–ಚಾಮರಾಜ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಅವರನ್ನು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪಕ್ಷದ ಮುಖಂಡರು, ನಗರ ಪಾಲಿಕೆ ಸದಸ್ಯರು ಹಾಗೂ ಕಾರ್ಯಕರ್ತರಿಗೆ ಟಾಸ್ಕ್ ನೀಡಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಇಂದು ಏರ್ಪಡಿಸಿದ್ದ ಚಾಮರಾಜ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಈ ಕ್ಷೇತ್ರದ ಮತದಾರರು ಜೆಡಿಎಸ್ ಪಕ್ಷದ ಪರವಾಗಿದ್ದಾರೆ. ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ ಎಂಬ ಆಶಾಭಾವನೆ ರಾಜ್ಯದ ಜನರಲ್ಲಿದೆ. ಆದರೆ ಮುಖಂಡರು, ಕಾರ್ಯಕರ್ತರು ಶಕ್ತಿ ಮೀರಿ ಕೆಲಸ ಮಾಡಬೇಕು ಎಂದು ಹೇಳಿದರು.

ರಮೇಶ್ ಅವರು ಸುಸಂಸ್ಕೃತ ಕುಟುಂಬದಿಂದ ಬಂದ ಸಂಭಾವಿತರು. ಅಭ್ಯರ್ಥಿ ಆಯ್ಕೆ ವಿಚಾರ ಬಂದಾಗ ಈ ಭಾಗದ ನಾಯಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್ ಸೇರಿದಂತೆ ಹಲವು ಮುಖಂಡರು ಸೂಚಿಸಿದ ಅಭ್ಯರ್ಥಿಯನ್ನೇ ಕಣಕ್ಕಿಳಿಸಲಾಗಿದೆ. ಅದಕ್ಕೆ ಆಕಾಂಕ್ಷಿಗಳಾಗಿದ್ದ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು ಹಾಗೂ ಇತರರೂ ಸಹ ನೀವು ನಿರ್ಧರಿಸಿದ ಅಭ್ಯರ್ಥಿ ಪರ ಕೆಲಸ ಮಾಡಿ ಗೆಲ್ಲಿಸುತ್ತೇವೆಂದು ಹೇಳಿದ್ದರು. ಈಗ ನೀವೆಲ್ಲಾ ಸೇರಿ ಹಗಲು–ರಾತ್ರಿ ಕೆಲಸ ಮಾಡಿ ಚಾಮರಾಜ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಮೇಶ್‌ರನ್ನು ಗೆಲ್ಲಿಸಬೇಕು ಎಂದು ಸೂಚಿಸಿದರು.

ನಗರಪಾಲಿಕೆ ಚುನಾವಣೆಯಲ್ಲಿ ಅತೀ ಹೆಚ್ಚು ಮಂದಿ ಗೆಲ್ಲಿಸುವ ನೀವು, ವಿಧಾನ ಸಭೆ, ಲೋಕಸಭೆ ಚುನಾವಣೆಯಲ್ಲಿ ಮಾತ್ರ ಚಾಮರಾಜ ಕ್ಷೇತ್ರದ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಿಲ್ಲ. ನಿದ್ರಾವಸ್ಥೆಯಿಂದೆದ್ದು, ಕೆಲಸ ಮಾಡಿ, ಈ ಬಾರಿ ರಮೇಶ್ ಅವರನ್ನು ವಿಧಾನಸೌಧಕ್ಕೆ ಕಳುಹಿಸಿ. ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಿಂತಲೂ ನಮ್ಮ ಪಕ್ಷದ ಅಭ್ಯರ್ಥಿ ಸಂಭಾವಿತರು. ಅವರನ್ನು ಗೆಲ್ಲಿಸದಿದ್ದಲ್ಲಿ ಚಾಮರಾಜ ಕ್ಷೇತ್ರದ ಮುಖಂಡರು ಮುಂದೆ ಪಕ್ಷ ಅಧಿಕಾರಕ್ಕೆ ಬಂದಾಗ ಬೇರೆ ಬೇರೆ ಅನುಕೂಲ, ಸೌಲಭ್ಯ ಕೇಳಿಕೊಂಡು ನನ್ನ ಬಳಿಗೆ ಬರಬೇಡಿ, ಬಂದರೂ ನಾನು ಸ್ಪಂದಿಸುವುದಿಲ್ಲ ಎಂದು ಕುಮಾರಸ್ವಾಮಿ ಅವರು ಎಚ್ಚರಿಕೆ ನೀಡಿದರು.

ಉತ್ತರ ಕರ್ನಾಟಕ ಭಾಗದ ಜನ ಜೆಡಿಎಸ್ ಪರವಾಗಿದ್ದಾರೆ. ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್‌ರಂತಹ ಮುಖಂಡರಿದ್ದೂ, ಜೆಡಿಎಸ್ ಬಗ್ಗೆ ಪ್ರೀತಿ ಇರುವ ಮೈಸೂರಲ್ಲಿ ಪಕ್ಷದ ಅಭ್ಯರ್ಥಿಗಳು ಸೋತರೆ ಅದಕ್ಕೆ ಕಾರ್ಯಕರ್ತರೇ ಹೊಣೆಗಾರರಾಗುತ್ತಾರೆ. ಚಾಮರಾಜ ಕ್ಷೇತ್ರದ ಜನ ಜೆಡಿಎಸ್ ಅನ್ನು ಬೆಂಬಲಿಸುತ್ತಾರೆ. ಇಂದಿನಿಂದ ಕೆಲಸ ಮಾಡಿದಲ್ಲಿ ರಮೇಶ್ ಅವರನ್ನು ಅತೀ ಹೆಚ್ಚು ಮತಗಳ ಅಂತರದಿಂದ ಜಯಶೀಲರನ್ನಾಗಿಸಬಹುದು ಎಂದು ನುಡಿದರು.

ಆರೋಗ್ಯ ಸರಿ ಇಲ್ಲದಿದ್ದರೂ ರಾಜ್ಯಾದ್ಯಂತ ಸುತ್ತಾಡುತ್ತಿದ್ದೇನೆ. ಜನರೂ ಪ್ರೀತಿ ತೋರಿಸುತ್ತಿದ್ದಾರೆ. ಅವರ ಋಣ ತೀರಿಸಬೇಕಾಗಿದೆ. ಇಳಿವಯಸ್ಸಿನಲ್ಲೂ ಹೆಚ್.ಡಿ.ದೇವೇಗೌಡರು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಮೇ 18ಕ್ಕೆ ಜನ್ಮದಿನ ಆಚರಿಸಿಕೊಳ್ಳಲಿರುವ ದೇವೇಗೌಡರಿಗೆ ಪಕ್ಷದ ಅತೀ ಹೆಚ್ಚು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಉಡುಗೊರೆ ನೀಡೋಣ. ಇಂದೇ ಪಣ ತೊಟ್ಟು ದುಡಿದು ಉದ್ದೇಶ ಸಾಕಾರಗೊಳಿಸಿ ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು.

ಈ ಬಾರಿ ರಾಜ್ಯದಲ್ಲಿ ಜೆಡಿಎಸ್ 120ಕ್ಕೂ ಹೆಚ್ಚು ಸ್ಥಾನ ಗಳಿಸಿ ಅಧಿಕಾರ ಹಿಡಿಯಲಿದೆ. ಮೈಸೂರಿಗೆ ಕುಡಿಯುವ ನೀರು, ವಸತಿ ಯೋಜನೆ ಸೇರಿ ಹಲವು ಅಭಿವೃದ್ಧಿ ಮಾಡಿದ್ದೇವೆ. ಈಗ ಪಂಚರತ್ನ ಯೋಜನೆಗಳ ಮೂಲಕ ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿಯಂತಹ ಮಹತ್ವದ ಕಾರ್ಯಗಳನ್ನು ಅನುಷ್ಠಾನ ಮಾಡುತ್ತೇವೆ. ಆದ್ದರಿಂದ ನಮಗೆ ಪೂರಕವಾಗಿರುವ ಚಾಮರಾಜ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸಿ ಎಂದು ಕುಮಾರಸ್ವಾಮಿ ಅವರು ಮನವಿ ಮಾಡಿದರು.

ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್, ಎನ್.ಆರ್. ಕ್ಷೇತ್ರದ ಅಭ್ಯರ್ಥಿ ಅಬ್ದುಲ್ ಖಾದರ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾರ್ಪೊರೇಟರ್‌ಗಳಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಭಾಗ್ಯ ಮಾದೇಶ್, ಲಕ್ಷ್ಮಿ ಶಿವಣ್ಣ, ರಮಣಿ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ನಗರ ಜೆಡಿಎಸ್ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಕಾರ್ಪೊರೇಟರ್‌ಗಳಾದ ಎಂ.ಶಿವಣ್ಣ, ಮಹದೇಶ್, ಹೆಚ್.ಕೆ.ರಾಮು, ಮಂಜುನಾಥ್ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಿಗೆ ಉಂಡುವಾಡಿ ನೀರು ಯೋಜನೆ ನೀಡಿದ್ದು ಹೆಚ್‌ಡಿಕೆ

ಶಾಸಕ ಜಿ.ಟಿ.ದೇವೇಗೌಡ ಸಮರ್ಥನೆ

ಮೈಸೂರು, ಏ.25(ಆರ್‌ಕೆ)–ಮೈಸೂರಿಗೆ ಉಂಡುವಾಡಿ ಕುಡಿಯುವ ನೀರು ಸರಬರಾಜು ಯೋಜನೆಗೆ 350 ಕೋಟಿ ರೂ. ಅನುದಾನ ನೀಡಿದ್ದು, ಹೆಚ್.ಡಿ.ಕುಮಾರಸ್ವಾಮಿ ಅವರು ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ತಿಳಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಚಾಮರಾಜ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳಾಗಿದ್ದಾಗ ಕುಮಾರಸ್ವಾಮಿ ಅವರು ಇಡೀ ರಾಜ್ಯದ ಸಮಗ್ರ ಅಭಿವೃದ್ಧಿ ಯೋಜನೆ ಜಾರಿಗೊಳಿಸಿದ್ದರು. ಮೈಸೂರು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ಹಳೇ ಉಂಡುವಾಡಿ ಯೋಜನೆಗೆ 350 ಕೋಟಿ ರೂ. ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗಾಗಿ 150 ಕೋಟಿ ರೂ. ಅನುದಾನ ನೀಡಿದ್ದರು ಎಂದರು.

ಚಾಮರಾಜ ವಿಧಾನಸಭಾ ಕ್ಷೇತ್ರ ಜೆಡಿಎಸ್‌ಗೆ ಪೂರಕವಾಗಿದ್ದು, ಈ ಹಿಂದೆ ಹೆಚ್. ಕೆಂಪೇಗೌಡರು ಗೆದ್ದು ಶಾಸಕರಾಗಿದ್ದರು. ಇದೀಗ ಅವರ ಮಗ ಹೆಚ್.ಕೆ.ರಮೇಶ್ ಅವರು ಜೆಡಿಎಸ್ ನಿಷ್ಠಾವಂತ ಕಾರ್ಯಕರ್ತರಾಗಿದ್ದಾರೆ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಿಂತ ಜೆಡಿಎಸ್ ಪ್ರಬಲವಾಗಿದೆ. ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆಯನ್ನು ಜಾರಿಗೆ ತರಲು ಪಕ್ಷದ ಅಭ್ಯರ್ಥಿ ಪರ ನಾವೆಲ್ಲರೂ ಸೇರಿ ಗೆಲ್ಲಿಸುವ ಮೂಲಕ ಕುಮಾರಣ್ಣ ಅವರನ್ನು ಮತ್ತೆ ಮುಖ್ಯಮಂತ್ರಿ ಮಾಡಬೇಕೆಂದು ಜಿಟಿಡಿ ಕರೆ ನೀಡಿದರು. ಶಾಸಕ ಸಾ.ರಾ.ಮಹೇಶ್ ಹಾಗೂ ಅಭ್ಯರ್ಥಿ ಹೆಚ್.ಕೆ.ರಮೇಶ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.



ಮೈಸೂರಿನ ಬೋಗಾದಿಯಲ್ಲಿರುವ ಶ್ರೀ ಆದಿಚುಂಚನಗಿರಿ ಶಾಖಾ ಮಠಕ್ಕೆ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಶಾಸಕ ಎಲ್.ನಾಗೇಂದ್ರ ಭೇಟಿ ನೀಡಿ ಶ್ರೀ ಸೋಮನಾಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖಂಡರಾದ ರಮೇಶ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪುನೀತ್ ಉಪಸ್ಥಿತರಿದ್ದರು.



ಮೈಸೂರು ನಗರ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಡಾ.ರಾಜ್‌ಕುಮಾರ್ ಅವರ 94ನೇ ಜನ್ಮದಿನವನ್ನು ಬೆಂಗಳೂರಿನಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಿಹಿ ವಿತರಿಸಿ, ಆಚರಿಸಲಾಯಿತು. ವೇದಿಕೆ ಅಧ್ಯಕ್ಷ ಮಿಲ್ಕ್ ಮಂಜು, ಉಪಾಧ್ಯಕ್ಷ ನಾಗರಾಜ್, ಹನುಮಂತೇಗೌಡ, ಕಾರ್ಯದರ್ಶಿ ಕಿರಣ್‌ಸಿಂಗ್, ಸರ್ದಾರ್ ಮಹೇಶ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಕೆ.ಆರ್.ಕ್ಷೇತ್ರದ ಜನಾನುರಾಗಿ ಕೆ.ವಿ.ಮಲ್ಲೇಶ್ ಗೆಲುವಿಗೆ ಶ್ರಮಿಸಿ

ಜೆಡಿಎಸ್ ಕಾರ್ಯಕರ್ತರಿಗೆ ಮಾಜಿ ಸಿಎಂ ಹೆಚ್‌ಡಿಕೆ ಕರೆ



ಮೈಸೂರು, ಏ.25(ಆರ್‌ಕೆ)– ತಮ್ಮ ಹಲವು ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಜನಾನುರಾಗಿಯಾಗಿರುವ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ. ಮಲ್ಲೇಶ್ ಅವರ ಗೆಲುವಿಗೆ ಶ್ರಮಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಮೈಸೂರಿನ ಕುವೆಂಪುನಗರದ ಜಯಮ್ಮ–ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಇಂದು ಏರ್ಪಡಿಸಿದ್ದ ಕೃಷ್ಣರಾಜ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ನಿಸ್ವಾರ್ಥ ಸೇವೆ ಮುಂದುವರಿಸಿ, ಕ್ಷೇತ್ರದಲ್ಲಿ ಜನ ಮನ್ನಣೆ ಗಳಿಸಿರುವ ಕೆ.ವಿ.ಮಲ್ಲೇಶ್ ಅವರ ಪರ ಪ್ರಚಾರ ಮಾಡಿ ಅತೀ ಹೆಚ್ಚು ಮತಗಳ ಅಂತರದಿಂದ ಆಯ್ಕೆ ಮಾಡಿ ಕಳುಹಿಸುವಂತೆ ಮನವಿ ಮಾಡಿದರು.

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಜನರಿಗೆ ಆಸೆ–ಆಮಿಷಗಳನ್ನು ತೋರಿಸುತ್ತಿದ್ದು, ಜೆಡಿಎಸ್ ಕಾರ್ಯಕರ್ತರು ನಮ್ಮ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡಿ, ಪಕ್ಷದ ಅಭ್ಯರ್ಥಿ ಪರ ಮತ ಚಲಾಯಿಸುವಂತೆ ಮನವೊಲಿಸಬೇಕು. ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯ ದೊರಕಬೇಕು. ಬಡತನ ನಿರ್ಮೂಲನವಾಗಬೇಕು ಎಂಬ ಸಂವಿಧಾನದ ಆಶಯವನ್ನು ಸಾಕಾರಗೊಳಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

ಪಂಚರತ್ನ ಯೋಜನೆ ರೂಪಿಸಿರುವುದೇ ಜನರ ಸಂಕಷ್ಟ ನಿವಾರಣೆಗಾಗಿ. ಉಚಿತ ಶಿಕ್ಷಣ, ಆರೋಗ್ಯ, ಯುವಕರಿಗೆ ಉದ್ಯೋಗ, ಜನರಿಗೆ ಸೂರು ಒದಗಿಸುವ ಮೂಲಕ ನಾಡಿನ ಜನರ ಸಂಕಷ್ಟ ದೂರ ಮಾಡಬೇಕೆಂಬುದನ್ನು, ಪೂರ್ಣ ಬಹುಮತದ ಸರ್ಕಾರ ನೀಡುವ ಮೂಲಕ ನನಗೆ ಸಾಥ್ ನೀಡಿ ಎಂದು ಅವರು ಮನವಿ ಮಾಡಿದರು.

ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ಉಳಿಸಲು ಮಾಡುತ್ತಿರುವ ನಮ್ಮ ಹೋರಾಟಕ್ಕೆ ಫಲ ಸಿಗಬೇಕಾದರೆ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಅಧಿಕಾರಕ್ಕೆ ಬರಬೇಕು. ಈ ಬಾರಿ ಜೆಡಿಎಸ್‌ನತ್ತ ಜನರ ಒಲವಿಗೆ ನಮ್ಮ ಕಾರ್ಯಕರ್ತರು ಶ್ರಮಿಸಿ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವಂತೆಯೂ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದರು.


ಶಾಸಕ ಜಿ.ಟಿ.ದೇವೇಗೌಡ ಅವರು ಮಾತನಾಡಿ, ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ಭಾಗದ ಅಭಿವೃದ್ಧಿಗೆ ಕುಮಾರಸ್ವಾಮಿ ಅವರು ಅತೀ ಹೆಚ್ಚು ಅನುದಾನ ನೀಡಿದ್ದರು. ಮತ್ತೊಮ್ಮೆ ಅಧಿಕಾರ ಸಿಕ್ಕಿದ್ದಲ್ಲಿ ಇಡೀ ರಾಜ್ಯದ ಸಮಗ್ರ ಅಭಿವೃದ್ಧಿ ಮಾಡುವ ಕನಸು ಕಂಡಿದ್ದಾರೆ. ಆದ್ದರಿಂದ ನಾವೆಲ್ಲಾ ಸೇರಿ ಹೆಚ್ಚು ಮಂದಿ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಕುಮಾರಣ್ಣ ಅವರನ್ನು ಮತ್ತೆ ಸಿಎಂ ಮಾಡಬೇಕೆಂದರು.

ಅಭ್ಯರ್ಥಿ ಕೆ.ವಿ.ಮಲ್ಲೇಶ್, ಶಾಸಕ ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಮುಖಂಡರಾದ ಸಿ.ಮಹದೇಶ, ಎಸ್.ಬಾಲು, ಚೆನ್ನಪ್ಪ, ರವಿಚಂದ್ರೇಗೌಡ, ಕೆಂಪಣ್ಣ, ಚೆನ್ನಪ್ಪ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಹೂಟಗಳ್ಳಿ ಬಡಾವಣೆಯಲ್ಲಿ ಮಂಗಳವಾರ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಅವರು ಮನೆ ಮನೆಗೆ ತೆರಳಿ ಮತ ಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಪ್ರಧಾನ ಕಾರ್ಯದರ್ಶಿ ಪೈ.ಟಿ.ರವಿ, ದಾರಿಪುರ ಡಿ.ಚಂದ್ರಶೇಖರ್, ಬೆಳವಾಡಿ ಶ್ರೀನಿವಾಸ್, ಹೂಟಗಳ್ಳಿ ವೇದರಾಜು ರವಿ, ಚಂದ್ರಶೇಖರ್, ದೇವರಾಜಣ್ಣ, ಕೂರ್ಗಳ್ಳಿ ರೇವಣ್ಣ, ಲೋಕೇಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ಲಕ್ಷ್ಮೀ ವೆಂಕಟೇಶ್, ಭಾರತಿ ಪಶುಪತಿ, ರಾಧಾ ಪಾಲಂದಿರಾ ಮೋಹನ್, ರೀತೇಶ್, ಶೈವ, ಭಾಗ್ಯಶ್ರೀ ಭಟ್, ಬಿಜೆಪಿ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

‘ಶಂಕರರ ಹೆಜ್ಜೆ ಗುರುತುಗಳು’ ಪುಸ್ತಕ ಬಿಡುಗಡೆ



ಮೈಸೂರು, ಏ.25(ಎಸ್‌ಪಿಎನ್)– ಮೈಸೂರಿನ ಮಹಾರಾಜ ಪಬ್ಲಿಕೇಷನ್ ಹೊರತಂದಿರುವ, ಲೇಖಕ ಡಾ.ಎಸ್. ಮುರಳಿ ರಚಿತ ‘ಶಂಕರರ ಹೆಜ್ಜೆ ಗುರುತುಗಳು’ ಪುಸ್ತಕವನ್ನು ಸಂಸ್ಕೃತ ವಿದ್ವಾಂಸರಾದ ಡಾ.ಹೆಚ್.ವಿ.ನಾಗರಾಜರಾವ್ ಮಂಗಳವಾರ ಬಿಡುಗಡೆಗೊಳಿಸಿದರು.

ಮೈಸೂರು ಲಕ್ಷ್ಮೀಪುರಂನಲ್ಲಿರುವ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಯ ಸಭಾಂಗಣದಲ್ಲಿ ಲೇಖಕ ಡಾ.ಎಸ್.ಮುರಳಿ ರಚಿತ ‘ಶಂಕರರ ಹೆಜ್ಜೆ ಗುರುತುಗಳು’ ಪುಸ್ತಕ ಬಿಡುಗಡೆ ಹಾಗೂ ಶ್ರೀ ಶಂಕರಾಚಾರ್ಯ ಮತ್ತು ಶ್ರೀ ರಾಮಾನುಜಾಚಾರ್ಯ ಜಯಂತಿ ಅಂಗವಾಗಿ ಆಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮಾತನಾಡಿದರು.

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಎಂದೆಂದಿಗೂ ಶಾಶ್ವತವಾಗಿ ಉಳಿಯುವ ಹೆಸರು ಶ್ರೀ ಶಂಕರಾಚಾರ್ಯರದು. ಹಿಂದಿನ ಕಾಲದಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ದೇಶ ಸುತ್ತುವುದು ಕಷ್ಟಕರವಾಗಿತ್ತು. ಆ ಸಂದರ್ಭದಲ್ಲೇ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ದೇಶಾದ್ಯಂತ ಸಂಚರಿಸಿ, ಅಪಾರ ವಿದ್ವತ್ ಗಳಿಸಿ ಜನ ಮನ್ನಣೆ ಗಳಿಸಿದ್ದವರು ಆಚಾರ್ಯರು ಎಂದು ಬಣ್ಣಿಸಿದರು.

ಆಚಾರ್ಯರ ಸಾಧನೆ ಹಾಗೂ ತಮ್ಮ ಆದರ್ಶ ಜೀವನದಿಂದ ದೇಶಾದ್ಯಂತ ಪ್ರಸಿದ್ಧಿ ಪಡೆದಿದ್ದಾರೆ. ಈ ವೇಳೆ ಆಚಾರ್ಯರ ಕುರಿತು ಅನೇಕ ದಂತಕಥೆಗಳು ಜನರಲ್ಲಿ ಕೇಳಿ ಬರುತ್ತಿದ್ದವು. ಇದರಲ್ಲಿ ಆಚಾರ್ಯರು ದೈವಾಂಶ ಸಂಭೂತರು ಎಂಬ ವಾದವೂ ಇದೆ. ಹಾಗೆಯೇ ಆಚಾರ್ಯರು ತಮ್ಮ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ವೇದ, ಉಪನಿಷತ್‌ಗಳ ಅಧ್ಯಯನ ನಡೆಸಿ, ಅನೇಕ ಗ್ರಂಥಗಳನ್ನು ಕೂಡ ರಚಿಸಿದ್ದಾರೆ ಎಂದರು.

ಶ್ರೀ ಶಂಕರಾಚಾರ್ಯರು ತಮ್ಮ ಕಠಿಣ ಪರಿಶ್ರಮದಿಂದ ಜನರಿಗೆ ಜ್ಞಾನ ಮಾರ್ಗ ಹಾಗೂ ಮೋಕ್ಷ ಪಡೆಯಲು ‘ಭಕ್ತಿ ಮಾರ್ಗ’ವನ್ನೂ ತೋರಿಸಿಕೊಟ್ಟಿದ್ದಾರೆ. ಅಲ್ಲದೆ, ಕೇವಲ ಯಾಂತ್ರಿಕವಾಗಿ ಇರುವ ಕರ್ಮಯೋಗ ಪ್ರಪಂಚದ ಉನ್ನತಿಗೆ ಕಾರಣವಾಗುವುದಿಲ್ಲ ಎಂಬುದರ ಕುರಿತು ಶಂಕರಾಚಾರ್ಯರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಪ್ರಸ್ತುತ ಮಾನವನ ಉದ್ಧಾರವಾಗಬೇಕಾದರೆ, ಆಚಾರ್ಯರ ಜ್ಞಾನಮಾರ್ಗ ಅತ್ಯವಶ್ಯಕ ಎಂದು ಪ್ರತಿಪಾದಿಸಿದರು.

ಆಚಾರ್ಯರು ಬದುಕಿದ್ದು, ಕೇವಲ 32 ವರ್ಷ. ಆದರೆ, ಅವರು ಸಂಪಾದಿಸಿದ್ದ ಜ್ಞಾನ, ಅನುಸರಿಸಿದ ಆದರ್ಶಗಳು ಇನ್ನು ಸಾವಿರಾರು ವರ್ಷಗಳು ಕಳೆದರೂ ಜನಮಾನಸದಿಂದ ಮರೆಯಾಗುವುದಿಲ್ಲ. ಇಂತಹವರ ಬಗ್ಗೆ ಎಷ್ಟು ಕೇಳಿದರೂ ಎಷ್ಟು ಓದಿದರು ಮತ್ತೆಮತ್ತೆ ಕೇಳಬೇಕು ಅನಿಸುತ್ತದೆ ಎಂದರು.

ಲೇಖಕ ಡಾ.ಎಸ್.ಮುರುಳಿ ರಚಿತ ‘ಶ್ರೀ ಶಂಕರರ ಹೆಜ್ಜೆ ಗುರುತುಗಳು’ ಪುಸ್ತಕ ಶಂಕರಾಚಾರ್ಯರ ಕುರಿತು ಶ್ರೀ ಸಾಮಾನ್ಯರೂ ಕೂಡ ಅರ್ಥ ಮಾಡಿಕೊಳ್ಳಬಹುದಾದ ಪುಸ್ತಕ ಇದಾಗಿದೆ ಎಂದರು. ಈ ವೇಳೆ ಶ್ರೀ ಶಂಕರಾಚಾರ್ಯರು ಮತ್ತು ಆಚಾರ್ಯ ಶ್ರೀ ರಾಮಾನುಜರ ಜಯಂತಿ ಆಚರಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಕೇಂದ್ರ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಮಾತನಾಡಿ, ಶಂಕರಾಚಾರ್ಯರ ಕುರಿತು ಎಷ್ಟು ಅಧ್ಯಯನ ಮಾಡಿದರೂ ಸಾಲದು. ಅವರು ಬದುಕಿದ್ದ ಅಲ್ಪಾವಧಿಯಲ್ಲೇ ಸಾಕಷ್ಟು ಜ್ಞಾನ ಸಂಪಾದನೆ ಮಾಡಿದ್ದರಲ್ಲದೆ, ದೇಶಾದ್ಯಂತ ಸಂಚರಿಸಿ, ಭಾರತೀಯ ಪರಂಪರೆಯನ್ನು ಉಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಮೈಸೂರಿನ ಶ್ರೀ ರಾಮಕೃಷ್ಣ ಮಠ ಹಾಗೂ ಮಿಷನ್ ಪ್ರಕಟಣಾ ವಿಭಾಗದ ಮುಖ್ಯಸ್ಥ ಶ್ರೀ ಸ್ವಾಮಿ ಸರ್ವಜಯನಂದಜೀ ಮಹಾರಾಜ್ ಅಧ್ಯಕ್ಷತೆ ವಹಿಸಿದ್ದರು. ಮಹಾರಾಜ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಎಸ್. ಮುರಳಿ ಉಪಸ್ಥಿತರಿದ್ದರು.

ಮತ್ತೂರಿನ ಡಾ.ನಂದಕುಮಾರ್‌ಗೆ ಇಂಗ್ಲೆಂಡಿನ ಅತ್ಯುನ್ನತ ನಾಗರಿಕ ಪ್ರಶಸ್ತಿ



ಬೆಂಗಳೂರು, ಏ.25– ಶಿವಮೊಗ್ಗ ಜಿಲ್ಲೆಯ ಸಂಸ್ಕೃತ ಭಾಷಿಕ ಊರು ಮತ್ತೂರು ಗ್ರಾಮದವರಾದ ಡಾ.ಮತ್ತೂರು ನಂದಕುಮಾರ ಅವರಿಗೆ ‘ಮೋಸ್ಟ್ ಎಕ್ಸಲೆಂಟ್ ಆರ್ಡರ್ ಆಫ್ ಬ್ರಿಟಿಷ್ ಎಂಪೈರ್ (civil division) ಅಡಿಯಲ್ಲಿ ಮೆಂಬರ್ ಆಫ್ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್ (MBE) ಗೌರವ ಸಿಕ್ಕಿದೆ. ವಿದೇಶಿ ಪ್ರಜೆಗಳಿಗೆ ನೀಡುವ ಗೌರವ ಬ್ರಿಟಿಷ್ ಪ್ರಶಸ್ತಿಗಳಲ್ಲಿ ಇದೂ ಒಂದು. ಖ್ಯಾತ ಸಂಸ್ಕೃತ ವಿದ್ವಾಂಸ ಮತ್ತು ಶಿಕ್ಷಕ, ಡಾ ನಂದಕುಮಾರ ಪ್ರಸ್ತುತ ಲಂಡನ್‌ನಲ್ಲಿರುವ ಭಾರತೀಯ ವಿದ್ಯಾಭವನದ ಮುಖ್ಯಸ್ಥರಾಗಿದ್ದಾರೆ. ಯುಕೆ ವಿದೇಶಿ, ಕಾಮನ್‌ವೆಲ್ತ್ ಮತ್ತು ಅಭಿವೃದ್ಧಿ ಕಚೇರಿ ಪ್ರಕಾರ, ನಂದಕುಮಾರ ಅವರು ಇಂಗ್ಲೆಂಡಿನಲ್ಲಿ ಭಾರತೀಯ ಶಾಸ್ತ್ರೀಯ ಕಲೆಗಳ ಬೋಧನೆ, ಪ್ರವೇಶ ಮತ್ತು ಪ್ರದರ್ಶನಕ್ಕೆ ನೀಡಿದ ಕೊಡುಗೆಗಾಗಿ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ನಂದಕುಮಾರ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ನಂತರ ಲಂಡನ್ ವಿವಿಯಲ್ಲಿ ತಮ್ಮ ಪಿಎಚ್‌ಡಿ ಪಡೆದರು. ಇದಕ್ಕೂ ಮುನ್ನ ಮೈಸೂರು ವಿವಿಯಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಕಳೆದ 40 ವರ್ಷಗಳಿಂದ ಇಂಗ್ಲೆಂಡಿನಲ್ಲಿ ಭಾರತೀಯ ಸಂಸ್ಕೃತಿ ಮತ್ತು ಕಲೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ, ಇದು ಭಾರತದ ಹೊರಗಿನ ಕಲೆಗಳ ಪ್ರಚಾರಕ್ಕಾಗಿ ಅತಿ ದೊಡ್ಡ ಭಾರತೀಯ ಸಂಸ್ಥೆಯಾಗಿದೆ.



ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಮಾವಿನಹಳ್ಳಿ ಗ್ರಾಮದ ಚೌಡೇಗೌಡ, ಶಿವಣ್ಣೇಗೌಡ, ಬಸವರಾಜು, ಚಂದ್ರು, ಚೇತನ್, ಚಿದಾನಂದ, ನಿಂಗೇಗೌಡ, ಎಂ.ಬಿ.ಚೌಡೇಗೌಡ, ಸಿದ್ದೇಶ್, ಬಸವಲಿಂಗೇಗೌಡ, ಸಿದ್ದೇಗೌಡ, ಕುಮಾರ್, ಚಿಕ್ಕಹೊನ್ನಯ್ಯ, ನಂಜುಂಡಯ್ಯ, ಚೂರಿ ಕರಿಯ, ಶಂಕರ, ಸೀನ, ರಂಗಸ್ವಾಮಿ, ಚೆಲುವ, ಶಿವು, ಪ್ರಸನ್ನ, ಉಮೇಶ್, ಶಿವಣ್ಣ, ಸಿದ್ದಯ್ಯ, ಪ್ರತಾಪ್, ಮಹದೇವಸ್ವಾಮಿ, ಮಧು, ಸೋಮಣ್ಣ, ಕಾಳಸ್ವಾಮಿ, ಜೈ ಭೀಮ್ ಯುವಕರ ಸಂಘದ ಪದಾಧಿಕಾರಿಗಳು, ಯುವಕರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಇದೇ ವೇಳೆ ಗ್ರಾಮಸ್ಥರು ಜಿಟಿಡಿ ಅವರನ್ನು ಸನ್ಮಾನಿಸಿದರು. ರಾಮೇಗೌಡ, ರಮೇಶ್, ರಾಜೇಶ್, ಅಭಿ, ವಕೀಲರಾದ ಪಾಲಾಕ್ಷ, ಜಯಪುರ ಗ್ರಾಪಂ ಸದಸ್ಯರಾದ ಜವರನಾಯ್ಕ, ನಾಗರಾಜು, ಮಂಜುನಾಥ್, ಬೈರೇಶ್, ಮುತಾಲಿಕ್ ಹಾಗೂ ಗ್ರಾಮಸ್ಥರು ಇದ್ದರು.

ಪ್ರಚಾರಕ್ಕೆ ಅಧಿಕೃತ ಚಾಲನೆ ನೀಡಿದ ರಾಮಚಂದ್ರ



ಮಂಡ್ಯ, ಏ.25– ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬಿ.ಆರ್.ರಾಮಚಂದ್ರು ಅವರು ನಗರದ ವಿವಿಧ ವಾರ್ಡ್‌ಗಳಲ್ಲಿ ಮತಯಾಚನೆ ಮಾಡುವ ಮೂಲಕ ಅಧಿಕೃತವಾಗಿ ಪ್ರಚಾರಕ್ಕೆ ಚಾಲನೆ ನೀಡಿದರು.

ನಗರದ ಬನ್ನೂರು ರಸ್ತೆಯಲ್ಲಿರುವ ಶ್ರೀಶನೇಶ್ವರಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಚಾಮುಂಡೇಶ್ವರಿ ನಗರದಲ್ಲಿ ಮನೆ ಮನೆಗೆ ತೆರಳಿ ಮತ ಯಾಚಿಸಿದ ಅವರು, ರಾಜ್ಯದ ಅಭಿವೃದ್ಧಿ ಜಾತ್ಯತೀತ ಜನತಾದಳದಿಂದ ಮಾತ್ರ ಸಾಧ್ಯ ಅದಕ್ಕಾಗಿ ನನ್ನನ್ನು ಗೆಲ್ಲಿಸುವ ಮೂಲಕ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಮನವಿ ಮಾಡಿದರು.

ನೆರೆಯ ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷ ಅಧಿಕಾರದಲ್ಲಿ ಇರುವುದರಿಂದ ಆ ರಾಜ್ಯಗಳು ಅಭಿವೃದ್ಧಿಯಲ್ಲಿ ಮುನ್ನಡೆದಿವೆ. ನಮ್ಮ ಸಂಪತ್ತು ಹಾಗೂ ಹಣ ನಮ್ಮಲ್ಲೇ ಇರುತ್ತದೆ. ಅದೇ ರಾಷ್ಟ್ರೀಯ ಪಕ್ಷಗಳು ಗೆದ್ದರೆ ಎಲ್ಲವೂ ದೆಹಲಿಯ ನಾಯಕರ ಕೈ ಸೇರುತ್ತದೆ. ಇದರಿಂದ ನಮ್ಮ ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂದರು.

ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು ಮಾತನಾಡಿ, ಶಾಸಕ ಎಂ.ಶ್ರೀನಿವಾಸ್ ಅವರೂ ಈಗಲೂ ನಮ್ಮ ನಾಯಕರು. ಆದರೆ, ಅವರು ಟಿಕೆಟ್ ನೀಡಲಿಲ್ಲ ಎಂದು ಸ್ವಾಭಿಮಾನಿ ಪಡೆ ಕಟ್ಟಿಕೊಂಡಿದ್ದಾರೆ. ನಮಗೆ ಪಕ್ಷ ಮುಖ್ಯ, ಆದ್ದರಿಂದ ಪಕ್ಷದ ವರಿಷ್ಠರ ಆಣತಿಯಂತೆ ಬಿ.ಆರ್.ರಾಮಚಂದ್ರು ಅವರಿಗೆ ನಾನೂ ಸೇರಿದಂತೆ ಜೆಡಿಎಸ್‌ನ ಎಲ್ಲಾ ನಗರಸಭಾ ಸದಸ್ಯರು ಬೆಂಬಲ ನೀಡಿ ಅವರ ಗೆಲುವಿಗೆ ಪಣತೊಟ್ಟಿದ್ದು, ಅವರನ್ನು ಗೆಲ್ಲಿಸುವ ಮೂಲಕ ಕುಮಾರಸ್ವಾಮಿ ಅವರ ಕೈ ಬಲಪಡಿಸುತ್ತೇವೆ ಎಂದರು.

ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಸ್.ಪಿ.ಗೌರೀಶ್ ಮಾತನಾಡಿ, ನಮ್ಮನ್ನು ರಾಜಕೀಯವಾಗಿ ಬೆಳೆಸಿದ ಶಾಸಕ ಎಂ.ಶ್ರೀನಿವಾಸ್ ಅವರು ಇಂದಿಗೂ ನಮ್ಮ ಗುರುಗಳು. ಇನ್ನೂ ಕಾಲ ಮಿಂಚಿಲ್ಲ. ಸ್ವಾಭಿಮಾನಿ ಪಡೆ ಬಿಟ್ಟು 3 ಬಾರಿ ಶಾಸಕರಾಗಲು ಕಾರಣವಾಗಿರುವ ಜೆಡಿಎಸ್‌ಗೆ ಮತ್ತೆ ವಾಪಸ್ ಆಗಿ ರಾಮಚಂದ್ರು ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಈ ಸಂದರ್ಭ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ನಗರಸಭಾ ಉಪಾಧ್ಯಕ್ಷೆ ಇಷ್ರತ್ ಫಾತಿಮಾ, ಸದಸ್ಯರಾದ ಭಾರತೀಶ್, ಕುಮಾರ್, ನಾಗೇಶ್, ಮೀನಾಕ್ಷಿ ಪುಟ್ಟಸ್ವಾಮಿ, ಮುಖಂಡ ತುಳಸೀಧರ್ ಇತರರಿದ್ದರು.

ಮುಂದಿನ ಸಿಎಂ ಹೆಚ್ಡಿಕೆ: ಭವಿಷ್ಯ ನುಡಿದ ಶ್ವಾನ..!



ಮಂಡ್ಯ, ಏ.25– ಫಿಫಾ ವಿಶ್ವಕಪ್ ಚಾಂಪಿಯನ್ ಯಾರಾಗುತ್ತಾರೆ ಎಂದು ಅಕ್ಟೋಪಸ್ ಭವಿಷ್ಯ ನುಡಿದ ರೀತಿ ಸಕ್ಕರೆ ನಾಡಿನ ನಾಯಿ ಭವಿಷ್ಯ ನುಡಿದಿದ್ದು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಕರ್ನಾಟಕದ ಮುಂದಿನ ಸಿಎಂ ಆಗುವ ಯೋಗವಿದೆ ಎನ್ನುವ ಮೂಲಕ ಮುಂದಿನ ಮುಖ್ಯಮಂತ್ರಿ ಸುಳಿವು ನೀಡಿದೆ.

ಮಂಡ್ಯದ ಅಶೋಕ್ ನಗರದ ಗೋಪಿ ಎನ್ನುವವರ ಭೈರವ ಹೆಸರಿನ ಶ್ವಾನ ಮುಂದಿನ ಸಿಎಂ ಯಾರಾಗಲಿದ್ದಾರೆ ಎಂಬ ಭವಿಷ್ಯ ನುಡಿದಿದೆ. ಭೈರವ ಶ್ವಾನವನ್ನು ಸಾಕಿರುವ ಗೋಪಿ ಅವರು ಕಾಲಭೈರವನ ಭಕ್ತರಾಗಿದ್ದು, ಪ್ರತಿ ಸೋಮವಾರ ಇವರ ಕುಟುಂಬ ಕಾಲಭೈರವನ ಪೂಜೆ ಮಾಡಿಕೊಂಡು ಬಂದಿದೆ. ಅಲ್ಲದೇ ತಮ್ಮ ಶ್ವಾನಕ್ಕೆ ವಿಶೇಷ ಪೂಜೆ ಸಲ್ಲಿಸಿ ಈ ಬಾರಿ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂದು ಗೋಪಿ ಅವರು ಭೈರವನಿಗೆ ಕೇಳಿ, ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾದ ಬಸವರಾಜ ಬೊಮ್ಮಾಯಿ, ಹೆಚ್.ಡಿ.ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಅವರ ಫೋಟೋಗಳನ್ನು ಶ್ವಾನದ ಮುಂದೆ ಇಡಲಾಗಿತ್ತು. ಈ ವೇಳೆ ದೇವರತ್ತ ಒಂದು ಬಾರಿ ಮುಖ ಮಾಡಿದ ಶ್ವಾನ ಆ 3 ಫೋಟೋಗಳಲ್ಲಿ ಕುಮಾರಸ್ವಾಮಿ ಅವರ ಫೋಟೋವನ್ನು ಬಾಯಿಯಿಂದ ಕಚ್ಚಿ ತೆಗೆದುಕೊಟ್ಟಿದೆ.

ವಿಧಾನಸಭಾ ಚುನಾವಣೆಗೆ ಕೇವಲ 15 ದಿನ ಮಾತ್ರ ಬಾಕಿ ಉಳಿದಿದ್ದು, ಸಿಎಂ ಸ್ಥಾನಕ್ಕಾಗಿ ಮೂರು ಪಕ್ಷಗಳು ಶತಾಯ ಗತಾಯ ಪ್ರಯತ್ನಿಸುತ್ತಿವೆ. ಈಗಾಗಲೇ ಮುಂದೆ ಯಾವ ಸರ್ಕಾರ ಬರಬಹುದು ಎಂದು ಹಲವು ಸಮೀಕ್ಷೆಗಳು ನಡೆದಿವೆ. ಆದರೆ, ಶ್ವಾನವೊಂದು ಮುಂದಿನ ಸಿಎಂ ಯಾರಾಗಲಿದ್ದಾರೆ ಎಂದು ಭವಿಷ್ಯ ನುಡಿದಿದ್ದು, ಕಾಲ ಭೈರವನ ಪ್ರತಿರೂಪ ನುಡಿದಿರುವ ಭವಿಷ್ಯ ಕಾಂಗ್ರೆಸ್ ಮತ್ತು ಬಿಜೆಪಿಗೆ ಶಾಕ್ ನೀಡಿದೆ. ಅಲ್ಲದೇ ಈ ಭವಿಷ್ಯ ನಿಜಕ್ಕೂ ನಿಜವಾಗುತ್ತಾ ಎಂದು ಮೇ 13ರ ಫಲಿತಾಂಶದವರೆಗೂ ಕಾಯಬೇಕಿದೆ.

ಕಣದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ: ತಗ್ಗಹಳ್ಳಿ ವೆಂಕಟೇಶ್



ಮಂಡ್ಯ, ಏ.25– ಶ್ರೀರಂಗಪಟ್ಟಣ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ಕಣದಿಂದ ಹಿಂದೆ ಸರಿಯಲಿದ್ದಾರೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಹಾಗೂ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಆರೋಪಿಸಿದರು.

ಧೈರ್ಯ ಹಾಗೂ ತಾಕತ್ತಿದ್ದರೆ ನನ್ನ ವಿರುದ್ಧ ಚುನಾವಣೆ ಎದುರಿಸಿ. ಸೋಲು–ಗೆಲುವನ್ನು ಕ್ಷೇತ್ರದ ಜನತೆ ನಿರ್ಧರಿಸಲಿದ್ದಾರೆ. ಕಣದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ನನ್ನ ಸ್ಪರ್ಧೆ ಖಚಿತ. ಈ ರೀತಿ ಅಪಪ್ರಚಾರ ಮಾಡುವುದು ನಿಮಗೆ ಶೋಭೆ ತರುವುದಿಲ್ಲ ಎಂದು ಹಾಲಿ ಹಾಗೂ ಮಾಜಿ ಶಾಸಕರ ವಿರುದ್ಧ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಈಗಾಗಲೇ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ಕಳೆದ 35 ವರ್ಷಗಳಿಂದ ಜೆಡಿಎಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಆದರೆ, ವರಿಷ್ಠರು ನನಗೆ ಟಿಕೆಟ್ ನೀಡದೆ ಮೋಸ ಮಾಡಿದರು. ಆದರೆ, ಕ್ಷೇತ್ರದ ಜನತೆ ನನ್ನ ಕೈ ಹಿಡಿಯಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಕೊಟ್ಟ ಅಧಿಕಾರ ಉಳಿಸಿಕೊಳ್ಳದೇ ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿ ಕ್ಷೇತ್ರಕ್ಕೆ ಕಳಂಕ ತಂದಿದ್ದೀರಿ, ನಿಮ್ಮಿಂದ ಪಾಠ ಕಲಿಯುವ ಅಗತ್ಯವಿಲ್ಲ ಎಂದು ತಿರುಗೇಟು ನೀಡಿದರು ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅಧಿಕಾರ ದಾಹದಿಂದ ಪಕ್ಷದಿಂದ ಪಕ್ಷಕ್ಕೆ ಹಾರುವ ಹಕ್ಕಿ ನಾನಲ್ಲ. ಪಕ್ಷನಿಷ್ಠೆ ಇಲ್ಲದ ನೀವು ಬಂಡಾಯವೆದ್ದು ಕಾಂಗ್ರೆಸ್ ಸರ್ವನಾಶ ಮಾಡಿದ್ದೀರಿ, ಇದೀಗ ಜೆಡಿಎಸ್ ಕಾರ್ಯಕರ್ತರನ್ನು ಕಡೆಗಣಿಸುವ ಮೂಲಕ ಜೆಡಿಎಸ್ ಸರ್ವನಾಶ ಮಾಡಲು ಮುಂದಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಯುವ ಪ್ರಶಸ್ತಿ ವಿಜೇತ ಲಂಕೇಶ್, ಮುಖಂಡರಾದ ಸಿದ್ದರಾಜು, ಯೋಗೇಶ್, ಉಮೇಶ್, ಹಿತೇಶ್, ಪುಟ್ಟೇಗೌಡ ಹಾಜರಿದ್ದರು.

ಇಂದು ಮಂಡ್ಯದಲ್ಲಿ ಯೋಗಿ ಹವಾ

ಅಶೋಕ್ ಜಯರಾಂ ಪರ ಪ್ರಚಾರ



ಮಂಡ್ಯ, ಏ.25– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ನಾಳೆ (ಏ.26) ಮಂಡ್ಯಕ್ಕೆ ಆಗಮಿಸುತ್ತಿದ್ದು, ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ಪರ ರೋಡ್ ಶೋ ನಡೆಸುವ ಮೂಲಕ ಹವಾ ಸೃಷ್ಟಿಸಲಿದ್ದಾರೆ.

ನಾಳೆ ಬೆಳಗ್ಗೆ 8ಕ್ಕೆ ಉತ್ತರ ಪ್ರದೇಶದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಯೋಗಿ, ಬಳಿಕ ಹೆಲಿಕಾಪ್ಟರ್‌ನಲ್ಲಿ ಮಂಡ್ಯದ ಪಿಇಟಿ ಹೆಲಿಪ್ಯಾಡ್‌ಗೆ ಬಂದಿಳಿಯಲಿದ್ದಾರೆ.

ರೋಡ್ ಶೋ: ಪಿಇಟಿ ಹೆಲಿಪ್ಯಾಡ್‌ನಿಂದ ಜೆ.ಸಿ.ವೃತ್ತದವರೆಗೆ ಕಾರಿನಲ್ಲಿ ಬರುವ ಅವರು, ನಂತರ ಸಿಲ್ವರ್ ಜ್ಯುಬಿಲಿ ಪಾರ್ಕ್‌ವರೆಗೂ ರೋಡ್ ಶೋ ಮೂಲಕ ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ಪರ ಪ್ರಚಾರ ನಡೆಸುವರು.

ಸಮಾವೇಶದಲ್ಲಿ ಭಾಗಿ: ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ನಡೆಯುವ ಸಮಾವೇಶದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಲಿದ್ದಾರೆ. ನಂತರ ವಿಜಯಪುರದತ್ತ ಪ್ರಯಾಣ ಬೆಳೆಸುವರು ಎಂದು ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ತಿಳಿಸಿದರು.

ಮಂಡ್ಯ ಕಡೆಗಣಿಸಿದ ಹೆಚ್‌ಡಿಕೆ: ಸಿಆರ್‌ಎಸ್ ಆರೋಪ



ಕೆ.ಆರ್.ಪೇಟೆ, ಏ.25– ಅಕ್ಕಪಕ್ಕದ ಜಿಲ್ಲೆಗೆ ಹೋಲಿಕೆ ಮಾಡಿದರೆ ಮಂಡ್ಯ ಜಿಲ್ಲೆ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. 2018ರ ಚುನಾವಣೆಯಲ್ಲಿ ಸುಳ್ಳು ಆಶ್ವಾಸನೆ ನೀಡಿ ಜಿಲ್ಲೆಯ ಏಳೂ ಕ್ಷೇತ್ರಗಳಲ್ಲೂ ಗೆಲುವು ಸಾಧಿಸುವ ಮೂಲಕ ಕಾಂಗ್ರೆಸ್ ಬೆಂಬಲದೊಂದಿಗೆ ಕುಮಾರಣ್ಣನೇ ಮುಖ್ಯಮಂತ್ರಿಯಾದರೂ ಮಂಡ್ಯ ಜಿಲ್ಲೆ ಕಡೆಗಣಿಸಿದ್ದಾರೆ ಎಂದು ಮಾಜಿ ಸಚಿವ ಚೆಲುವರಾಯಸ್ವಾಮಿ ಆರೋಪಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ವಿವಿಧ ಪಕ್ಷಗಳ ಮುಖಂಡರಾದ ರಮೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ನಾಗರಾಜು, ನಿವೃತ್ತ ಶಿಕ್ಷಕ ನಿಂಗೇಗೌಡ, ಗೋಪಾಲ್, ಬಾಣೇಗೌಡ, ಲೋಕೇಶ್, ವಿಜಯಶೆಟ್ಟಿ, ಶಿವಣ್ಣ, ಗಿರೀಗೌಡ, ಎ.ಟಿ.ಪ್ರಭಾಕರ್, ಸ್ವಾಮಿಗೌಡ, ಶ್ರೀಧರ್, ಯೋಗೇಶ್, ಮಂಜೇಗೌಡ, ಮುರುಳಿ, ಶೇಖರ್, ಬಸವರಾಜು, ಜಯ ಕುಮಾರ್, ರಾಮೇಗೌಡ, ಯೋಗೇಶ್, ಪಾಪೇಗೌಡ, ಗವಿಸಿದ್ದೇಗೌಡ, ಲಕ್ಷ್ಮಣ್, ಆನಂದ್, ಕಿಶೋರ್ ಮತ್ತಿತರರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಮಂಡ್ಯ ಜಿಲ್ಲೆ ಸುತ್ತ ಇರುವ ಹಾಸನ, ಮೈಸೂರು, ಚಾಮರಾಜನಗರ, ರಾಮನಗರ ಜಿಲ್ಲೆಗಳು ಅಭಿವೃದ್ಧಿಯಾಗಿವೆ. ಆದರೆ ಮಂಡ್ಯ ಅಭಿವೃದ್ಧಿ ಮಾಡುತ್ತೇವೆಂದು ಕಳೆದ ಚುನಾವಣೆಯಲ್ಲಿ ಜಿಲ್ಲೆಯ ಏಳೂ ಸ್ಥಾನಗಳಲ್ಲಿ ಜೆಡಿಎಸ್ ಶಾಸಕರನ್ನು ಗೆಲ್ಲಿಸಿಕೊಂಡು 14 ತಿಂಗಳು ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಕುಮಾರಣ್ಣ ಅವರು ಮಂಡ್ಯ ಜಿಲ್ಲೆಗೆ ಯಾವುದೇ ಕೊಡುಗೆ ನೀಡಲಿಲ್ಲ. ಜಿಲ್ಲೆಯ ಜನ ಜೆಡಿಎಸ್ ಪಕ್ಷ ಹೊತ್ತು ಮೆರೆಸಿದರು. ಆದರೆ ಹಾಸನ ಜಿಲ್ಲೆ ಅಭಿವೃದ್ಧಿಗೆ ನೀಡಿದ ಅರ್ಧದಷ್ಟು ಅನುದಾನ ನೀಡಿದ್ದರೆ ಜಿಲ್ಲೆ ಸಮಗ್ರ ಅಭಿವೃದ್ಧಿ ಕಾಣುತ್ತಿತ್ತು ಹೀಗಾಗಿ ಈ ಬಾರಿ ಜೆಡಿಎಸ್ ಅನ್ನು ದೂರವಿಟ್ಟು, ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಈ ಬಾರಿ ಮತದಾರರು ಕಾಂಗ್ರೆಸ್ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ನಾನು ಜೆಡಿಎಸ್‌ನಲ್ಲಿದ್ದಾಗ ಕುಮಾರಸ್ವಾಮಿ ಮನವೊಲಿಸಿ ಮಂಡ್ಯ ಮಿಮ್ಸ್, ಕೆಆರ್.ಪೇಟೆ ಇಂಜಿನಿಯರಿಂಗ್ ಕಾಲೇಜು, ನಾಗಮಂಗಲದಲ್ಲಿ ಆರ್‌ಟಿಓ ಕಚೇರಿ, ಎಲ್ಲಾ ತಾಲೂಕುಗಳಲ್ಲಿ ಮಿನಿ ವಿಧಾನಸೌಧಗಳ ನಿರ್ಮಾಣ, ಪ್ರಮುಖ ಊರುಗಳಲ್ಲಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯ ಕೈಗೊಂಡೆವು. ಇದನ್ನು ಹೊರತುಪಡಿಸಿ ನಾವು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದ ನಂತರ ಒಂದೇ ಒಂದು ಗುರುತರವಾದ ಅಭಿವೃದ್ಧಿ ಕೆಲಸ ಜಿಲ್ಲೆಯಲ್ಲಿ ನಡೆದಿಲ್ಲ. ಜಿಲ್ಲೆ ಅಭಿವೃದ್ಧಿಗೆ ಶ್ರಮಿಸಲು ಸಜ್ಜಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡುವ ಮೂಲಕ ಜಿಲ್ಲೆ ಅಭಿವೃದ್ಧಿಗೆ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು. ಅದೇ ರೀತಿ ಕೆ.ಆರ್.ಪೇಟೆ ಕ್ಷೇತ್ರದ ಅಭ್ಯರ್ಥಿ ಬಿ.ಎಲ್.ದೇವರಾಜು ಅವರನ್ನು ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಿ ಟಿಕೆಟ್ ನೀಡದೇ ಮೋಸ ಮಾಡಿದ ಜೆಡಿಎಸ್ ಪಕ್ಷಕ್ಕೆ ತಿರುಗೇಟು ನೀಡಬೇಕು ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಎಂ.ಡಿ. ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್, ಬಿ.ನಾಗೇಂದ್ರಕುಮಾರ್, ಜಿಪಂ ಸದಸ್ಯ ದೇವರಾಜು, ತಾಲೂಕು ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಈರಪ್ಪ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪ್ರತಿಮಾ, ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಬಿ.ಚೇತನ್ ಕುಮಾರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಟಿ.ಎನ್.ದಿವಾಕರ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಸುರೇಶ್ ಸೇರಿದಂತೆ ಇನ್ನಿತರರಿದ್ದರು.

ಶ್ರೀರಂಗಪಟ್ಟಣ ತಾಲೂಕಿನ ಮೊಗರಹಳ್ಳಿ (ಮಂಟಿ) ಗ್ರಾಮದಲ್ಲಿ ಜೆಡಿಎಸ್ ಅಭ್ಯರ್ಥಿ, ಶಾಸಕ ರವೀಂದ್ರ ಶ್ರೀಕಂಠಯ್ಯ ಅವರ ಸಹೋದರಿಯರಾದ ರೂಪ, ರಾಜೇಶ್ವರಿ ಮತಯಾಚಿಸಿದರು.



ಧರ್ಮ ಪುನರುತ್ಥಾನಕ್ಕೆ ನಾಂದಿ ಹಾಡಿದ ಸಂತರು

ಜಗದ್ಗುರು ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಬ್ರಾಹ್ಮಣ ಮಹಾಸಭಾದ ಡಿ.ಟಿ.ಪ್ರಕಾಶ್ ಅಭಿಮತ



ಮೈಸೂರು, ಏ. 25– ದೇಶದ ನಾಲ್ಕು ಕಡೆ ಅದ್ವೈತ ಮಠಗಳನ್ನು ಸ್ಥಾಪಿಸಿ ಸನಾತನ ಧರ್ಮದ ಪುನರುತ್ಥಾನಕ್ಕೆ ನಾಂದಿ ಹಾಡಿದವರು ಶ್ರೀ ಶಂಕರಾಚಾರ್ಯರು ಹಾಗೂ ಜಗದ್ಗುರು ಶ್ರೀ ರಾಮಾನುಜಾ ಚಾರ್ಯರು ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಸ್ಮರಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀ ರಾಮಮಂದಿರದಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯರು ಹಾಗೂ ಜಗದ್ಗುರು ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಆಧ್ಯಾತ್ಮಿಕ ಜಗತ್ತು ಕಾರ್ಯಕ್ರಮ ದಲ್ಲಿ ಆಚಾರ್ಯತ್ರಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಇಡೀ ಭಾರತವನ್ನು ಕಾಲ್ನಡಿಗೆಯಲ್ಲಿ ಮೂರು ಬಾರಿ ಪರ್ಯಟಿಸಿದ ಶಂಕರಾಚಾರ್ಯರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಪೂರ್ವ ಪಶ್ಚಿಮ ಸಮುದ್ರದವರೆಗೆ ಹಬ್ಬಿರುವ ಭಾರತ ದೇಶ ಅಖಂಡ ಎಂದು ಸಾವಿರ ವರ್ಷಗಳ ಹಿಂದೆಯೇ ಘೋಷಿಸಿದ್ದರು ಎಂದರು. ಮೂವತ್ತೆರಡು ವರ್ಷಗಳ ಅಲ್ಪ ಜೀವಿತಾವಧಿಯಲ್ಲಿಯೇ ಬ್ರಹ್ಮಸೂತ್ರ, ಉಪನಿಷತ್ತುಗಳು, ಭಗವದ್ಗೀತೆಗೆ ಅದ್ಭುತವಾದ ಭಾಷ್ಯ ಬರೆದು ಅದ್ವೈತ ವೇದಾಂತವನ್ನು ಇಡೀ ದೇಶದೆಲ್ಲೆಡೆ ಸಾರಿದರು ಎಂದು ತಿಳಿಸಿದರು.

ಹಿರಿಯ ಸಮಾಜಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಶ್ರೀ ರಾಮನುಜಾಚಾರ್ಯರ ಕೊಡುಗೆ ಸಮಾಜಕ್ಕೆ ಅಪಾರವಾದುದು, 130 ವರ್ಷ ಗಳ ಕಾಲ ಬದುಕಿದ್ದ ರಾಮಾನುಜರು ಮೇಲುಕೋಟೆಗೆ ಭೇಟಿ ನೀಡಿ ಹಿಂದೂ ಧರ್ಮ ಮಹತ್ವವನ್ನು ಸಾರಿದರು. ತೊಣ್ಣೂರುಕೆರೆ ಸೇರಿದಂತೆ ಇನ್ನಿತರ ಐತಿಹಾಸಿಕ ಕೆರೆಗಳನ್ನು ನಿರ್ಮಿಸಿದರು, ಸಮಾಜದ ಎಲ್ಲಾ ಜಾತಿಯವರಿಗೂ ಸಂಸ್ಕಾರಗಳನ್ನು ಪರಿಚಯಿಸಿಕೊಟ್ಟರು. ಸಂಸ್ಕೃತಿಯಿಂದ ಆರೋಗ್ಯ ಶಿಕ್ಷಣ ವಿಜ್ಞಾನದ ಉಪಯೋಗದ ಮಹತ್ವವನ್ನು ತಿಳಿಸಿಕೊಟ್ಟರು. ಶ್ರೀ ರಾಮಾನುಜರು ವಿಶಿಷ್ಟಾದ್ವೈತ ಪ್ರತಿಪಾದಕರಾಗಿ ಶ್ರೀವೈಷ್ಣವ ಸಂಪ್ರದಾಯವನ್ನು ಸ್ಥಾಪಿಸಿದರು. ಸಾವಿರ ವರ್ಷದ ಹಿಂದೆಯೇ ಸರ್ವರಿಗೂ ಸಮಾನ ಹಕ್ಕು ಸಾಮರಸ್ಯದ ಬದುಕು ನಿರ್ಮಾಣಕ್ಕೆ ಬುನಾದಿ ಹಾಕಿದ ಶ್ರೀರಾಮಾನುಜರು ಎಲ್ಲರಿಗೂ ಆಧ್ಯಾತ್ಮದ ಸಾರವನ್ನು ತಿಳಿಸಿಕೊಟ್ಟರು ಎಂದು ಹೇಳಿದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರು ಮುಳ್ಳೂರು ಗುರುಪ್ರಸಾದ್, ಕಡಕೊಳ ಜಗದೀಶ್, ರಾಜಗೋಪಾಲ್, ಪುಟ್ಟಸ್ವಾಮಿ, ರಂಗನಾಥ್, ರವಿಶಂಕರ್, ಸುಚಿಂದ್ರ, ಹಾಗೂ ಇನ್ನಿತರರು ಭಾಗವಹಿಸಿದ್ದರು.

ಕಾಂಗ್ರೆಸ್ 10 ಪರ್ಸೆಂಟ್ ಕೆಲಸ ಮಾಡಿದ್ರೆ ವೋಟ್ ಕೇಳೋ ಅವಶ್ಯಕತೆ ಇರ್ತಿರಲಿಲ್ಲ: ಶಾ ಗುಡುಗು

2024ಕ್ಕೆ ಮತ್ತೆ ಮೋದಿ ಸರ್ಕಾರ ಅಧಿಕಾರಕ್ಕೆ ತನ್ನಿ ಎಂದ ಕೇಂದ್ರ ಸಚಿವ

ಬಾಗಲಕೋಟೆ, ಏ.25– ಬಿಜೆಪಿ ಸರ್ಕಾರ ಮಾಡಿದ ಕೆಲಸಗಳಲ್ಲಿ ಕಾಂಗ್ರೆಸ್ ಕೇವಲ 10 ಪರ್ಸೆಂಟ್ ಮಾಡಿದ್ದರೆ, ವೋಟ್ ಕೇಳುವ ಅವಶ್ಯಕತೆ ಇರುತ್ತಿರಲಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಡುಗಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಎಂ.ವಿ ಪಟ್ಟಣದಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಕಳೆದ 4 ವರ್ಷಗಳಲ್ಲಿ ಅನೇಕ ಕೆಲಸಗಳನ್ನು ಮಾಡಿದೆ. ನೇಕಾರರಿಗೆ 2 ರಿಂದ 5 ಲಕ್ಷವರೆಗೆ ಶೇ.3 ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸಿದೆ, 4 ಲಕ್ಷ ಕುಟುಂಬಗಳಿಗೆ ಮನೆ ನೀಡಿದೆ, 46 ಲಕ್ಷ ರೈತರಿಗೆ ಕಿಸಾನ್ ಸಮ್ಮಾನ್ ಪರಿಹಾರ ನೀಡಿದೆ. ನಾವು ಮಾಡಿದ ಕೆಲಸಗಳಲ್ಲಿ ಕಾಂಗ್ರೆಸ್ 10 ಪರ್ಸೆಂಟ್ ಮಾಡಿದ್ದರೂ ವೋಟ್ ಕೇಳಲು ಬರುವ ಅವಶ್ಯಕತೆ ಇರುತ್ತಿರಲಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಗುದ್ದಾಡುತ್ತಿದ್ದಾರೆ. ಆದ್ರೆ ಮುಖ್ಯಮಂತ್ರಿ ಆಗಲು ನಿಮ್ಮ ನಂಬರೇ ಬಂದಿಲ್ಲ, ಯಾಕೆ ಕಿತ್ತಾಡ್ತೀರಾ ಎಂದು ಶಾ ಕುಟುಕಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದರೆ, ರಿವರ್ಸ್ ಗೇರ್ ಸರ್ಕಾರ ಆಗುತ್ತೆ. ಕಾಂಗ್ರೆಸ್ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದರೆ, ಪೂರ್ಣ ಭ್ರಷ್ಟಾಚಾರ ನಡೆಯುತ್ತದೆ. ಹಾಗಾಗಿ ಈ ಬಾರಿಯ ಡಬಲ್ ಇಂಜಿನ್ ಸರ್ಕಾರಕ್ಕೆ ಮತ ನೀಡಿ, 2024 ರಲ್ಲಿ ಮತ್ತೆ ಮೋದಿ ನೇತೃತ್ವದ ಸರ್ಕಾರ ತನ್ನಿ ಎಂದು ಮನವಿ ಮಾಡಿದ್ದಾರೆ. ಕಾಂಗ್ರೆಸ್ ವೋಟ್ ಬ್ಯಾಂಕ್ ರಾಜಕಾರಣದ ಹಿಂದೆ ಬಿದ್ದಿದೆ. ನಾವು ಎಸ್ಸಿ, ಲಿಂಗಾಯತ ಹಾಗೂ ಒಕ್ಕಲಿಗರಿಗೆ ಮೀಸಲಾತಿ ಕಲ್ಪಿಸಿದ್ದೇವೆ. ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೆ ಮೀಸಲಾತಿ ರದ್ದು ಮಾಡುತ್ತೇವೆ ಅಂತಾರೆ. ಹೆಚ್ಚಿಸಿರುವ 4 ಪರ್ಸೆಂಟ್‌ನಲ್ಲಿ ಲಿಂಗಾಯತರ ಮೀಸಲಾತಿ ಕಡಿಮೆ ಮಾಡ್ತೀರಾ, ಒಕ್ಕಲಿಗರ ಮೀಸಲಾತಿ ಕಡಿಮೆ ಮಾಡ್ತಿರಾ ಹೇಳಿ ಎಂದು ಪ್ರಶ್ನಿಸಿದ್ದಾರೆ. ಮೋದಿಯವರು ಪಿಎಫ್‌ಐ ಬ್ಯಾನ್ ಮಾಡಿದರು, ಕಾಶ್ಮೀರವನ್ನ ಭಾರತದ ಸ್ವತ್ತಾಗಿ ಮಾಡಿದರು. ಆಗ ಕಾಶ್ಮೀರದಲ್ಲಿ ರಕ್ತದ ಹೊಳೆ ಹರಿಯುತ್ತೆ ಎಂದು ಕಾಂಗ್ರೆಸ್, ಮಮತಾ ಬ್ಯಾನರ್ಜಿ ಸೇರಿದಂತೆ ಕೆಲ ಎಡ ಪಂಥೀಯ ನಾಯಕರು ಕಾವ್ ಕಾವ್ ಅಂತಾ ಕೂಗಾಡಿದರು ಎಂದು ಕುಟುಕಿದರು.



ಹೆಚ್.ಡಿ.ಕುಮಾರಸ್ವಾಮಿ ಮಕ್ಕಳಂತೆ ಹಠ ಮಾಡ್ತಾರೆ!

ರಾಮನಗರ, ಏ.25– ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಮಕ್ಕಳಂತೆ ಹಠ ಮಾಡ್ತಾರೆ, ಸರಿಯಾಗಿ ಊಟಾನೆ ಮಾಡಲ್ಲ ಎಂದು ಪತ್ನಿ ಅನಿತಾ ಕುಮಾರಸ್ವಾಮಿ ಹೇಳಿದ್ದಾರೆ. ಹೆಚ್‌ಡಿಕೆ ಅವರ ಆರೋಗ್ಯ ವಿಚಾರ ಕುರಿತು ಚನ್ನಪಟ್ಟಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರು ಊಟದ ವಿಚಾರದಲ್ಲಿ ಮಕ್ಕಳಂತೆ ಹಠ ಮಾಡುತ್ತಾರೆ. ಬರೀ ಮೊಸರನ್ನ ತಿನ್ನುತ್ತಾರೆ. ಹೆಚ್ಚು ನೀರು ಕುಡಿಯಲ್ಲ, ಸರಿಯಾಗಿ ಊಟ ಮಾಡಲ್ಲ. ಹೀಗಾಗಿ ಅನಾರೋಗ್ಯ ಕಾಣಿಸಿಕೊಂಡಿತ್ತು. ಆಸ್ಪತ್ರೆಗೆ ದಾಖಲಾಗಿ ಒಂದು ದಿನ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಸದ್ಯ ಸ್ವಲ್ಪ ಚೇತರಿಸಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಚನ್ನಪಟ್ಟಣದಲ್ಲಿ ಹೆಚ್‌ಡಿಕೆ ಪರ ಪ್ರಚಾರ ಮಾಡಿದ ಅನಿತಾ ಕುಮಾರಸ್ವಾಮಿ, ಕ್ಷೇತ್ರದ ಹಲವು ಗ್ರಾಮಗಳಿಗೆ ಭೇಟಿ ನೀಡಿದರು. ಈ ವೇಳೆ ಮಾತನಾಡುತ್ತಾ, ನಾನು ಚನ್ನಪಟ್ಟಣದಾದ್ಯಂತ ಪ್ರಚಾರ ಮಾಡುತ್ತಿದ್ದು, ಕ್ಷೇತ್ರದ ಜನರು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಿದ್ದಾರೆ. ಇಲ್ಲಿನ ಜನ ಬುದ್ಧಿವಂತರಾಗಿದ್ದು, ಕುಮಾರಸ್ವಾಮಿ ಅವರನ್ನ ಅರ್ಥ ಮಾಡಿಕೊಂಡಿದ್ದಾರೆ. ಕುಮಾರಸ್ವಾಮಿ ಅವರು ಸಿಎಂ ಕ್ಯಾಂಡಿಡೇಟ್, ಅವರನ್ನ ಗೆಲ್ಲಿಸಿದ್ರೆ ಕ್ಷೇತ್ರಕ್ಕೆ ಅನ್‌ಲಿಮಿಟೆಡ್‌ಅನುದಾನ ಸಿಗಲಿದೆ.



ಕೆ.ಆರ್ ಕ್ಷೇತ್ರದಲ್ಲಿ ಶ್ರೀವತ್ಸ ಪರ ಸಂಸದ ಪ್ರತಾಪ್‌ಸಿಂಹ ಮತಯಾಚನೆ



ಮೈಸೂರು, ಏ.25(ಸಿಎನ್)– ಕೆ.ಆರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಪರ ಸಂಸದ ಪ್ರತಾಪ್ ಸಿಂಹ ಮಂಗಳವಾರ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಅಪಾರ ಕಾರ್ಯಕರ್ತರೊಂದಿಗೆ ವಾರ್ಡ್ ನಂ.52ರ ಇಟ್ಟಿಗೆಗೂಡು, ವಾರ್ಡ್ ನಂ.65ರ ಜಯನಗರದಲ್ಲಿನ ಮನೆ ಮನೆಗೆ ತೆರಳಿ ಅಭ್ಯರ್ಥಿ ಶ್ರೀವತ್ಸ ಅವರಿಗೆ ಮತ ನೀಡಿ, ಜಯಶೀಲರನ್ನಾಗಿ ಮಾಡುವಂತೆ ಮನವಿ ಮಾಡಿದರು. ಬಳಿಕ ಚಾಮುಂಡಿಪುರಂ ಸರ್ಕಲ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಬೇರೆ ಪಕ್ಷದವರ ರೀತಿ ಸುಳ್ಳು ಆಶ್ವಾಸನೆ ನೀಡಿ ಜನರನ್ನು ಮಂಕು ಮಾಡಲು ಬಂದಿಲ್ಲ. ಅಭಿವೃದ್ಧಿ ಆಧಾರದ ಮೇಲೆ ಮತ ಕೇಳಲು ಬಂದಿದ್ದೇವೆ. ಮತ್ತೊಮ್ಮೆ ಅವಕಾಶ ಮಾಡಿಕೊಡಿ ಎಂದು ಕೋರಿದರು.

ಕ್ಷೇತ್ರದ ಹಾಲಿ ಶಾಸಕರಾದ ಎಸ್.ಎ.ರಾಮದಾಸ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ಮಾಡಿದ ಪಕ್ಷ ಸಂಘಟನೆಯನ್ನು ಪರಿಗಣಿಸಿ, 1994ರಲ್ಲಿ ಅವರಿಗೆ ಟಿಕೆಟ್ ನೀಡಿದ್ದರು. ಅಲ್ಲಿಂದ ಸತತ 30 ವರ್ಷಗಳ ಕಾಲ ಕೆ.ಆರ್ ಕ್ಷೇತ್ರದ ಅಭಿವೃದ್ಧಿಗೆ ಅವರು ಶ್ರಮಿಸಿದ್ದಾರೆ. ಅದರಂತೆ ಕಳೆದ 30 ವರ್ಷಗಳಿಂದ ಬೂತ್ ಮಟ್ಟದಲ್ಲಿ ಕೆಲಸ ಮಾಡಿದ ಶ್ರೀವತ್ಸರಿಗೆ ಟಿಕೆಟ್ ನೀಡಿದ್ದು, ಅವರನ್ನು ಗೆಲ್ಲಿಸುವ ಜವಾಬ್ದಾರಿ ಎಲ್ಲಾ ಕಾರ್ಯಕರ್ತರ ಮೇಲಿದೆ ಎಂದರು.

ಸಿದ್ದರಾಮಯ್ಯ ಆರ್ಭಟ ತಣ್ಣಗಾಗಿದೆ: ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೋಮಣ್ಣ ಅವರನ್ನು ಕರೆತರುವ ಮೂಲಕ ಸಿದ್ದರಾಮಯ್ಯ ಅವರ ಆರ್ಭಟ ತಣ್ಣಗಾಗಿಸಿದ್ದೇವೆ. ಸದ್ಯಕ್ಕೆ ಅವರು ಬೇರೆ ಬೇರೆ ಕ್ಷೇತ್ರದ ಅಭ್ಯರ್ಥಿಗಳ ಪರ ಪ್ರಚಾರ ಮಾಡುವುದನ್ನು ಬಿಟ್ಟು ತಮ್ಮ ಕ್ಷೇತ್ರ ಉಳಿಸಿಕೊಂಡರೆ ಒಳಿತು ಎಂದು ವ್ಯಂಗ್ಯವಾಡಿದರು. ಯಾವ ಅಭಿವೃದ್ಧಿ ಕೆಲಸವನ್ನೂ ಮಾಡದ ಸಿದ್ದರಾಮಯ್ಯ, ಉಡಾಫೆ ಉತ್ತರ ನೀಡಿರುವುದೇ ಸಾಧನೆ. ಸಿದ್ದರಾಮಯ್ಯರವರು ತಮ್ಮ ಬೆಂಗಳೂರಿನ ಮನೆಯಿಂದ ಹೊರಟು, ಕೆಲವೇ ಗಂಟೆಗಳಲ್ಲಿ ಸಿದ್ದರಾಮನಹುಂಡಿ ತಲುಪುತ್ತಾರೆ ಎಂದರೆ ಅದೂ ಕೂಡ ಬಿಜೆಪಿ ಮಾಡಿದ ಸಾಧನೆಯಾಗಿದೆ. ಈ ಬಾರಿ ಕಾಂಗ್ರೆಸ್ ಧೂಳೀಪಟವಾಗಿ ಬಿಜೆಪಿ ಪಕ್ಷ ಮತ್ತೆ ಅಧಿಕಾರಕ್ಕೆ ಬರುತ್ತದೆ ಕಾದು ನೋಡಿ ಎಂದರು. ನಗರಪಾಲಿಕೆ ಸದಸ್ಯರಾದ ಮಾವಿ ರಾಮ್‌ಪ್ರಸಾದ್, ಬಿ.ವಿ. ಮಂಜುನಾಥ್, ಸೌಮ್ಯ ಉಮೇಶ್, ರಾಜ್ಯ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಜಯಶಂಕರ್, ಮುಖಂಡರಾದ ಶ್ರೀನಿವಾಸ್, ಶಿವಪ್ಪ, ಗೀತಾ ಯೋಗಾನಂದ ಮತ್ತಿತರರಿದ್ದರು.

ಜಗದೀಶ್ ಶೆಟ್ಟರ್ ಸೋಲಿಸುವ ಜವಾಬ್ದಾರಿ ಪ್ರಹ್ಲಾದ್ ಜೋಶಿಗೆ ನೀಡಿದ ಅಮಿತ್ ಶಾ

ಬೆಂಗಳೂರು, ಏ.25–ಕರ್ನಾಟಕ ವಿಧಾನಸಭೆ ಚುನಾವಣೆ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಪಕ್ಷದಿಂದ ಕಾಂಗ್ರೆಸ್‌ಗೆ ಜಿಗಿದಿರುವ ಜಗದೀಶ್ ಶೆಟ್ಟರ್ ನಡೆಗೆ ಅಸಮಾಧಾನಗೊಂಡಿರುವ ಬಿಜೆಪಿ, ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿಯನ್ನು ತವರು ನೆಲದಲ್ಲಿಯೇ ಸೋಲಿಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ನಿಟ್ಟಿನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ವೈಯಕ್ತಿಕವಾಗಿ ಕಾರ್ಯತಂತ್ರ ರೂಪಿಸಿದ್ದಾರೆ ಮತ್ತು ಮೇಲ್ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಬೆಳವಣಿಗೆಗಳ ನಂತರ, ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಸ್ಪರ್ಧೆಯು ಅತ್ಯಂತ ಕುತೂಹಲಕಾರಿ ಮಾರ್ಪಟ್ಟಿದೆ. ಕ್ಷೇತ್ರದ ಸ್ಥಳೀಯ ಮುಖಂಡರು ಹಾಗೂ ಪದಾಧಿಕಾರಿಗಳೊಂದಿಗೆ ಶಾ ಖುದ್ದು ಮಾತನಾಡಿ, ಶೆಟ್ಟರ್ ಅವರನ್ನು ಸೋಲಿಸಲು ಶಕ್ತಿಮೀರಿ ಶ್ರಮಿಸುವಂತೆ ಕೋರಿದ್ದಾರೆ. ಇನ್ನೊಂದೆಡೆ, ಶೆಟ್ಟರ್ ಅವರನ್ನು ಶತಾಯಗತಾಯ ಸೋಲಿಸಲು ಆ ಜವಾಬ್ದಾರಿಯನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ನೀಡಲಾಗಿದೆ ಎನ್ನಲಾಗಿದೆ.

ಪಕ್ಷ ಎಲ್ಲ ಸ್ಥಾನಮಾನ ನೀಡಿದೆ. ಅವರು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರೆ ಅದು ಬೇರೆಯದೇ ಆಗಿರುತ್ತಿತ್ತು. ಆದರೆ, ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಅವರನ್ನು ಕ್ಷಮಿಸಬಾರದು. ಆರು ಬಾರಿ ಶಾಸಕರಾಗಿರುವ ಶೆಟ್ಟರ್ ಅವರನ್ನು ಎದುರಿಸಲು ಎಲ್ಲಾ ರೀತಿಯ ಬೆಂಬಲ ನೀಡುವುದಾಗಿ ನಾಯಕರಿಗೆ ಭರವಸೆ ನೀಡಿದ್ದಾರೆ. ತಮ್ಮ ರಾಜೀನಾಮೆಯನ್ನು ಹಿಂಪಡೆದು ಪಕ್ಷದ ಅಭ್ಯರ್ಥಿ ಮಹೇಶ್ ಟೆಂಗಿನಕಾಯಿಗೆ ಬೆಂಬಲ ನೀಡಿದ ಮಹಾನಗರ ಪಾಲಿಕೆ ಸದಸ್ಯರಿಗೆ ಅಮಿತ್ ಶಾ ಧನ್ಯವಾದ ತಿಳಿಸಿದ್ದಾರೆ. ಇದೇ ವೇಳೆ, ಶೆಟ್ಟರ್ ವಿರುದ್ಧ ಕೆಲಸ ಮಾಡಲು, ಅವರು ಮತ್ತು ಕಾಂಗ್ರೆಸ್ ಮಾಡುತ್ತಿರುವ ಆರೋಪಗಳನ್ನು ಎದುರಿಸಲು ಆರ್‌ಎಸ್‌ಎಸ್‌ನ ವಿಶೇಷ ತಂಡವೊಂದು ಹುಬ್ಬಳ್ಳಿಗೆ ಬಂದಿಳಿದಿದೆ.

ಶೆಟ್ಟರ್ ಅವರ ಬೆಂಬಲಿಗರನ್ನು ಗುರುತಿಸಲು ತಂಡಗಳನ್ನು ನಿಯೋಜಿಸಲಾಗಿದೆ ಮತ್ತು ಬಿಜೆಪಿಯ ಯಾವುದೇ ಸದಸ್ಯರಿಂದ ಶೆಟ್ಟರ್ ಅವರಿಗೆ ಬೆಂಬಲ ದೊರೆಯದಂತೆ ನೋಡಿಕೊಳ್ಳಲು ಅವರ ನಿವಾಸದಲ್ಲಿನ ಚಟುವಟಿಕೆಗಳನ್ನೂ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಇದೇ ವೇಳೆ, ಜಗದೀಶ್ ಶೆಟ್ಟರ್ ಅವರು ನಾನು ಕಾರ್ಯಕರ್ತನಾಗಿ ಪಕ್ಷಕ್ಕೆ ಮರಳಿದ್ದು, ಉತ್ತರ ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಶೆಟ್ಟರ್ ವಿಜಯಿಯಾಗಲಿದ್ದಾರೆ ಎಂದು ಅವರ ಆಪ್ತ ಮೂಲಗಳು ವಿಶ್ವಾಸ ವ್ಯಕ್ತಪಡಿಸಿದ್ದು, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಸ್ಥಾನಗಳನ್ನು ಗೆಲ್ಲುವತ್ತ ಗಮನ ಹರಿಸಿದ್ದಾರೆ. ಅವರನ್ನು ಕಾಂಗ್ರೆಸ್ ಸ್ಟಾರ್ ಪ್ರಚಾರಕರನ್ನಾಗಿ ಮಾಡಲಾಗಿದ್ದು, ಅವರ ಸೇವೆಯನ್ನು ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ಬಳಸಿಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

ಇದು ಲೂಟಿ ಸರ್ಕಾರ





ಒಂದನೇ ಪುಟದಿಂದ

30 ಲಕ್ಷ ಮನೆಗಳನ್ನು ಬಡವರಿಗಾಗಿ ಕಟ್ಟಬಹುದಾಗಿತ್ತು. ಆದರೆ, ಜನರಿಗಾಗಿ ಬಳಸಬೇಕಿದ್ದ ಹಣ ಬಿಜೆಪಿಗರ ಪಾಲಾಗಿದೆ. ಇದನ್ನು ರಾಜ್ಯದ ಜನತೆ ಅರಿತುಕೊಳ್ಳಬೇಕು. ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಕರ್ನಾಟಕದ ಧ್ವಜ (ನಾಡಧ್ವಜ) ರೂಪಿಸಿ ಅನುಮೋದನೆಗೆ ಕಳುಹಿಸಿದ್ದಾಗ ಕೇಂದ್ರ ಸರ್ಕಾರ ಅದಕ್ಕೆ ಅನುಮೋದನೆ ನೀಡಲಿಲ್ಲ ಎಂದರು.

ನಿರುದ್ಯೋಗ ಸಮಸ್ಯೆ: ಕರ್ನಾಟಕದಲ್ಲಿ 2.5 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಲು ಬಿಜೆಪಿ ಸರ್ಕಾರಕ್ಕೆ ಆಗಲಿಲ್ಲ. ಹಣ ನೀಡಿದವರಿಗೆ ಅಕ್ರಮ ನೇಮಕಾತಿ ಮೂಲಕ ಸರ್ಕಾರಿ ಹುದ್ದೆ ನೀಡಿ, ಪ್ರತಿಭಾನ್ವಿತರು ಹಾಗೂ ಅರ್ಹರನ್ನು ವಂಚಿಸಲಾಯಿತು. ಪದವಿ, ಸ್ನಾತಕೋತ್ತರ ಪದವಿ ಹಾಗೂ ಉನ್ನತ ಶಿಕ್ಷಣ ಪಡೆದ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಲು ಬಿಜೆಪಿ ಸರ್ಕಾರವೇ ಕಾರಣ ಎಂದು ಕಿಡಿಕಾರಿದರು. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ. ಆ ನಂತರ ಖಾಲಿಯಿರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಇದು ನಮ್ಮ ವಚನ ಎಂದು ಭರವಸೆ ನೀಡಿದರು.

ಕೆಎಂಎಫ್ ಗಟ್ಟಿಗೊಳಿಸುತ್ತೇವೆ: ಕರ್ನಾಟಕ ಪ್ರತಿಷ್ಠೆಯಾಗಿರುವ ನಂದಿನಿ ಹಾಲು ಉತ್ಪನ್ನ ಸಂಸ್ಥೆಯಾದ ಕೆಎಂಎಫ್ ಕಬಳಿಸಲು ಹುನ್ನಾರ ನಡೆಸಲಾಗಿದೆ. ಈ ಹಿಂದೆ ಕೆಎಂಎಫ್‌ನಲ್ಲಿ ರಾಜ್ಯದಲ್ಲಿ 99 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಆದರೆ ಇಂದು 70 ಲಕ್ಷ ಲೀಟರ್ ಮಾತ್ರ ಹಾಲು ಉತ್ಪಾದನೆಯಾಗುತ್ತಿದೆ. ಉದ್ದೇಶಪೂರ್ವಕವಾಗಿ ಹಾಲಿನ ಉತ್ಪಾದನೆ ಕಡಿಮೆ ಮಾಡಲಾಗುತ್ತಿದೆ. ಅದನ್ನೇ ಮುಂದಿಟ್ಟುಕೊಂಡು ಗುಜರಾತಿನ ಅಮೂಲ್ ಸಂಸ್ಥೆಯೊಂದಿಗೆ ವಿಲೀನ ಮಾಡಲು ಸಂಚು ನಡೆಸಲಾಗುತ್ತಿದೆ. ಈಗಾಗಲೇ ಅಮೂಲ್ ಉತ್ಪನ್ನಗಳನ್ನು ರಾಜ್ಯಕ್ಕೆ ಪರಿಚಯಿಸುವ ಷಡ್ಯಂತ್ರ ರೂಪಿಸಲಾಗಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಕೆಎಂಎಫ್‌ನಲ್ಲಿ ಸಂಗ್ರಹವಾಗುತ್ತಿದ್ದ ಹೆಚ್ಚುವರಿ ಹಾಲನ್ನು ಶಾಲಾ ಮಕ್ಕಳಿಗೆ ಕೊಡುವ ಕ್ಷೀರಭಾಗ್ಯ ಯೋಜನೆಯನ್ನು ಜಾರಿಗೆ ತಂದರು. ಅತೀ ಹೆಚ್ಚಿನ ಹಾಲು ಉತ್ಪಾದನೆಯಾಗಿ ಶಾಲಾ ಮಕ್ಕಳಿಗೆ ಹಾಲು ನೀಡುವ ಕ್ಷೀರ ಭಾಗ್ಯ ಯೋಜನೆಯನ್ನು ಪರಿಚಯಿಸಲಾಯಿತು. ಹಾಲು ಉತ್ಪಾದಕರಿಗೆ 5ರೂ. ಪ್ರೋತ್ಸಾಹ ಧನ ನೀಡಲಾಯಿತು. ಇದರಿಂದ ಹಾಲು ಉತ್ಪಾದನೆಗೆ ಪ್ರೋತ್ಸಾಹ ನೀಡಿದಂತಾಯಿತು ಎಂದು ತಿಳಿಸಿದರು.

ರೈತರ ಹಿತ ಕಾಯಲು ಕಾಂಗ್ರೆಸ್ ಬದ್ಧ: ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಅನ್ನಭಾಗ್ಯ, ಕ್ಷೀರಭಾಗ್ಯ, ಪಶುಭಾಗ್ಯ, ಕೃಷಿ ಭಾಗ್ಯ, ವಿದ್ಯಾ ಸಿರಿ, ಇಂದಿರಾ ಕ್ಯಾಂಟೀನ್ ಯೋಜನೆಗಳನ್ನು ಜಾರಿಗೆ ತಂದಿತ್ತು. ಈ ಎಲ್ಲ ಯೋಜನೆಗಳನ್ನು ಜನಸಾಮಾನ್ಯರ ಅನುಕೂಲಕ್ಕಾಗಿ ಜಾರಿಗೆ ತರಲಾಗಿತ್ತು. ನೀರಾವರಿ ಯೋಜನೆ ಜಾರಿಗೊಳಿಸಿ, ಕೊಟ್ಟ ಭರವಸೆ ಈಡೇರಿಸಿ ನುಡಿದಂತೆ ನಡೆದಿದ್ದೆವು. ಈಗಾಗಲೇ ರಾಜಸ್ಥಾನದಲ್ಲಿ ನಮ್ಮ ಸರ್ಕಾರ ಬಂದ ನಂತರ ರೈತರ ಸಾಲ ಮನ್ನಾ ಮಾಡಿದ್ದೇವೆ. ಛತ್ತೀಸ್‌ಘಡದಲ್ಲಿ ರೈತರ ಬೆಳೆಗಳಿಗೆ ಹೆಚ್ಚು ಬೆಂಬಲ ಬೆಲೆ ನೀಡಲಾಗಿದೆ. ಹಿಮಾಚಲದಲ್ಲಿ ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುತ್ತಿದ್ದೇವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುತ್ತೇವೆ. 200 ಯುನಿಟ್ ವಿದ್ಯುತ್ ಉಚಿತ, ಬಡವರಿಗೆ ತಲಾ 10 ಕೆ.ಜಿ ಅಕ್ಕಿ, ನಿರುದ್ಯೋಗಿ ಪದವೀಧರರಿಗೆ ಪ್ರತಿ ತಿಂಗಳು 3 ಸಾವಿರ, ಡಿಪ್ಲೋಮಾ ಪದವೀಧರರಿಗೆ 1500 ರೂ ನಿರುದ್ಯೋಗ ಭತ್ಯೆ ನೀಡಲಾಗುವುದು. ಮನೆಯೊಡತಿಗೆ ಪ್ರತಿ ತಿಂಗಳು 2 ಸಾವಿರ ಪ್ರೋತ್ಸಾಹ ಧನ ನೀಡುತ್ತೇವೆ. ಆ ಮೂಲಕ ಬಡ ಜನರ ಹಿತ ಕಾಯಲು ಕಾಂಗ್ರೆಸ್ ಬದ್ಧವಾಗಿದೆ ಎಂದರು.

ಧಮಕಿ ಹಾಕಿದ್ದಾರೆ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಚುನಾವಣಾ ಪ್ರಚಾರದ ವೇಳೆ ಮೋದಿ ಅವರಿಗೆ ಮತ ಹಾಕದಿದ್ದರೆ, ಮೋದಿ ಅವರ ಆಶೀರ್ವಾದ ಸಿಗುವುದಿಲ್ಲ ಎಂಬ ಧಮಕಿ ಹಾಕಿರುವುದು ಖಂಡನೀಯ. ಮೋದಿ ಅವರ ಆಶೀರ್ವಾದ ಬೇಕು ಎಂದು ಹೇಳಿರುವುದು ಈ ರಾಜ್ಯಕ್ಕೆ ಮಾಡಿರುವ ದೊಡ್ಡ ಅಪಮಾನ. ರಾಜ್ಯದ ಜನರ ಆಲೋಚನೆ, ಪರಿಶ್ರಮದಿಂದ ಈ ರಾಜ್ಯ ನಿರ್ಮಾಣವಾಗಿದೆ. ಹಾಗಾಗಿ ಬಿಜೆಪಿಯನ್ನು ಕಿತ್ತೊಗೆಯಲು ಪಣ ತೊಡಬೇಕು ಎಂದು ಸಲಹೆ ನೀಡಿದರು.

ಚುನಾವಣೆಗಾಗಿ ಮೀಸಲಾತಿ ಅಸ್ತ್ರ: ಚುನಾವಣೆಯಲ್ಲಿ ರಾಜಕೀಯ ಲಾಭ ಮಾಡಿಕೊಳ್ಳಲು ಬಿಜೆಪಿಗರು ಮೀಸಲಾತಿ ಅಸ್ತ್ರವನ್ನು ಪ್ರಯೋಗಿಸಿದ್ದಾರೆ. ಆದರೆ, ರಾಜ್ಯ ಸರ್ಕಾರ ಸಲ್ಲಿಸಿದ್ದ ಮೀಸಲಾತಿ ಕುರಿತು ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ. ಇದು ಜಾರಿಯಾಗುವುದು ಅನುಮಾನವಾಗಿದೆ. ಮೀಸಲಾತಿ ಹೆಚ್ಚಳ ಮಾಡಿರುವುದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವ ಧೈರ್ಯ ಮಾಡಲಿಲ್ಲ. ಬಿಜೆಪಿಗರು ಮೀಸಲಾತಿ ವಿರೋಧಿಗಳು. ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ರೈತರ ಬೆಳೆಗೆ ಬೆಲೆ ಇಲ್ಲ: ರಾಜ್ಯದಲ್ಲಿ ಕಬ್ಬು ಬೆಳೆಗಾರರು ಸೇರಿದಂತೆ ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಆದರೆ ಕೇಂದ್ರ ಸರ್ಕಾರ ಉದ್ಯಮಿ ಅದಾನಿ ಅವರ ಉದ್ಯಮಗಳಿಗೆ 16 ಲಕ್ಷ ಕೋಟಿ ಲಾಭ ಮಾಡಿಕೊಟ್ಟಿದೆ ಎಂದು ಪ್ರಿಯಾಂಕಾ ಗಾಂಧಿ ತಿಳಿಸಿದರು.

ಗಮನ ಸೆಳೆದ ರೋಡ್ ಶೋ



ಹೆಳವರಹುಂಡಿ ಸಭಾ ಕಾರ್ಯಕ್ರಮ ಮುಗಿಸಿ ಚಾಮರಾಜನಗರ ಜಿಲ್ಲೆಯ ಹನೂರಿಗೆ ತೆರಳಲು ಮುಂದಾದಾಗ ಜನ ಪ್ರಿಯಾಂಕ ಗಾಂಧಿ ಅವರನ್ನು ನೋಡಲು ಮುಗಿ ಬಿದ್ದರು. ಇದನ್ನು ಗಮನಿಸಿದ ಪ್ರಿಯಾಂಕ, ತಾವು ಪ್ರಯಾಣಿಸುತ್ತಿದ್ದ ಇನ್ನೋವಾ ಕಾರಿನ ಹಿಂಬದಿಯ ಸೀಟಿನ ಕಿಟಕಿಯಿಂದ ಜನರತ್ತ ಕೈ ಬೀಸುತ್ತಾ ಸಾಗಿದರು. ಇದನ್ನು ಕಂಡ ಜನ ಇಂದಿರಾಗಾಂಧಿ ತದ್ರೂಪ ಎಂದು ಮಾತನಾಡಿಕೊಳ್ಳುತ್ತಿದ್ದರು.

ದರ್ಶನ್ ಧ್ರುವನಾರಾಯಣಗೆ ಸಾಂತ್ವನ



ವೇದಿಕೆಗೆ ಆಗಮಿಸಿದ ಪ್ರಿಯಾಂಕ ಗಾಂಧಿ ಅವರಿಗೆ ಶಾಸಕ ತನ್ವೀರ್ ಸೇಠ್ ಹಾಗೂ ಡಾ.ಹೆಚ್.ಸಿ.ಮಹದೇವಪ್ಪ ಅವರು ದರ್ಶನ್ ಧ್ರುವನಾರಾಯಣ ಅವರನ್ನು ಪರಿಚಯ ಮಾಡಿಕೊಟ್ಟರು. ಪ್ರಿಯಾಂಕಾ ಅವರು ದರ್ಶನ್ ಜೊತೆ ಕೆಲ ಸಮಯ ಮಾತನಾಡಿದರು. ಅಲ್ಲದೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಪ್ರಿಯಾಂಕ ಗಾಂಧಿ ಅವರಿಗೆ ಪರಿಚಯ ಮಾಡಿಕೊಟ್ಟು, ಅವರ ಪಕ್ಕದಲ್ಲೇ ಕುಳಿತುಕೊಳ್ಳಲು ಸೂಚಿಸಿದರು

ಭಾಷಣದ ಅನುವಾದ: 'ಎಲ್ಲರಿಗೂ ನಮಸ್ಕಾರ' ಎಂದು ಕನ್ನಡದಲ್ಲೇ ಸ್ಪಷ್ಟವಾಗಿ ಮಾತು ಆರಂಭಿಸಿದ ಪ್ರಿಯಾಂಕಾ ಗಾಂಧಿ ಹಿಂದಿಯಲ್ಲಿ ಭಾಷಣ ಮಾಡಿದರು. ಶಾಸಕ ಡಾ.ಯತೀಂದ್ರ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದರು. ಕೆಲವು ಸಂದರ್ಭದಲ್ಲಿ ನಾನು ದೊಡ್ಡದಾಗಿ ಹೇಳಿದೆ, ಇವರು ಚಿಕ್ಕದಾಗಿ ಹೇಳಿ ಮುಗಿಸಿದರು ಎಂದು ಪ್ರಿಯಾಂಕಾ ಗಾಂಧಿ ಹಾಸ್ಯ ಚಟಾಕಿ ಹಾರಿಸಿದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಎನ್.ಆರ್.ಕ್ಷೇತ್ರದ ಶಾಸಕ, ಅಭ್ಯರ್ಥಿ ತನ್ವೀರ್ ಸೇಠ್, ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ, ಚಾಮರಾಜ ಕ್ಷೇತ್ರದ ಅಭ್ಯರ್ಥಿ ಕೆ.ಹರೀಶ್‌ಗೌಡ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಘಟಕದ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮುಖಂಡ ಸುನಿಲ್ ಬೋಸ್, ಮಾಜಿ ಶಾಸಕಿ ಸುನಿತಾ ವೀರಪ್ಪಗೌಡ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್, ಮಾಜಿ ಜಿ.ಪಂ ಸದಸ್ಯ ಸುಧಾ ಮಹದೇವಯ್ಯ, ಕ್ಷೇತ್ರ ಅಧ್ಯಕ್ಷ ಎಂ.ಡಿ.ಬಸವರಾಜು, ಪಿ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಉಪ್ಪಾರ ಮಹಾಸಭಾ ಅಧ್ಯಕ್ಷ ಮಾದೇವ ಶೆಟ್ಟಿ, ಪುರಸಭಾ ಮಾಜಿ ಅಧ್ಯಕ್ಷರಾದ ಬಸವಣ್ಣ, ಎನ್‌ಎಸ್ ಬಸವರಾಜು ಇನ್ನಿತರರು ಉಪಸ್ಥಿತರಿದ್ದರು.

ಕೋಮು ಸೌಹಾರ್ದತೆ ಹದಗೆಡಿಸುವ ಬಿಜೆಪಿಗರಿಗೆ ತಕ್ಕ ಪಾಠ ಕಲಿಸಿ



ತಿ.ನರಸೀಪುರ,ಏ.25(ಎಂಟಿವೈ)– ರಾಜ್ಯದಲ್ಲಿ ಜಾತಿ–ಜಾತಿಗಳ ನಡುವೆ ಸಂಘರ್ಷ ಸೃಷ್ಟಿಸಿ, ಕೋಮು ಸೌಹಾರ್ದತೆ ಕದಡುತ್ತಿರುವ ಬಿಜೆಪಿಗೆ ಜನ ಈ ಚುನಾ ವಣೆಯಲ್ಲಿ ತಕ್ಕ ಪಾಠ ಕಲಿಸ ಬೇಕು ಎಂದು ಶಾಸಕ ತನ್ವೀರ್ ಸೇಠ್ ಮನವಿ ಮಾಡಿದ್ದಾರೆ.

ತಿ.ನರಸೀಪುರ ತಾಲೂಕಿನ ಹೆಳವರಹುಂಡಿ ಬಳಿ ಮಂಗಳವಾರ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆ ಮಹತ್ವದ ಪಾತ್ರವಹಿಸುತ್ತಿದೆ. ಪ್ರಜಾಪ್ರಭುತ್ವದ ಆಶಯ ರಕ್ಷಣೆ ಮಾಡಲು ಜನರಿಗೆ ಸಿಕ್ಕ ಅವಕಾಶ ಇದಾಗಿದೆ. ಕೋಮುವಾದಿಗಳನ್ನು ಬದಿಗೆ ಸರಿಸಿ, ಜನಪರ ಹಿತಾಸಕ್ತಿಯುಳ್ಳವರನ್ನು ಆಯ್ಕೆ ಮಾಡಿ, ಶಕ್ತಿಸೌಧಕ್ಕೆ ಕಳುಹಿಸುವ ಮೂಲಕ ರಾಜ್ಯದ ಜನತೆ ಪ್ರಜಾಪ್ರಭುತ್ವಕ್ಕೆ ಇನ್ನಷ್ಟು ಶಕ್ತಿ ತುಂಬಬೇಕು. ಸಾಮಾಜಿಕ ನ್ಯಾಯ ಪ್ರತಿಪಾದಿಸುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡುವ ಮೂಲಕ ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬಲು ಮುಂದಾಗಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಬಿಜೆಪಿಗೆ ಜನಾದೇಶ ಇಲ್ಲದಿದ್ದರೂ, ಶಾಸಕರನ್ನು ಖರೀದಿಸುವ ಮೂಲಕ ವಾಮಮಾರ್ಗದಲ್ಲಿ ಅಧಿಕಾರಕ್ಕೆ ಬಂದಿದ್ದು ರಾಜ್ಯದ ಜನತೆಗೆ ತಿಳಿದ ವಿಚಾರ. ತಪ್ಪು ದಾರಿಯಿಂದ ಅಧಿಕಾರ ಹಿಡಿದ ಬಿಜೆಪಿಗರು ಆಡಳಿತ ನಡೆಸುವಾಗಲೂ ತಪ್ಪು ದಾರಿಯಲ್ಲೇ ಸಾಗಿದರು. ಹಣದಿಂದ ಅಧಿಕಾರವನ್ನು ಖರೀದಿ ಮಾಡಿದರು. ಇದರಿಂದ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕೋಮು ಸೌಹಾರ್ದತೆ ಕದಡಲು ಮುಂದಾದರು. ಜಾತಿ–ಜಾತಿಗಳ ನಡುವೆ, ಧರ್ಮ–ಧರ್ಮಗಳ ನಡುವೆ ಎತ್ತಿಕಟ್ಟುವ ಮೂಲಕ ಸಮಾಜದಲ್ಲಿ ಅಶಾಂತಿ ನಿರ್ಮಿಸುವ ಸಂಚು ನಡೆಸುತ್ತಿದೆ. ಕೋಮು ಗಲಭೆ ಸೃಷ್ಟಿಸಿ ರಾಜಕೀಯ ಲಾಭ ಮಾಡಿಕೊಳ್ಳಲು ಬಿಜೆಪಿ ಹವಣಿಸುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಜನರು ಕೋಮು ಸೌಹಾರ್ದತೆಯಿಂದ ಬಾಳ್ವೆ ನಡೆಸಬೇಕಾದರೆ ಬಿಜೆಪಿಯನ್ನು ಕಿತ್ತೊಗೆಯಬೇಕು. ಅದಕ್ಕಾಗಿ ಈ ಚುನಾವಣೆಯಲ್ಲಿ ಜನ ಸಂಕಲ್ಪ ಮಾಡಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಬೆಂಬಲಿಸಬೇಕು ಎಂದು ಕೋರಿದರು.

ಯಾರು ಇಂತಹ ಜಾತಿ, ಧರ್ಮದಲ್ಲೇ ಹುಟ್ಟಬೇಕು ಎಂದು ನಿರ್ಧರಿಸುವುದಿಲ್ಲ. ಪ್ರಕೃತಿಗಿಂತ ಮಿಗಿಲಾದವರು ಯಾರೂ ಇಲ್ಲ. ನಮ್ಮೆಲ್ಲರನ್ನು ಸೃಷ್ಟಿಸಿದ್ದು ಪ್ರಕೃತಿ. ಎಲ್ಲರೂ ಅವರ ಇಚ್ಛೆಗೆ ಅನು ಗುಣವಾಗಿ ಜನಿಸುವಂತಿದ್ದರೆ, ಎಲ್ಲರೂ ಶ್ರೀಮಂತ ಕುಟುಂಬದಲ್ಲೇ ಜನಿಸುತ್ತಿದ್ದರು. ಮೇಲ್ಜಾತಿ ಕುಟುಂಬಗಳಲ್ಲೇ ಜನಿಸಲು ಬಯಸುತ್ತಿದ್ದಾರೆ. ಇದನ್ನು ಅರಿಯದೇ ಬಿಜೆಪಿ ಕೋಮು ಗಲಭೆ ಸೃಷ್ಟಿಸಿ ಜನರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಕಿಡಿಕಾರಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013ರಿಂದ 18ರವರೆಗೆ ನಡೆಸಿದ ಅಧಿಕಾರ ಸುವರ್ಣಾಕ್ಷರದಲ್ಲಿ ಬರೆಯಲು ಅರ್ಹವಾಗಿದೆ. ಚುನಾವಣೆ ಸಂದರ್ಭ ನೀಡಿದ್ದ ಭರವಸೆಯನ್ನೆಲ್ಲಾ ಈಡೇರಿಸಿದ್ದೇವೆ.ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಅರ್ಧ ಗಂಟೆಯಲ್ಲೇ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿ, ಹಸಿದವರಿಗೆ ಊಟ ನೀಡುವ ಕಾರ್ಯಕ್ರಮ ರೂಪಿಸಿದರು. ನುಡಿದಂತೆ ನಡೆಯುವ ಸರ್ಕಾರ ಕಾಂಗ್ರೆಸ್‌ನದ್ದಾಗಿದ್ದು, ಈ ಬಾರಿ ಕಾಂಗ್ರೆಸ್ ಬೆಂಬ ಲಿಸುವಂತೆ ಮನವಿ ಮಾಡಿದರು.

ಸಂವಿಧಾನ ಉಳಿಸಲೇಬೇಕಾಗಿದೆ



ತಿ.ನರಸೀಪುರ, ಏ.25(ಎಂಟಿವೈ)– ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿರುವ ಜಗತ್ತಿನಲ್ಲೇ ಶ್ರೇಷ್ಠವಾದ ಸಂವಿಧಾನವನ್ನು ಬದಲಿಸುವುದಕ್ಕೆ ನಾವು ಅಧಿಕಾರಕ್ಕೆ ಬಂದಿರುವುದು ಎಂದು ಬಹಿರಂಗವಾಗಿಯೇ ಹೇಳುವ ಮೂಲಕ ತಮ್ಮ ಮನಸ್ಥಿತಿಯನ್ನು ತೋರ್ಪಡಿಸಿರುವ ಬಿಜೆಪಿಗರಿಗೆ ಈ ಚುನಾವಣೆಯಲ್ಲಿ ಜನ ಶಾಸ್ತಿ ಮಾಡಲಿದ್ದಾರೆ ಎಂದು ಮಾಜಿ ಸಚಿವ, ತಿ.ನರಸೀಪುರ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ. ಮಹಾದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ತಿ.ನರಸೀಪುರದ ಹೆಳವರಹುಂಡಿ ಬಳಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 2023ರ ವಿಧಾನಸಭಾ ಚುನಾವಣೆ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಉಳಿವಿಗಾಗಿ ನಡೆಯುತ್ತಿರುವ ಚುನಾವಣೆಯಾಗಿದೆ. ರಾಜ್ಯದಲ್ಲಿ ಆಪರೇಷನ್ ಕಮಲದ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆಪಿಗರು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೇ ಬುಡಮೇಲಾಗಿಸುತ್ತಿದ್ದಾರೆ. ಪ್ರಜಾಪ್ರಭುತ್ವ, ಸಂವಿಧಾನದ ಅಳಿವು–ಉಳಿವಿನ ಚುನಾವಣೆಯಾಗಿ ಮಾರ್ಪಟ್ಟಿದೆ. ಭಾರತದ ಬಹುತ್ವದ ವ್ಯವಸ್ಥೆಯನ್ನು ಕಾಪಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬಡವರು ತತ್ತರಿಸಿದ್ದಾರೆ. ಬಿಜೆಪಿಗರು ಸುಳ್ಳುಗಳನ್ನೇ ಹೇಳುವ ಮೂಲಕ ಜನರಿಗೆ ಮಂಕುಬೂದಿ ಎರಚಿದ್ದಾರೆ. ದುರಾಡಳಿತದ ಫಲವಾಗಿ ರಾಜ್ಯವನ್ನು 20 ವರ್ಷ ಹಿಂದಕ್ಕೆ ನೂಕಿದ್ದಾರೆ. ಎಲ್ಲೆಡೆ ಬಿಜೆಪಿ ವಿರುದ್ಧ ಆಕ್ರೋಶದ ಗಾಳಿ ಬೀಸುತ್ತಿದೆ. ಇದರಿಂದ ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ ಎಂದರು.

ಅವೈಜ್ಞಾನಿಕ ಮೀಸಲಾತಿ ಜಾರಿಗೆ ತಂದಿದ್ದರಿಂದ ಕೋರ್ಟ್ ಛೀಮಾರಿ ಹಾಕಿದೆ. ಮಜ್ಜಿಗೆ ಕೊಡುವುದಕ್ಕೂ ಶೇ.5 ಜಿಎಸ್‌ಟಿ ಹಾಕಿದ್ದಾರೆ. ಅಡುಗೆ ಅನಿಲದ ಸಿಲಿಂಡರ್ ದರ ಸಾವಿರ ದಾಟಿದೆ. ಮೋದಿ ಅವರು ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆ ಎಂದಿದ್ದರು. ಆದರೆ, ಉದ್ಯಮಿಗಳಾದ ಅಂಬಾನಿ, ಅದಾನಿ ಆದಾಯ ಹೆಚ್ಚಳವಾಗಲು ಸಹಕರಿಸಿದ್ದಾರೆ. ಅಧಿಕಾರಕ್ಕೆ ಬರುವ ಮುನ್ನ 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದಿದ್ದರು. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಲಿಲ್ಲ ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ದನ–ಎಮ್ಮೆ ಮೇಯಿಸದ ಬಿಜೆಪಿಗರಿಗೆ ರೈತರ ಕಷ್ಟವೇನು ಗೊತ್ತಿದೆ. ರೈತ ವಿರೋಧಿ ಕಾನೂನುಗಳ ಮೂಲಕ ಕೃಷಿ ಬದುಕು ನಾಶ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಕಾಂಗ್ರೆಸ್ ಎಂದಿಗೂ ಜನಪರವಾದ ನಿಲುವು ಹೊಂದಿರುವ ಪಕ್ಷವಾಗಿದೆ. ನೆಹರೂ ಕಾಲದಲ್ಲಿ ಭಾಕ್ರಾನಂಗಲ್, ಹಿರಾಕುಡ್ ಅಣೆಕಟ್ಟುಗಳನ್ನು ಕಟ್ಟಿ ಆಹಾರ ಸ್ವಾವಲಂಬನೆ ಸಾಧನೆ ಮಾಡಿದ್ದರು. ಕಾಂಗ್ರೆಸ್ ಬಗ್ಗೆ ಮಾತನಾಡುವ ಬಿಜೆಪಿಗರು ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿ ಅವರಿಗೂ ವಂಚಿಸಿದ್ದಾರೆ. ಚುನಾವಣೆಗಾಗಿ ಪದೇ ಪದೆ ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ ರಾಜ್ಯಕ್ಕೆ ಬರುತ್ತಿದ್ದಾರೆ. ಅವರ ಆಗಮನದಿಂದ ಏನೂ ಆಗಲ್ಲ. ಕೇವಲ ದುಡ್ಡು ಖರ್ಚು ಅಷ್ಟೇ ಎಂದು ಮಹಾದೇವಪ್ಪ ಲೇವಡಿ ಮಾಡಿದರು.

ನರೇಂದ್ರ ಪುರುಷರ ಟಿಟಿ ಚಾಂಪಿಯನ್



ಮೈಸೂರು, ಏ.25–ಏಪ್ರಿಲ್ 16ರಂದು ಕೆಎನ್‌ಎಸ್‌ಸಿ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಪುರುಷರ ಸಿಂಗಲ್ಸ್ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರ್ ಸ್ಪೋರ್ಟ್ಸ್ ಕ್ಲಬ್‌ನ ಬಿ.ಆರ್. ನರೇಂದ್ರ ಅವರು ಚಾಂಪಿಯನ್ ಆಗಿದ್ದಾರೆ. ಇವರು ಅದೇ ದಿನ ನಡೆದ ಮಿಕ್ಸೆಡ್ ಡಬಲ್ಸ್ ಟಿಟಿ ಪಂದ್ಯಾವಳಿಯಲ್ಲೂ ವಿಜೇತರಾಗಿದ್ದಾರೆ.

ಚುನಾವಣಾ ಸಮೀಕ್ಷೆಗಳಲ್ಲಿ ಕಾಂಗ್ರೆಸ್ ಪರ ಅಲೆ: ಹರೀಶ್‌ಗೌಡ ವಿಶ್ವಾಸ



ಮೈಸೂರು, ಏ.25–ರಾಜ್ಯದಲ್ಲಿ ನಡೆಸಿರುವ ಎಲ್ಲಾ ಚುನಾವಣಾ ಸಮೀಕ್ಷೆಗಳಲ್ಲಿ ಕಾಂಗ್ರೆಸ್ ಪಕ್ಷದ ಪರ ಅಲೆ ಇರುವುದರಿಂದ ಈ ಬಾರಿ ಕಾಂಗ್ರೆಸ್ 150 ಸೀಟುಗಳನ್ನು ಗೆಲ್ಲುವ ಮೂಲಕ ಅಧಿಕಾರಕ್ಕೆ ಬರಲಿದೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹರೀಶ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಪಡುವಾರಹಳ್ಳಿಯಲ್ಲಿ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ಯಾಸ್, ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ, ದಿನಸಿ ಪದಾರ್ಥಗಳ ಬೆಲೆಗಳನ್ನು ಏರಿಸುವುದರ ಜೊತೆಗೆ ಮಜ್ಜಿಗೆ, ಮೊಸರು, ಹಾಲಿಗೂ ಜಿಎಸ್‌ಟಿ ಹಾಕಿ ಬಡಜನರು ಬದುಕುವುದೇ ಕಷ್ಟವಾಗಿದ್ದು, ಇದರ ಜೊತೆಗೆ ಭ್ರಷ್ಟಾಚಾರ, ಲಂಚ ಹಗರಣಗಳನ್ನು ನಡೆಸಿರುವ ಬಿಜೆಪಿ ಪಕ್ಷವನ್ನು ಈ ಬಾರಿ ಜನ ತಿರಸ್ಕರಿಸಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದ ಪಕ್ಷವಾಗಿದ್ದು ಅಧಿಕಾರಕ್ಕೆ ಬಂದ ತಕ್ಷಣ ಕಾಂಗ್ರೆಸ್ ಗ್ಯಾರಂಟಿ ಭರವಸೆಗಳಾದ ಪ್ರತಿ ಕುಟುಂಬದ ಬಡ ಮಹಿಳೆಗೆ ತಿಂಗಳಿಗೆ 2 ಸಾವಿರ ರೂ. ನೆರವು, ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತ, ತಲಾ 10 ಕೆಜಿ ಅಕ್ಕಿ, ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3 ಸಾವಿರ ರೂಪಾಯಿಗಳು ನೀಡಲಾಗುವುದು. ಆದ್ದರಿಂದ ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಮೂಲಕ ಸಿದ್ದರಾಮಯ್ಯನವರ ಕೈ ಬಲಪಡಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪೈ॥ ಪ್ರಕಾಶ್, ಪೈ॥ ಚಿಕ್ಕಪುಟ್ಟಿ, ಸೀತಾರಾಂ, ಗುರು ಚಿನ್ನಸ್ವಾಮಿ ಹಾಗೂ ನೂರಾರು ಬೆಂಬಲಿಗರು ಹಾಜರಿದ್ದರು.

ದೇವಲೋಕವಾಗಲು ಬಸವಣ್ಣನವರ ವಚನಗಳು ಸಹಕಾರಿ

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಅಭಿಮತ



ಮೈಸೂರು, ಏ. 25– ಮರ್ತ್ಯಲೋಕ ದೇವಲೋಕವಾಗಲು ಬಸವಣ್ಣನವರ ವಚನಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ನಾರಾಯಣಾಮೃತ ಮೆಡಿಕೇರ್ ಫೌಂಡೇಷನ್ ಮೈಸೂರಿನ ಹೆಬ್ಬಾಳದ ಎರಡನೇ ಹಂತದಲ್ಲಿರುವ ಸಾಧನಾ ಪ್ರಾಂಗಣದಲ್ಲಿ ಏರ್ಪಡಿಸಿದ್ದ ಅಕ್ಷಯ ತೃತೀಯ ಮತ್ತು ಬಸವೇಶ್ವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಬಸವೇಶ್ವರ ವಚನಗಳು ಬದುಕು ಬೆಳಗಲು ನೀಡುವ ಬೆಳಕು ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿ ಮಾತನಾಡಿದ ಅವರು, ಬಸವಣ್ಣನವರು ಸ್ವರ್ಗ ನರಕಗಳು ಬೇರೆ ಲೋಕದಲ್ಲಿ ಇವೆ ಎಂಬುದನ್ನು ಒಪ್ಪದೇ ಇವು ನಮ್ಮ ಭೂಲೋಕದಲ್ಲಿಯೇ ಇವೆ ಎಂಬುದನ್ನು ಅನೇಕ ವಚನಗಳ ಮೂಲಕ ಅರ್ಥೈಸಿದ್ದಾರೆ.

ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳುವುದರ ಮೂಲಕ ಸತ್ಸಂಗಗಳು, ಒಳ್ಳೆಯ ವಿಚಾರಗಳ ಚರ್ಚೆಗಳು, ನೊಂದವರಿಗೆ ಸಾಂತ್ವನ ನೀಡುವ ಕೇಂದ್ರಗಳೇ ಸ್ವರ್ಗಗಳಾಗಿವೆ ಎಂಬುದನ್ನು ನಾವು ಮನನ ಮಾಡಿಕೊಳ್ಳಬೇಕು. ಅವರ ವಚನಗಳು ಬದುಕಿನ ಪ್ರಾರಂಭದಿಂದ ಅಂತ್ಯದವರೆಗೂ ನಾವು ನಮ್ಮ ಮನೆಯಲ್ಲಿ ಮತ್ತು ಸಮಾಜದ ನೆರೆಹೊರೆಯವರ ಜೊತೆ ಹೇಗೆ ಬದುಕಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡುತ್ತವೆ ಎಂದರು.

ನಾರಾಯಣಾಮೃತ ಫೌಂಡೇಷನ್ ಸಂಸ್ಥಾಪಕ ಎನ್.ಆರ್.ರಾವ್ ಮಾತನಾಡಿ, ಅಕ್ಷಯ ತೃತೀಯ ಎಂದರೆ ನಾವು ಚಿನ್ನವನ್ನು ತೆಗೆದುಕೊಂಡರೆ ಅದು ಅಕ್ಷಯವಾಗುತ್ತದೆ ಎಂಬುದು ಸುಳ್ಳು. ನಾವು ಈ ದಿನ ಇತರರಿಗೆ ಏನು ನೀಡುತ್ತೇವೆ ಅದು ಅಕ್ಷಯವಾಗುತ್ತದೆ ಎಂಬುದು ಸತ್ಯ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ.ಕೆ.ಬಿ.ಪ್ರಭುಪ್ರಸಾದ್ ಮಾತನಾಡಿ, ಬಸವಣ್ಣನವರು ಭಕ್ತಿಗೆ ಹೆಚ್ಚು ಮಹತ್ವ ನೀಡಿದ್ದರಿಂದ ಭಕ್ತಿ ಭಂಡಾರಿಯಾದರು. ಈ ಜಯಂತಿ ನಿಜವಾಗಿ ಭಕ್ತರ ಜಯಂತಿ ಎಂದರು. ಅನಿತಾ ವೆಂಕಪ್ಪ ಬಸವಣ್ಣನವರ ಜೀವನ ಚರಿತ್ರೆ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ಮೊದಲು ವಿಶಾಲಾಕ್ಷಿ, ಮನಸ್ವಿನಿ ಮತ್ತು ಮಹತಿ ಶರಣರ ವಚನಗಳು ಮತ್ತು ದಾಸರ ಪದಗಳನ್ನು ಗಾಯನ ಮಾಡಿದರು. ಕಾರ್ಯಕ್ರಮದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಲೀಲಾರಾವ್, ಕೃತಿ, ಅನಂತ್ ನಾಗರಾಜ್ ಇತರರು ಉಪಸ್ಥಿತರಿದ್ದರು.


ಏ.29, 30ರಂದು ಸ್ವಯಂ ಉದ್ಯೋಗ ಕುರಿತು ಕಾರ್ಯಾಗಾರ

ಮೈಸೂರು,ಏ.25(ಪಿಎಂ)– ಔರಾ ಗ್ರೂಪ್ ಆಫ್ ಇಂಡಸ್ಟ್ರಿ ವತಿಯಿಂದ ಏ.29 ಮತ್ತು 30ರಂದು ಮೈಸೂರಿನ ಬೋಗಾದಿ ರಸ್ತೆಯ ಧ್ವನ್ಯಾಲೋಕದಲ್ಲಿ ಎರಡು ದಿನಗಳ ಸ್ವಯಂ ಉದ್ಯೋಗ ಕುರಿತು ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಔರಾ ಗ್ರೂಪ್ ಸಂಸ್ಥಾಪಕಿ ಶ್ರೀವಿದ್ಯಾ ಕಾಮತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ಕಾರ್ಯಾಗಾರ ನಡೆಯಲಿದೆ. ಸಣ್ಣ ಪ್ರಮಾಣದಲ್ಲಿ ಆರಂಭಿಸಬಹುದಾದ 50ಕ್ಕೂ ಹೆಚ್ಚು ಉದ್ದಿಮೆಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಲಿದ್ದಾರೆ. ಕಾರ್ಯಾಗಾರ ಕುರಿತು ಹೆಚ್ಚಿನ ಮಾಹಿತಿಗೆ 97424 72777 ಅನ್ನು ಸಂಪರ್ಕಿಸಬಹುದು ಎಂದರು.

ಮ್ಯಾಜಿಕ್ ನಂಬರ್ ತಲುಪಲು ಯಡಿಯೂರಪ್ಪ–ಸಂತೋಷ್ ತಂತ್ರ

- ವೀರಶೈವ ಲಿಂಗಾಯತರ ಸಂಬಂಧ ಕಾಂಗ್ರೆಸ್ ಗೊಂದಲದಿಂದ ಬಿಜೆಪಿಯಲ್ಲಿ ಗಲಿಬಿಲಿ
- ಸೇಫ್ ಗೇಮ್‌ಗೆ ಯಡಿಯೂರಪ್ಪ ಮೊರೆ ಹೋದ ಸಂತೋಷ್



ಬೆಂಗಳೂರು, ಏ.25(ಕೆಎಂಶಿ)– ವಿಧಾನಸಭಾ ಚುನಾವಣೆಯಲ್ಲಿ ಮ್ಯಾಜಿಕ್ ಸಂಖ್ಯೆ ಮುಟ್ಟಲು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಸುದೀರ್ಘ ಚರ್ಚೆ ನಡೆಸಿದ್ದಾರೆ.

ಚುನಾವಣಾ ಪೂರ್ವ ಸಮೀಕ್ಷೆಗಳ ಆಧಾರದ ಮೇಲೆ ಪಕ್ಷಕ್ಕೆ ಮತ್ತಷ್ಟು ಬಲ ತಂದು ಎರಡನೇ ಮತ್ತು ಮೂರನೇ ಸ್ಥಾನದಲ್ಲಿರುವ ಅಭ್ಯರ್ಥಿಗಳನ್ನು ಮೊದಲ ಸ್ಥಾನಕ್ಕೆ ತರುವ ಬಗ್ಗೆ ಚರ್ಚೆ ನಡೆಸಿದ್ದಾರೆ.

ಕುಮಾರಪಾರ್ಕ್‌ನಲ್ಲಿರುವ ಯಡಿಯೂರಪ್ಪ ಅಧಿಕೃತ ನಿವಾಸ ಕಾವೇರಿಗೆ ಸಂತೋಷ್ ಭೇಟಿ ನೀಡಿದರು. ಪ್ರಸ್ತುತ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ಸಮಾಲೋಚನೆ ನಡೆಸಿದರು.

ಗುರುತಿಸಿರುವ ಈ ಕ್ಷೇತ್ರದ ಅಭ್ಯರ್ಥಿಗಳನ್ನು ಗೆಲುವಿನ ದಡಕ್ಕೆ ಸೇರಿಸಲು ಏನೆಲ್ಲ ಕಾರ್ಯಕ್ರಮ ರೂಪಿಸಬೇಕೆಂಬುದರ ಬಗ್ಗೆ ಉಭಯ ನಾಯಕರು ತಂತ್ರಗಾರಿಕೆ ರೂಪಿಸಿದ್ದಾರೆ. ಪ್ರತಿಪಕ್ಷ ಕಾಂಗ್ರೆಸ್, ಸರ್ಕಾರದ ವಿರುದ್ಧ ಆರೋಪ ಮಾಡುವುದಲ್ಲದೆ, ಜಾತಿ ಸಂಘರ್ಷಕ್ಕೆ ಒತ್ತು ಕೊಡುತ್ತಿದೆ. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ತಂತ್ರಗಾರಿಕೆಗೆ ಪ್ರತಿತಂತ್ರಗಾರಿಕೆ ರೂಪಿಸುವ ಅಗತ್ಯವಿದೆ. ಅದರಲ್ಲೂ ವೀರಶೈವ ಸಮುದಾಯವನ್ನು ಪಕ್ಷದ ಬುಟ್ಟಿಯಲ್ಲೇ ಹಿಡಿದಿಟ್ಟುಕೊಳ್ಳಲು ಯಡಿಯೂರಪ್ಪನವರ ಹೆಗಲಿಗೆ ಸಂತೋಷ್ ಹಾಕಿದ್ದಾರೆ. ನೀವು ಹೇಳಿದಂತೆ ಪಕ್ಷ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಚುನಾವಣೆ ಮುಗಿಯುವವರೆಗೂ ಪ್ರಮುಖ ಕ್ಷೇತ್ರಗಳಲ್ಲಿ ಪ್ರಚಾರ ಕೈಗೊಂಡು ಅಭ್ಯರ್ಥಿಗಳ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಪಕ್ಷ ತೊರೆದ ನಂತರ ವೀರಶೈವ ಸಮುದಾಯವೇ ಬಿಜೆಪಿಯಿಂದ ದೂರ ಸರಿದಿದೆ ಎಂಬ ಭ್ರಮೆಯನ್ನು ಕಾಂಗ್ರೆಸ್ ಸಾರ್ವಜನಿಕವಾಗಿ ಹುಟ್ಟು ಹಾಕುತ್ತಿದೆ. ಉಭಯ ನಾಯಕರು ಪಕ್ಷ ತೊರೆದಿರುವುದರಿಂದ ನಮಗೆ ಯಾವುದೇ ಹಿನ್ನಡೆಯಾಗಿಲ್ಲ. ಆದರೆ ಸಮಾಜವನ್ನು ವಿಭಜಿಸುವ ಕೆಲಸಕ್ಕೆ ತಡೆ ಹಾಕಬೇಕು. ಇದರ ತಂತ್ರಗಾರಿಕೆಯನ್ನು ನೀವೇ ರೂಪಿಸಿ ಎಂದು ಸಂತೋಷ್, ಯಡಿಯೂರಪ್ಪನವರಿಗೆ ಸಲಹೆ ಮಾಡಿದ್ದಾರೆ.

ಅಷ್ಟೇ ಅಲ್ಲದೆ, ಮ್ಯಾಜಿಕ್ ಸಂಖ್ಯೆ ಮುಟ್ಟಲು ಏನೆಲ್ಲ ಕಾರ್ಯಕ್ರಮ ರೂಪಿಸಬೇಕು, ಪ್ರಧಾನಿಯವರು ಯಾವ ರೀತಿ ರಾಜ್ಯದಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಬೇಕು ಎಂಬೆಲ್ಲ ಬಗ್ಗೆ ಮಾತುಕತೆ ನಡೆದಿದೆ.

ಚುನಾವಣಾ ಸಂದರ್ಭದಲ್ಲಿ ಪಕ್ಷದಿಂದ ಹೊರ ಹೋಗಿರುವವರು ಮತ್ತು ಟಿಕೆಟ್ ವಂಚಿತಗೊಂಡು ಬಂಡಾಯ ಸ್ಪರ್ಧೆ ಮಾಡಿರುವವರಿಂದ ನಮ್ಮ ಅಭ್ಯರ್ಥಿಗಳಿಗಾಗುವ ಹಿನ್ನಡೆ ತಡೆಯಲು ಏನು ಮಾಡಬೇಕೆಂಬುದರ ಬಗ್ಗೆಯು ಚರ್ಚೆಯಾಗಿದೆಯೆಂದು ಉನ್ನತ ಮೂಲಗಳು ತಿಳಿಸಿವೆ. ಕಳೆದ ರಾತ್ರಿ ಅಮಿತ್ ಶಾ ನಡೆಸಿದ ಸಭೆಯಲ್ಲಿ ಚರ್ಚಿತವಾದ ವಿಷಯಗಳ ಕುರಿತು ವಿಸ್ತೃತವಾದ ಚರ್ಚೆ ನಡೆಸಲಾಯಿತು.

ಸಂತೋಷ್ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ಬಿ.ಎಲ್.ಸಂತೋಷ್ ಭೇಟಿ ಮಾಡಿದ್ದರು. ಪ್ರಸಕ್ತ ರಾಜಕೀಯ ಸನ್ನಿವೇಶದ ಬಗ್ಗೆ ಇಬ್ಬರೂ ಚರ್ಚೆ ಮಾಡಿದ್ದೇವೆ ಎಂದರು. ರಾಜ್ಯದ ಚುನಾವಣಾ ಪ್ರಕ್ರಿಯೆ ಬಗ್ಗೆ ಸಂತೋಷ್ ಅವರಿಗೂ ಸಮಾಧಾನ ಇದೆ. 130ಕ್ಕೂ ಹೆಚ್ಚು ಸ್ಥಾನ ಗೆಲ್ಲಲಿದ್ದೇವೆ ಅಂತ ಭರವಸೆ ಇದೆ ಎಂದರು.

ಇಂದಿನಿಂದ ಚುನಾವಣೆ ಮುಗಿಯೋವರೆಗೂ ನನ್ನ ಪ್ರಚಾರ ನಡೆಯಲಿದೆ. ದೇವದುರ್ಗ, ಮಾಯಕೊಂಡ, ಜಗಳೂರಿನಲ್ಲಿ ಪ್ರಚಾರಕ್ಕೆ ಹೋಗುತ್ತಿದ್ದೇವೆ. ವಾತಾವರಣ ನಿರೀಕ್ಷೆ ಮೀರಿ ನಮ್ಮ ಪರ ಇದೆ. ಎಲ್ಲ ಕಡೆ ಬಿಜೆಪಿ ಪರ ಅಲೆ ಇದೆ.

ಮೈಸೂರು ಮಿತ್ರ ಬುಧವಾರ 26 ಏಪ್ರಿಲ್ 2023

ನೇತಾರ, ಪಕ್ಷ, ಅಭ್ಯರ್ಥಿ ನೋಡಿ ಮತ ಚಲಾಯಿಸಿ

ಅಪ್ಪಚ್ಚುರಂಜನ್ ಪರ ಗುಜರಾತ್ ಶಾಸಕ ಡಾ. ಪ್ರದ್ಯುಮನ್ ವಾಜಾ ಮತಯಾಚನೆ



ಮಡಿಕೇರಿ, ಏ.25– ಈ ಬಾರಿಯ ರಾಜ್ಯ ವಿಧಾನಸಭಾ ಚುನಾವಣೆಗೆ ಮತ ಚಲಾಯಿಸುವಾಗ ನೇತಾರ, ಪಕ್ಷ ಮತ್ತು ಅಭ್ಯರ್ಥಿಯನ್ನು ಗಮನದಲ್ಲಿಡಬೇಕೆಂದು ಗುಜರಾತ್ ಬಿಜೆಪಿ ಶಾಸಕ ಡಾ. ಪ್ರದ್ಯುಮನ್ ವಾಜಾ ಮತದಾರರಲ್ಲಿ ಮನವಿ ಮಾಡಿದರು.


ಕುಶಾಲನಗರ ಪಟ್ಟಣದ ಕೂಡ್ಲೂರು ವೃತ್ತದ ಬಳಿ ಮಂಗಳವಾರ ಆಯೋಜಿಸಲಾಗಿದ್ದ ಬಿಜೆಪಿ ಅಭ್ಯರ್ಥಿ ಅಪ್ಪಚ್ಚು ರಂಜನ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಶಾಸಕ ಪ್ರದ್ಯುಮನ್ ವಾಜಾ, ಪ್ರಸ್ತುತ ಬಿಜೆಪಿ ಮಾತ್ರ ಅತ್ಯುತ್ತಮ ನೇತಾರ, ಪಕ್ಷ, ಮತ್ತು ಉಮೇದುವಾರರನ್ನು ಒದಗಿಸುತ್ತಿರುವ ರಾಜಕೀಯ ಸಂಘಟನೆ ಎಂದು ಹೇಳಿದರು. ಬಿಜೆಪಿ ನಾಯಕ ಪ್ರಧಾನಿ ನರೇಂದ್ರ ಮೋದಿ ಪ್ರಸ್ತುತ ದೇಶದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲೇ ಅತ್ಯುತ್ತಮ ಜನನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ದೇಶದಲ್ಲಿ ಇಂದು ಮೋದಿಯವರಿಗೆ ಎದುರಾಗಿ ಮತ್ತೋರ್ವ ನಾಯಕರು ಕಂಡು ಬರುತ್ತಿಲ್ಲ. ಭಾರತವನ್ನು ವಿಶ್ವ ಗುರುವನ್ನಾಗಿಸಿರುವ ಮೋದಿಯವರು ದೇಶ ಇದುವರೆಗೆ ಕಂಡಿರುವ ಅತ್ಯುತ್ತಮ ನಾಯಕ ಎಂದು ಬಣ್ಣಿಸಿದರು.

ಬಿಜೆಪಿ ಮಾತ್ರವೇ ರಾಜಕೀಯವಾಗಿ ಸರಿಯಾದ ತತ್ವ–ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಿರುವ, ಅವುಗಳಿಗೆ ಬದ್ಧವಾಗಿರುವ ಪಕ್ಷ ಎಂದು ಸಮರ್ಥಿಸಿಕೊಂಡರಲ್ಲದೇ, ಇಂತಹ ಪಕ್ಷವನ್ನು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೇರಿಸಬೇಕು ಎಂದು ಕರೆ ನೀಡಿದರು.

ಇದೀಗ 6ನೇ ಬಾರಿ ಸ್ಪರ್ಧೆ ಮಾಡುತ್ತಿರುವ ಅಪ್ಪಚ್ಚು ರಂಜನ್ ಕಳೆದ 5 ಬಾರಿ ಗೆದ್ದಿರುವ ರೀತಿಯೇ ಅವರ ಜನಪರ ನಿಲುವಿಗೆ ಕೈಗನ್ನಡಿಯಾಗಿದೆ. ಬಿಜೆಪಿ ಯಾವ ರೀತಿಯ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿದೆ ಎನ್ನುವುದಕ್ಕೆ ಅಪ್ಪಚ್ಚು ರಂಜನ್ ಸಾಕ್ಷಿ ಎಂದ ಪ್ರದ್ಯುಮನ್ ವಾಜಾ, ಅಪ್ಪಚ್ಚು ರಂಜನ್ ಅವರನ್ನು ಮತ್ತೆ ಅತ್ಯಧಿಕ ಬಹುಮತದಿಂದ ಗೆಲ್ಲಿಸುವುದು ಮಡಿಕೇರಿ ಕ್ಷೇತ್ರದ ಜನತೆಯ ಮೇಲಿರುವ ಜವಾಬ್ದಾರಿ ಎಂದು ಹೇಳಿದರು. ಈ ಸಂದರ್ಭ ಎಂಎಲ್‌ಸಿ ಸುಜಾ ಕುಶಾಲಪ್ಪ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ. ಭಾರತೀಶ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ. ಬಿ.ಸಿ. ನವೀನ್ ಕುಮಾರ್ ಮತ್ತಿತ್ತರ ಪಕ್ಷ ಪ್ರಮುಖರು ಉಪಸ್ಥಿತರಿದ್ದರು.

ಏ.29ಕ್ಕೆ ಮಡಿಕೇರಿಗೆ ಅಮಿತ್ ಶಾ

ರಾಜ್ಯದಲ್ಲಿ ಬಿಜೆಪಿ ಗೆಲುವಿಗೆ ಪೂರಕ ವಾತಾವರಣವಿದೆ: ಪ್ರತಾಪ್‌ಸಿಂಹ ನಾಯಕ್





ಮಡಿಕೇರಿ, ಏ.25– ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಳ ಪರ ಪ್ರಚಾರಕ್ಕಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಏ.29ರಂದು ಮಡಿಕೇರಿಗೆ ಆಗಮಿಸಲಿದ್ದಾರೆ ಎಂದು ಬಿಜೆಪಿಯ ಕೊಡಗು ಉಸ್ತುವಾರಿ ಹಾಗೂ ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ತಿಳಿಸಿದ್ದಾರೆ.

ಈ ವಿಷಯವನ್ನು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿ, ರಾಜ್ಯ ಮತ್ತು ರಾಷ್ಟ್ರ ನಾಯಕರುಗಳು ವಿಶೇಷ ಪ್ರಚಾರ ಅಭಿಯಾನದಲ್ಲಿ ಭಾಗವಹಿಸಲಿದ್ದು, ಚುನಾವಣಾ ಚಾಣಕ್ಯ ಅಮಿತ್ ಷಾ ಅವರು ಮತ ಯಾಚಿಸಲಿದ್ದಾರೆ ಎಂದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಮತ್ತು ಕಾಂಗ್ರೆಸ್ ಪಕ್ಷದ ಬೇಜವಾಬ್ದಾರಿ ನಡೆಗಳು ಬಿಜೆಪಿಯ ಗೆಲುವಿಗೆ ಪೂರಕ ವಾತಾವರಣವನ್ನು ಸೃಷ್ಟಿಸಿದೆ ಎಂದರು.

1985ರ ನಂತರದ ಚುನಾವಣಾ ಇತಿಹಾಸದಲ್ಲಿ ಅಧಿಕಾರದಲ್ಲಿದ್ದ ಪಕ್ಷ ಎರಡನೇ ಬಾರಿಗೆ ಗೆಲುವು ಸಾಧಿಸಿದ ಇತಿಹಾಸವಿಲ್ಲ. ಆದರೆ ಈ ಬಾರಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವ ಮೂಲಕ ಇತಿಹಾಸವನ್ನು ಸೃಷ್ಟಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿ ಸರ್ಕಾರ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 1500 ಕೋಟಿ ರೂ. ಅಧಿಕ ಅನುದಾನದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ ಮತ್ತು ಮೂಲ ಭೂತ ಸೌಲಭ್ಯಗಳನ್ನು ಕಲ್ಪಿಸಿದೆ. ಕಳೆದ ಮೂರೂವರೆ ವರ್ಷಗಳ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಕೋವಿಡ್ ಸಂಕಷ್ಟ ಮತ್ತು ಪ್ರಾಕೃತಿಕ ವಿಕೋಪದ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಿದೆ. ಟಿಪ್ಪು ಜಯಂತಿ, ಗೋ ಹತ್ಯೆ, ಮತಾಂತರ ಮತ್ತು ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿದೆ. ಬಿಜೆಪಿ ಸರ್ಕಾರದ ಈ ಕಾನೂನುಗಳನ್ನು ಬದಲಾಯಿಸುವುದಾಗಿ ಕಾಂಗ್ರೆಸ್ ಹೇಳುತ್ತಿದೆ. ಅಲ್ಲದೆ ಮಾಜಿ ಮುಖ್ಯಮಂತ್ರಿಗಳು ಭ್ರಷ್ಟಾಚಾರವನ್ನು ಟೀಕಿಸುವ ಭರದಲ್ಲಿ ಇಡೀ ಲಿಂಗಾಯಿತ ಸಮುದಾಯವನ್ನೇ ಅವಮಾನಿಸಿದ್ದಾರೆ. ಈ ಬೆಳವಣಿಗೆಗಳು ಬಿಜೆಪಿಯ ಗೆಲುವಿಗೆ ಸಹಕಾರಿಯಾಗಿದೆ ಎಂದರು.

ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಸಂದರ್ಭ ಸಾಮಾಜಿಕ ನ್ಯಾಯವನ್ನು ಮೆರೆದಿದೆ. ಕಟ್ಟ ಕಡೆಯ ವ್ಯಕ್ತಿ, ಸಾಮಾನ್ಯ ಕಾರ್ಯಕರ್ತ ಸೇರಿದಂತೆ 75ಕ್ಕೂ ಹೆಚ್ಚು ಹೊಸಮುಖಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದೆ. ರಾಜ್ಯದಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿ ಅವರನ್ನು ಪ್ರೀತಿಸುವವರ ಸಂಖ್ಯೆ ದೊಡ್ಡದೇ ಇದೆ. ಹಿಂದುತ್ವ ಮತ್ತು ರಾಷ್ಟ್ರೀಯತೆಯ ಆಧಾರದಲ್ಲಿ ಚುನಾವಣೆಯನ್ನು ಎದುರಿಸುತ್ತಿರುವ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಪ್ರತಾಪ್ ಸಿಂಹ ನಾಯಕ್ ತಿಳಿಸಿದರು.

ವಿರಾಜಪೇಟೆ ಕ್ಷೇತ್ರದ ಅಭ್ಯರ್ಥಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಚುನಾವಣೆ ಘೋಷಣೆಗೂ ಮೊದಲೇ ಬಿಜೆಪಿ ಜನರ ಬಳಿ ತೆರಳಿದ್ದು, ಬೂತ್‌ಗಳನ್ನು ಬಲಗೊಳಿಸಿದೆ. ಇದರ ಪರಿಣಾಮ ದೊಡ್ಡ ಮತಗಳ ಅಂತರದಿಂದ ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದ್ದೇವೆ. ರಾಜ್ಯದಲ್ಲಿ 150 ಸ್ಥಾನಗಳು ಬಿಜೆಪಿ ಪಾಲಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಕೋವಿಡ್ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಸರಿಯಾದ ಸಮಯದಲ್ಲಿ ಲಸಿಕೆಗಳನ್ನು ನೀಡಿದ್ದರಿಂದ ಸಾವಿನ ಸಂಖ್ಯೆ ನಿಯಂತ್ರಣಕ್ಕೆ ಬಂತು ಎಂದ ಅವರು, ಸಂಕಷ್ಟದ ಸಂದರ್ಭ ಅನುದಾನವನ್ನು ಬಳಸಿಕೊಂಡ ಕಾರಣ ಜಿಲ್ಲೆಯ ಕೆಲವು ರಸ್ತೆಗಳು ಅಭಿವೃದ್ಧಿ ಕಾಣಲಿಲ್ಲ. ಇದರ ಬಗ್ಗೆ ಜಿಲ್ಲೆಯ ಜನರಿಗೂ ಅರಿವಿದೆ ಎಂದು ಸಮರ್ಥಿಸಿಕೊಂಡರು. ಕಾಫಿ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಿದ ಕೇಂದ್ರ ಮತ್ತು ರಾಜ್ಯ ಸರಕಾರಗಳು ದಾಖಲೆ ಮೊತ್ತದ ಪರಿಹಾರವನ್ನೂ ನೀಡಿದೆ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಮಾತನಾಡಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಏ.29ರಂದು ಬೆಳಗ್ಗೆ 10.30 ಗಂಟೆಗೆ ಮಡಿಕೇರಿಯ ಗಾಂಧಿ ಮೈದಾನ ದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್ ಭೀಮಯ್ಯ, ಮಡಿಕೇರಿ ಮಂಡಲದ ಅಧ್ಯಕ್ಷ ಕಾಂಗೀರ ಸತೀಶ್ ಹಾಗೂ ಕೇರಳ ಬಿಜೆಪಿ ಪದಾ ಧಿಕಾರಿ ಜಯಚಂದ್ರನ್ ಮಾಸ್ಟರ್ ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಹೆಚ್ಚಾಗುತ್ತಿರುವ ವಾಹನ ದಟ್ಟಣೆ: ಪಾದಚಾರಿಗಳ ಓಡಾಟಕ್ಕೆ ಅಡಚಣೆ

ನಾಗರಿಕ ಸಮಿತಿಯಿಂದ ಪುರಸಭೆ ವಿರುದ್ಧ ಆರೋಪ



ವಿರಾಜಪೇಟೆ, ಏ.25– ವಿರಾಜಪೇಟೆ ಪಟ್ಟಣದಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಪಾದಚಾರಿಗಳ ಸಂಚಾರಕ್ಕೆ ಅಡಚಣೆಯಾಗಿದ್ದು, ಪುರಸಭೆಯು ಸರಿಯಾಗಿ ಫುಟ್ ಫಾತ್ ನಿರ್ವಹಣೆ ಮಾಡಬೇಕು. ರಸ್ತೆ ಬದಿ ಚರಂಡಿವರೆಗೂ ಡಾಂಬರು ಹಾಕುವ ಮೂಲಕ ಮುಖ್ಯರಸ್ತೆಯನ್ನು ಅಭಿವೃದ್ಧಿ ಪಡಿಸುವಂತಾಗಬೇಕು ಎಂದು ನಾಗರಿಕ ಸಮಿತಿ ಸಂಚಾಲಕ ಡಾ. ಐ.ಆರ್. ದುರ್ಗಾಪ್ರಸಾದ್ ಒತ್ತಾಯಿಸಿದ್ದಾರೆ.

ಇಲ್ಲಿನ ಬ್ರೈಟ್ ಶಾಲಾ ಆವರಣದಲ್ಲಿ ನಡೆದ 'ನಾಗರಿಕ ಸಮಿತಿ ಸಭೆ'ಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಟ್ಟಣದ ಮುಖ್ಯ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗುತ್ತಿದ್ದು, ಪುರಸಭೆ ರಸ್ತೆಯನ್ನೆ ಅಭಿವೃದ್ಧಿಪಡಿಸಿಲ್ಲ. ಮುಖ್ಯ ರಸ್ತೆ ಬದಿಯಲ್ಲಿಯೆ ಹಲವು ಕಡೆ ಚರಂಡಿಗಳೇ ಇಲ್ಲ. ಇನ್ನು ಕೆಲವರು ತಮ್ಮ ವಾಹನಗಳನ್ನು ಬೆಳಿಗ್ಗೆ ನಿಲ್ಲಿಸಿ ದೂರದ ಬೆಂಗಳೂರು–ಮೈಸೂರು ನಗರಗಳಿಗೆ ಹೋಗುವುದುಂಟು. ಇದರಿಂದ ಇತರ ವಾಹನಗಳ ನಿಲುಗಡೆಗೆ ಸಮಸ್ಯೆಯಾಗುತ್ತಿದೆ ಎಂದರು.

ಇದನ್ನೆಲ್ಲ ನೋಡಿದರೂ ನೋಡದಂತಿರುವ ಪುರಸಭೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಪುರಸಭೆಯ ವಾಹನಗಳ ನಿಲುಗಡೆ ಶುಲ್ಕ ವಿಧಿಸಿರುವುದು ಸರಿಯಲ್ಲ. ದೊಡ್ಡಟ್ಟಿ ಚೌಕಿಯಲ್ಲಿ ಶಾಲಾ ಮಕ್ಕಳು, ಸಾರ್ವಜನಿಕರು ಓಡಾಡುವ ಜಾಗದಲ್ಲಿ ಬಸ್‌ಗಳನ್ನು ನಿಲ್ಲಿಸುತ್ತಾರೆ. ಇದರಿಂದ ಜನರಿಗೂ ಮತ್ತು ಇತರ ವಾಹನಗಳಿಗೂ ಅಡಚಣೆ ಉಂಟಾಗುತ್ತಿದೆ. ಪುರಸಭೆಯ ಮಾಸಿಕ ಸಭೆಯಲ್ಲಿ ಪೊಲೀಸರಿಗೆ ಈ ವಿಚಾರ ತಿಳಿಸಿದರೂ ಕ್ರಮಕೈಗೊಂಡಿಲ್ಲ ಎಂದು ದುರ್ಗಾಪ್ರಸಾದ್ ಆಪಾದಿಸಿದರು.

ನಾಗರಿಕ ಸಮಿತಿಯ ಸಹ ಸಂಚಾಲಕ ಬಿ.ಇ.ಸೋಮ ಲೋಕನಾಥ್ ಮಾತನಾಡಿ, ಪಟ್ಟಣ ವ್ಯಾಪ್ತಿಯಲ್ಲಿ ನೂತನ ಕಟ್ಟಡ ಕಟ್ಟುವಾಗ ತಳ ಭಾಗದಲ್ಲಿ ವಾಹನಗಳಿಗೆ ಸ್ಥಳ ವ್ಯವಸ್ಥೆ ಮಾಡಬೇಕೆಂದು ನಿಯಮವಿದ್ದರೂ ಅನೇಕರು ಪಂಚಾಯಿತಿ ಆಡಳಿತದಲ್ಲಿರುವವರು ನಿಯಮವನ್ನು ಉಲ್ಲಂಘಿಸಿ ಪಾರ್ಕಿಂಗ್ ಬದಲು ಮಳಿಗೆಯನ್ನು ಕಟ್ಟಿ ಬಾಡಿಗೆಗೆ ಕೊಟ್ಟಿದ್ದಾರೆ. ಇದರಿಂದ ವಾಹನಗಳು ರಸ್ತೆಯಲ್ಲಿಯೇ ನಿಲ್ಲುವಂತಾಗಿ ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ ಎಂದು ದೂರಿದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ಎಮ್.ಕೆ. ಅಬ್ದುಲ್ ಶರೀಫ್, ಮತ್ತು ಎಲ್.ಜಿ. ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಶಾರ್ಜಾದಲ್ಲಿ ಕೂರ್ಗ್ ಈದ್ ಕ್ರಿಕೆಟ್: ಬುಗಾಂಬೊ ಎಫ್‌ಸಿ ತಂಡ ಚಾಂಪಿಯನ್



ಸಿದ್ದಾಪುರ, ಏ.25– ದುಬೈನಲ್ಲಿ ಉದ್ಯೋಗಿಗಳಾಗಿ ನೆಲೆಸಿರುವ ಕೊಡಗು ಜಿಲ್ಲೆಯ ಯುವಕರು ಒಗ್ಗೂಡಿ ರಂಜಾನ್ ಹಬ್ಬದ ಅಂಗವಾಗಿ ಈದ್ ಮೀಟ್ ಕ್ರಿಕೆಟ್ ಪಂದ್ಯಾವಳಿಯನ್ನು ಶಾರ್ಜಾ ಸ್ಕೈಲೈನ್ ಯುನಿವರ್ಸಿಟಿ ಕಾಲೇಜ್ ಮೈದಾನದಲ್ಲಿ ಆಯೋಜಿಸಿದ್ದರು.

ದುಬೈ ಯು ಅಂಡ್ ಐ ಕಂಪನಿಯ ಮುಖ್ಯಸ್ಥ ಮೈಸೂರು ಅಬ್ದುಲ್ ಖಾದರ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ, ಉದ್ಯೋಗ ನಿಮಿತ್ತ ವಿವಿಧ ರಾಷ್ಟ್ರಗಳಲ್ಲಿ ನೆಲೆಸಿರುವ ಯುವ ಕ್ರೀಡಾಪಟುಗಳನ್ನು ಕ್ರೀಡೆಯ ಮೂಲಕ ಒಗ್ಗೂಡಿಸುವಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಕರ ಕ್ರೀಡಾಭಿಮಾನದ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ದುಶ್ಚಟಗಳಿಂದ ದೂರವಿದ್ದು ಉದ್ಯೋಗದ ಮೂಲಕ ಭವಿಷ್ಯ ರೂಪಿಸಿಕೊಂಡು ಕ್ರೀಡೆಯ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕೆಂದರು. ದುಬೈ ಸೇರಿದಂತೆ ಇತರ ರಾಷ್ಟ್ರಗಳಲ್ಲಿ ನೆಲೆಸಿರುವ ಕೊಡಗಿನ ಕ್ರೀಡಾಪಟುಗಳಿಗೆ ಮುಕ್ತ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಿದ್ದು, ಸುಮಾರು 9 ತಂಡಗಳು ಭಾಗವಹಿಸಿದ್ದವು.

ಅಂತಿಮ ರೋಮಾಂಚನಕಾರಿ ಪಂದ್ಯಾಟದಲ್ಲಿ ಚಾಮಿಯಾಲ ಸಿ ವೈ ಸಿ ತಂಡವನ್ನು ಮಣಿಸಿ ನೂರುದ್ದೀನ್ ನಾಯಕತ್ವದ ಬುಗಾಂಬೊ ಎಫ್ ಸಿ ತಂಡ ಚಾಂಪಿಯನ್ ಪಟ್ಟ ಅಲಂಕರಿಸುವುದರೊಂದಿಗೆ ಪ್ರಥಮ ನಗದು ಬಹುಮಾನ ಪಡೆದುಕೊಂಡಿತು. ಕಲೀಲ್ ನಾಯಕತ್ವದ ಚಾಮಿಯಾಲ ಸಿ ವೈ ಸಿ ತಂಡ ದ್ವಿತೀಯ ಸ್ಥಾನದೊಂದಿಗೆ ರನ್ನರ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ಪಂದ್ಯಾಟದಲ್ಲಿ ಬುಗಾಂಬೊ ಎಫ್ ಸಿ ತಂಡದ ಆಟಗಾರ ವಿರಾಜಪೇಟೆ ನೂರುದ್ದೀನ್ ಫೈನಲ್ ಮ್ಯಾನ್ ಆಫ್ ದಿ ಮ್ಯಾಚ್, ಹೈಯೆಸ್ಟ್ ಸಿಕ್ಸರ್, ಮ್ಯಾನ್ ಆಫ್ ದಿ ಸೀರಿಯಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಸಿ ವೈ ಸಿ ಚಾಮಿಯಾಲ ತಂಡದ ಜಿಯಾ ಉತ್ತಮ ಬ್ಯಾಟ್ಸ್ ಮ್ಯಾನ್ ಪ್ರಶಸ್ತಿ, ಚಾಮಿಯಲ ತಂಡದ ಇರ್ಫಾನ್ ಕುವಾಲೆ ಬೆಸ್ಟ್ ಕ್ಯಾಚರ್ ಪ್ರಶಸ್ತಿ, ಬುಗಾಂಬೊ ಎಫ್ ಸಿ ತಂಡದ ನೌಶಿರ್ ಉತ್ತಮ ಫೀಲ್ಡರ್ ಪ್ರಶಸ್ತಿ,ಸೈದು ಉತ್ತಮ ಬೌಲರ್ ಪ್ರಶಸ್ತಿ ಪಡೆದುಕೊಂಡರು. ಪಂದ್ಯಾವಳಿಯಲ್ಲಿ ಸಾಗರ್ ಫ್ರೆಂಡ್ಸ್, ಅಯ್ಯಂಗೇರಿ ಫ್ರೆಂಡ್ಸ್, ಆರ್ ವೈ ಸಿ ಎಮ್ಮೆ ಮಾಡು, ಫೋರ್ ಸ್ಟಾರ್ ಎಡಪಲ, ಕೆ ವೈ ಸಿ ಸಿ ಕಡಂಗ, ಕೊಂಡಂಗೇರಿ ಫ್ರೆಂಡ್ಸ್, ಜಾವಾ ಲೆಗೆಂಡ್ ಸುಂಟಿಕೊಪ್ಪ ತಂಡಗಳು ಭಾಗವಹಿಸಿದ್ದವು.

ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಕ್ರಿಕೆಟ್ ಪಂದ್ಯಾವಳಿ ಆಯೋಜಕರಾದ ನಿಶಾಬ್ ನೆಲ್ಲಿಹುದಿಕೇರಿ, ದಿಲ್ಶಾನ್ ನಾಪೋಕ್ಲು, ಸೈಯದ್ ಗುಂಡಿಗೆರೆನೂರುದ್ದೀನ್ ಕಲ್ಲುಬಾಣೆ, ಪ್ರಮುಖರಾದ ಕುಂಡಂಡ ರಫೀಕ್ ಕುಂಜಿಲ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹನೂರಿನಲ್ಲಿ ಪ್ರಿಯಾಂಕಗಾಂಧಿ ಭರ್ಜರಿ ಚುನಾವಣಾ ಪ್ರಚಾರ

ಹಲವಾರು ಭಾಗ್ಯಗಳನ್ನು ನೀಡಿದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಎಂದು ಮನವಿ



ಹನೂರು, ಏ.25– ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಗಾಂಧಿ ಅವರು ಭರ್ಜರಿ ಚುನಾವಣಾ ಪ್ರಚಾರ ನಡೆಸಿದರು.

ರಾಜ್ಯದ ಜನತೆಗೆ ಹಲವಾರು ಭಾಗ್ಯಗಳನ್ನು ನೀಡಿದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಂತೆ ಇಂದಿಲ್ಲಿ ಏರ್ಪಡಿಸಲಾಗಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮನವಿ ಮಾಡಿದರು.

ರಾಜ್ಯದ ಜನರ ಹಣ ಬಿಜೆಪಿ ಮಂತ್ರಿಗಳು, ನಾಯಕರ ಮನೆ ಸೇರಿದೆ. ಜನರು ಇಟ್ಟಿದ್ದ ವಿಶ್ವಾಸ, ನಂಬಿಕೆಗೆ ಬಿಜೆಪಿ ದ್ರೋಹ ಬಗೆದಿದೆ ಎಂದ ಅವರು, ಮಕ್ಕಳ ಭವಿಷ್ಯಕ್ಕಾಗಿ, ಸ್ತ್ರೀಯರ ಉದ್ಧಾರಕ್ಕಾಗಿ ಮತ್ತು ಯುವಕರ ಏಳಿಗೆಗಾಗಿ, ದೇಶದ ಅಭಿವೃದ್ಧಿಯ ಬಗ್ಗೆ ಚಿಂತಿಸುವಂತಹ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ, ಹನೂರು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಆರ್. ನರೇಂದ್ರ ಅವರಿಗೆ ತಮ್ಮ ಅಮೂಲ್ಯ ಮತವನ್ನು ನೀಡಿ ಜಯ ಗಳಿಸಬೇಕು ಎಂದು ಮನವಿ ಮಾಡಿದರು.

ರಾಜ್ಯದ ಜನತೆಗೆ ಪಶುಭಾಗ್ಯ, ಅನ್ನ ಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ ಹಾಗೂ ಇಂದಿರಾ ಕ್ಯಾಂಟೀನ್ ಸೌಲಭ್ಯಗಳನ್ನು ನೀಡಿದ ಸರ್ಕಾರ ಕಾಂಗ್ರೆಸ್ ಸರ್ಕಾರವಾಗಿದೆ ಎಂದ ಪ್ರಿಯಾಂಕ ಗಾಂಧಿ ಅವರು, ದೇಶದಲ್ಲಿ ಹೆಣ್ಣು ಮಕ್ಕಳು ಅನುಭವಿಸುವಂತಹ ನೋವು, ಸಂಕಟ ಮತ್ತು ಸವಾಲಿನ ಬದುಕನ್ನು ನಾನು ಕಂಡಿದ್ದೇನೆ. ಉತ್ತರ ಪ್ರದೇಶದಲ್ಲಿ ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ಉತ್ತಮ ಯೋಜನೆಗಳನ್ನು ರೂಪಿಸಿದ್ದೆ. ಈ ದೇಶವನ್ನು ಕಟ್ಟುವ ಕೆಲಸದಲ್ಲಿ ಹೆಣ್ಣು ಮಕ್ಕಳ ಪಾತ್ರ ಅಪಾರವಾಗಿದೆ. ಮಕ್ಕಳ ಶಿಕ್ಷಣ, ಆರೋಗ್ಯ ನೀಡುವ ಜೊತೆಗೆ ಉತ್ತಮ ಸಂಸ್ಕೃತಿ ಮತ್ತು ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ಹೆಣ್ಣುಮಕ್ಕಳದ್ದಾಗಿದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಆಡಳಿತ ನಡೆಸಿದ ಬಿಜೆಪಿ ಪಕ್ಷ ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮನ್ನು ಹೇಗೆಲ್ಲಾ ನಡೆಸಿಕೊಂಡಿದೆ ಎಂಬುದು ತಮಗೆಲ್ಲ ತಿಳಿದಿದೆ. ನಾವು ಕಷ್ಟಪಟ್ಟು ದುಡಿದು ಕಟ್ಟಿದ ತೆರಿಗೆ ಹಣದಲ್ಲಿ ಅಭಿವೃದ್ಧಿ ಕಾಮಗಾರಿಗಳ ನೆಪದಲ್ಲಿ ಶೇ. 40ರಷ್ಟು ಹಣವನ್ನು ಲೂಟಿ ಮಾಡಿ ನಮಗೆ ಮೋಸ ಮಾಡಿದೆ ಎಂದು ದೂರಿದರು.

ಈ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷ ಲತಾ ಜತ್ತಿ, ನಟ ಎಸ್. ನಾರಾಯಣ್, ಕರ್ನಾಟಕ ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪ ಅಮರನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಈಶ್ವರ್, ಮುಕುಂದ ವರ್ಮ, ಕಾಂಗ್ರೆಸ್ ಅಭ್ಯರ್ಥಿ ಆರ್. ನರೇಂದ್ರ, ಮುಖಂಡರಾದ ಜಾವದ್ ಗಿರೀಶ್, ಹರೀಶ್, ಸುದೇಶ್, ಸಂಪತ್‌ಕುಮಾರ್ ಮುಂತಾದವರು ಹಾಜರಿದ್ದರು.

ಅಜ್ಜಿ ಇಂದಿರಾಗಾಂಧಿ ಕೊಡುಗೆ ಸ್ಮರಿಸಿದ ಗಿರಿಜನ ಮಹಿಳೆಯನ್ನು ಅಪ್ಪಿಕೊಂಡು ಅಭಿನಂದಿಸಿದ ಪ್ರಿಯಾಂಕ



ಹನೂರು, ಏ.25– ತಮ್ಮ ಅಜ್ಜಿ ಇಂದಿರಾಗಾಂಧಿ ಅವರ ಕೊಡುಗೆಯನ್ನು ಸ್ಮರಿಸಿ, ಹಾಡಿ ಹೊಗಳಿದ ಮತ್ತು ತಮ್ಮಲ್ಲೇ ಇಂದಿರಾಗಾಂಧಿ ಅವರನ್ನು ಕಾಣುವುದಾಗಿ ತಿಳಿಸಿದ ಗಿರಿಜನ ಮಹಿಳೆಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಗಾಂಧಿ ಅಪ್ಪಿಕೊಂಡು ಅಭಿನಂದಿಸಿದ್ದಾರೆ.

ಪಟ್ಟಣದ ಆರ್.ಎಸ್.ದೊಡ್ಡಿ ಸರ್ಕಾರಿ ಪದವಿ ಕಾಲೇಜು ಸಮೀಪದ ಖಾಸಗಿ ಜಮೀನಿನಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಿಂದ ಗಿರಿಜನ ಮಹಿಳೆಯರೊಂದಿಗೆ ಏರ್ಪಡಿಸಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಈ ಹೃದಯಸ್ಪರ್ಶಿ ಘಟನೆ ಜರುಗಿತು.

ಸಂವಾದದಲ್ಲಿ ಗಿರಿಜನ ಸಮುದಾಯದ ಹೊಸಪೋಡು ತಿಮ್ಮಮ್ಮ ಅವರು ಮಾತನಾಡಿ, ಇಂದಿರಾಗಾಂಧಿ ಅವರಿಂದ ನಮ್ಮಂತ ಬಡಗಿರಿಜನರಿಗೆ ಅನುಕೂಲವಾಗಿದೆ. ನಮ್ಮ ಸಮುದಾಯದ ಮತ ಯಾವತ್ತು ಕಾಂಗ್ರೆಸ್‌ಗೆ, ನಾವು ಇಂದಿರಾಗಾಂಧಿ ಅವರನ್ನು ನಿಮ್ಮಲ್ಲೇ ಕಾಣುತ್ತೇವೆ ಎಂದು ಅಭಿಮಾನದಿಂದ ನುಡಿದರು. ಇದರಿಂದ ಸಂತಸಗೊಂಡ ಪ್ರಿಯಾಂಕ ಗಾಂಧಿ ಅವರು ತಿಮ್ಮಮ್ಮ ಇರುವ ಸ್ಥಳಕ್ಕೆ ನಾನೇ ಬರುತ್ತೇನೆ ಎಂದು ವೇದಿಕೆಯಿಂದ ಇಳಿದು ನೇರವಾಗಿ ತಿಮ್ಮಮ್ಮ ಬಳಿ ಬಂದು ಅವರನ್ನು ಅಪ್ಪಿಕೊಂಡು ಅಭಿನಂದಿಸಿದರು. ಇದನ್ನು ಕಂಡ ಗಿರಿಜನರು ಚಪ್ಪಾಳೆ ತಟ್ಟುವ ಮೂಲಕ ಹರ್ಷವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಪ್ರಿಯಾಂಕಗಾಂಧಿ, ತಾಲೂಕಿನ ಕೊಕ್ಕಬರೆ ಗ್ರಾಮದ ಮೂಲ ಸೌಲಭ್ಯಗಳನ್ನು ವೈಯಕ್ತಿಕವಾಗಿ ಕಾಳಜಿವಹಿಸಿ ಈಡೇರಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಕೊಕ್ಕಬರೆ ಗ್ರಾಮದ ಬೇಡಗಂಪಣ ಸಮುದಾಯದ ಬೊಮ್ಮಮ್ಮ ಮಾತನಾಡಿ, ನಮ್ಮ ಗ್ರಾಮದಲ್ಲಿ ಕುಡಿಯುವ ನೀರು, ರಸ್ತೆ, ಶಾಲೆ ಇನ್ನಿತರೆ ಮೂಲ ಸೌಕರ್ಯಗಳು ಇಲ್ಲ ಎಂದು ತಿಳಿಸಿದರು.

ಇದನ್ನು ಆಲಿಸಿದ ಪ್ರಿಯಾಂಕಾ ಗಾಂಧಿ ನಮಗೆ ಅಧಿಕಾರ ಬರಲಿ ಅಥವಾ ಬಾರದಿರಲಿ ನಿಮ್ಮ ಗ್ರಾಮಕ್ಕೆ ಅಗತ್ಯವಾದ ಮೂಲ ಸೌಕರ್ಯ ಕಲ್ಪಿಸುತ್ತೇನೆ ಎಂದು ಭರವಸೆ ನೀಡಿದರು.

ಕಿಕ್ಕಿರಿದು ನೆರೆದಿದ್ದ ಮಹಿಳೆಯರು: ಇಂದಿರಾ ಮೊಮ್ಮಗಳು ಪ್ರಿಯಾಂಕಾ ಗಾಂಧಿ ಬರುವ ಹಿನ್ನೆಲೆಯಲ್ಲಿ ಕ್ಷೇತ್ರದ ವಿವಿಧ ಗ್ರಾಮಗಳಿಂದ ಬಹು ಸಂಖ್ಯೆಯಲ್ಲಿ ಮಹಿಳೆಯರು ಆಗಮಿಸಿದ್ದು ಕಂಡು ಬಂದಿತು. ಕಾರ್ಯಕ್ರಮಕ್ಕೆ ಇಂತಿಷ್ಟು ಎಂದು ಅಳವಡಿಸಲಾಗಿದ್ದ ಕುರ್ಚಿಗಳು ಸಾಲದೆ ಕಾರ್ಯಕ್ರಮದ ಎರಡು ಬದಿಯಲ್ಲಿ ಹೆಚ್ಚಿನ ಜನಸಂಖ್ಯೆ ನಿಂತು ಕಾರ್ಯಕ್ರಮವನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಚುನಾವಣಾ ಉಸ್ತುವಾರಿ ರಣದೀಪ್ ಸುರ್ಜೆವಾಲಾ, ಕಾಂಗ್ರೆಸ್ ರಾಜ್ಯ ಮಹಿಳಾ ಅಧ್ಯಕ್ಷೆ ಪುಷ್ಪಾ ಅಮರ ನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ ಸೇರಿದಂತೆ ಪಕ್ಷದ ಇನ್ನಿತರೆ ಮುಖಂಡರು, ಸಾರ್ವಜನಿಕರು ಇದ್ದರು.

ಬಿಜೆಪಿ ವಿರುದ್ಧ ವಾಗ್ದಾಳಿ: ದೇಶದ ಬಡ ಜನತೆಯ ಹಣವನ್ನು ಬಿಜೆಪಿ ಸರ್ಕಾರ ಅದಾನಿಗೆ ಒಪ್ಪಿಸಿ ಜನತೆಯನ್ನು ಬೀದಿಪಾಲು ಮಾಡಿದೆ. ಈ ದಿಸೆಯಲ್ಲಿ ರಾಜ್ಯದಲ್ಲಿರುವ ಶೇ 40 ಪರ್ಸೆಂಟ್ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ ಎಂದು ಪ್ರಿಯಾಂಕ ಗಾಂಧಿ ವಾಗ್ದಾಳಿ ನಡೆಸಿದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ಬಸವಣ್ಣ, ನಾರಾಯಣ ಗುರು ಅವರ ವಿಚಾರಗಳ ಬಗ್ಗೆ ತಪ್ಪು ವದಂತಿ ಹಬ್ಬಿಸುತ್ತಿದೆ. ಮುಂಬರುವ ಚುನಾವಣೆ ನಿಮ್ಮ ಮಕ್ಕಳ ಭವಿಷ್ಯದ ಪ್ರಶ್ನೆಯಾಗಿದೆ. ಹಾಗಾಗಿ ನೀವು ಹುಷಾರಾಗಿರಬೇಕು. ಯಾರಿಗೆ ಮತ ಹಾಕಬೇಕು ಎಂಬುದನ್ನು ಮನಗಾಣಬೇಕು. ಬಿಜೆಪಿ ನೀಡಿದ ಭರವಸೆ ಈಡೇರಿಸಿಲ್ಲ ಎಂದರು.

ಬಿಜೆಪಿ ಅಭ್ಯರ್ಥಿ ಸೋಮಣ್ಣ ಪರ ಪತ್ನಿ ಮತಯಾಚನೆ



ಚಾಮರಾಜನಗರ, ಏ.25– ನಗರ ಮತ್ತು ಗ್ರಾಮೀಣ ಪ್ರದೇಶದ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಗೆಲ್ಲಿಸಬೇಕು ಎಂದು ಸೋಮಣ್ಣನವರ ಪತ್ನಿ ಶೈಲಜಾ ಮತದಾರರಲ್ಲಿ ಕೈ ಮುಗಿದು ಮನವಿ ಮಾಡಿದರು.

ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರನ್ನು ಭೇಟಿ ಮಾಡಿ ಪಕ್ಷದ ಪರ ಕೆಲಸ ಮಾಡುವಂತೆ ಕೋರಿದರು.

ಕ್ಷೇತ್ರಾದ್ಯಂತ ಬಿಜೆಪಿ ಗೆಲುವಿಗೆ ಉತ್ತಮ ವಾತಾವರಣವಿದೆ. ತಮ್ಮ ತಮ್ಮ ಗ್ರಾಮಗಳಲ್ಲಿ ಕಾರ್ಯಕರ್ತರು ಶ್ರಮಹಾಕಿ ಮತದಾರರಿಗೆ ಬಿಜೆಪಿ ಪಕ್ಷದ ಬಗ್ಗೆ ಮನವರಿಕೆ ಮಾಡಿಕೊಟ್ಟರೆ ಬೂತ್ ಮಟ್ಟದಲ್ಲಿ ವಿಜಯ ಸಾಧಿಸಬಹುದು. ಇದರ ಫಲಿತಾಂಶ ಶಾಸಕರ ಆಯ್ಕೆಗೆ ಸುಲಭವಾಗುತ್ತದೆ ಎಂದರು. ಗ್ರಾಮೀಣ ಪ್ರದೇಶಗಳಲ್ಲಿ ಇನ್ನು ರಸ್ತೆ ಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಹೋದ ಕಡೆಯಲ್ಲ ಜನರು ಸಮಸ್ಯೆಗಳ ಸರಿಮಳೆ ಸುರಿಸುತ್ತಿದ್ದಾರೆ. ಈ ಬಾರಿ ಸೋಮಣ್ಣ ಅವರನ್ನು ಗೆಲ್ಲಿಸಿದರೆ ಅಭಿವೃದ್ಧಿಯನ್ನು ಕಾಣಬಹುದು. ಅದಕ್ಕೆ ನಿಮ್ಮೆಲ್ಲರ ಆಯ್ಕೆ ಬಿಜೆಪಿಯಾಗಿರಲ್ಲಿ ಎಂದು ವಿನಂತಿಸಿದರು .

ನಂತರ ಗ್ರಾಮದ ಶ್ರೀ ಲಕ್ಷ್ಮೀದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ನಂತರ ಹೆಬ್ಬಸೂರು ಗ್ರಾಮದ ಶೃಂಗೇರಿ ಶಾರದಾ ಮಠಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ಶಾರದಾಂಬೆಯ ಆಶೀರ್ವಾದ ಪಡೆದರು. ಗ್ರಾಮದ ಪ್ರಮುಖರನ್ನು ಭೇಟಿಯಾಗಿ ಸೋಮಣ್ಣ ಪರ ಮತ ಚಲಾಯಿಸುವಂತೆ ಮನವಿ ಮಾಡಿದರು..

ಈ ವೇಳೆ ಗ್ರಾಮದ ಮುಖಂಡರಾದ ಶಿವನಾಂಕರಪ್ಪ, ಕಪಿನಿನಾಯಕ, ಡಿ.ಪುಟ್ಟಸ್ವಾಮಿ, ಗೋವಿಂದರಾಜು, ಧಯಾನಿಧಿ, ಸುಂದ್ರಪ್ಪ, ಕಂಬಳೇಶ, ದಡದಹಳ್ಳಿ ರಮೇಶ್, ಪ್ರಸಾದ್, ರಾಜಣ್ಣ,ಮೂರ್ತಿ, ಶಂಕರ್, ಪ್ರದೀಪ್ ಕುಮಾರ್, ಸಂತೋಷ್, ರಾಜೇಂದ್ರ, ಸಿ.ಜೆ. ಮಹದೇವಸ್ವಾಮಿ, ಪುಟ್ಟಸ್ವಾಮಿ, ಮಲ್ಲೇಶ, ಶೇಷಪ್ಪ, ಸೋಮಸುಂದರ, ಮಹದೇವಪ್ಪ ಶ್ರೀನಾಥ್ ಇತರ ಪ್ರಮುಖರು ಇದ್ದರು.

ವಾಟ್ಸಾಪ್‌ನಲ್ಲಿ ಹರಿದಾಡುತ್ತಿರುವ ಸಚಿವ ಸೋಮಣ್ಣ ಆಡಿಯೋ

ಚಾಮರಾಜನಗರ, ಏ.25– ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಚಿವ ವಿ. ಸೋಮಣ್ಣ ಅವರು ಜೆಡಿಎಸ್ ಅಭ್ಯರ್ಥಿ ಮಲ್ಲಿಕಾರ್ಜುನಸ್ವಾಮಿ ಅವರಿಗೆ ಕರೆ ಮಾಡಿ ನಾಮಪತ್ರವನ್ನು ವಾಪಸ್ ಪಡೆಯುವಂತೆ ಹೇಳಿರುವ ಆಡಿಯೋ ವಾಟ್ಸಾಪ್‌ನಲ್ಲಿ ಹರಿದಾಡುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಸೋಮವಾರ ಸೋಮಣ್ಣ ಬೆಂಬಲಿಗರೊಬ್ಬರು ಮಲ್ಲಿಕಾರ್ಜುನಸ್ವಾಮಿ ಉರುಫ್ ಆಲೂರು ಮಲ್ಲು ಅವರಿಗೆ ಮೊಬೈಲ್ ಕರೆ ಮಾಡಿ ನಂತರ ಸೋಮಣ್ಣ ಅವರಿಗೆ ನೀಡಿದ್ದಾರೆ. ಈ ವೇಳೆ ಸೋಮಣ್ಣ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನಿನಗೆ ಗೂಟದ ಕಾರು ಕೊಡ್ತೀವಿ. ವಾಪಸ್ ತಗೋ ಎಂದು ಹೇಳಿರುವುದು ಸ್ಪಷ್ಟವಾಗಿದೆ. ಇದಲ್ಲದೆ ನಟರಾಜು ಹಾಗೂ ಸುದೀಪ್ ಎಂಬುವವರು ಆಲೂರು ಮಲ್ಲು ಅವರೊಂದಿಗೆ ಮಾತನಾಡಿದ್ದಾರೆ.

ನನಗೆ ಸೋಮಣ್ಣ ಅವರು ಕರೆ ಮಾಡಿ ನಾಮಪತ್ರ ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದು ನಿಜ. ಅದಕ್ಕೆ ನಾನು ಒಪ್ಪದೇ ಕಣದಲ್ಲಿ ಉಳಿಸಿದ್ದೇನೆ ಎಂದು ಆಲೂರು ಮಲ್ಲು ತಿಳಿಸಿದ್ದಾರೆ.


ಬಸ್ ಡಿಕ್ಕಿ: ಇಬ್ಬರು ಬೈಕ್ ಸವಾರರು ಸಾವು

ಕೊಳ್ಳೇಗಾಲ, ಏ.25– ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಬೈಕ್ ಸವಾರರು ಸ್ಥಳದಲ್ಲೇ ಸಾವನ್ನಪ್ಪಿ ರುವ ಘಟನೆ ತಾಲೂಕಿನ ಮಧುವನಹಳ್ಳಿ ಗ್ರಾಮದ ಬಳಿ ಜರುಗಿದೆ.

ಮಧುವನಹಳ್ಳಿ ಗ್ರಾಮದ ಅಭಿಷೇಕ್ ಹಾಗೂ ಪ್ರೀತಮ್ ಸಾವನ್ನಪ್ಪಿದ ಯುವಕರು, ಮತ್ತೋರ್ವ ಸವಾರ ಮನು ತೀವ್ರವಾಗಿ ಗಾಯಗೊಂಡಿದ್ದು, ಚಿಂತಾಜನಕ ಸ್ಥಿತಿಯಲ್ಲಿ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಈ ಮೂವರು ಕೊಳ್ಳೇಗಾಲದಿಂದ ತಮ್ಮ ಸ್ವಗ್ರಾಮಕ್ಕೆ ಒಂದೇ ಬೈಕ್‌ನಲ್ಲಿ ಹೋಗುತ್ತಿದ್ದಾಗ ಕೊಯಮತ್ತೂರು ಕಡೆಯಿಂದ ಬಂದ ಎಸ್‌ಪಿಎಸ್ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿ, ಮತ್ತೋರ್ವ ತೀವ್ರ ಗಾಯಗೊಂಡಿದ್ದಾನೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ಮುಂದಿನ ಕ್ರಮ ಜರುಗಿಸಿದ್ದಾರೆ.

ಮಾಂಬಳ್ಳಿ ನಂಜುಂಡಸ್ವಾಮಿ ಕಾಂಗ್ರೆಸ್ ಸೇರ್ಪಡೆ



ಯಳಂದೂರು, ಏ.25– ಸಂಸದ ವಿ. ಶ್ರೀನಿವಾಸಪ್ರಸಾದ್ ಅವರ ಆಪ್ತರಾಗಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಮಾಂಬಳ್ಳಿ ನಂಜುಂಡಸ್ವಾಮಿ ಪಕ್ಷಕ್ಕೆ ರಾಜೀನಾಮೆ ನೀಡಿ, ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು.

ತಾವು ಕಳೆದ 10 ವರ್ಷಗಳಿಂದ ಬಿಜೆಪಿ ಕಾರ್ಯಕಾರಣಿ ಸಮಿತಿ ಸದಸ್ಯರಾಗಿದ್ದೇನೆ. ಇತ್ತೀಚಿನ ದಿನಗಳಲ್ಲಿ ಕ್ಷೇತ್ರದಲ್ಲಿ ಬಿಜೆಪಿ ದಲಿತ ಮುಖಂಡರನ್ನು ಸರಿಯಾಗಿ ನಡೆಸಿಕೊಳ್ಳುತ್ತಿರಲಿಲ್ಲ. ಸೂಕ್ತ ಸ್ಥಾನಮಾನಗಳನ್ನು ನೀಡಿಲ್ಲ ಎಂದಿರುವ ಅವರು, ಇದರಿಂದಾಗಿ ತಾವು ಬಿಜೆಪಿ ತೊರೆಯಲು ನಿರ್ಧರಿಸಿ ತಮ್ಮ ರಾಜಕೀಯ ಗುರುಗಳಾದ ಶ್ರೀನಿವಾಸಪ್ರಸಾದ್ ಅವರ ಗಮನಕ್ಕೆ ತಂದು ಕಾಂಗ್ರೆಸ್ ಸೇರ್ಪಡೆಯಾಗಿದ್ದೇನೆ ಎಂದು ತಿಳಿಸಿದರು. ತಾವು ಕಾಂಗ್ರೆಸ್ ಸೇರಿರುವ ಬಗ್ಗೆ ಪ್ರಸಾದ್ ಅವರಿಗೆ ಯಾವುದೇ ರೀತಿಯ ಬೇಸರವಿಲ್ಲ. ನಿಷ್ಠಾವಂತ ಕಾರ್ಯಕರ್ತನಾಗಿದ್ದ ನನಗೆ ಯಾವುದೇ ಸ್ಥಾನಮಾನ ಕೊಡಿಸಲು ಸಾಧ್ಯವಾಗಿಲ್ಲ ಎಂದು ಅವರು ಬೇಸರಪಟ್ಟುಗೊಂಡಿದ್ದರು. ತಾನು ಬೇರೆ ಪಕ್ಷದಲ್ಲಿದ್ದೂ ಪ್ರಸಾದ್ ಅವರ ಶಿಷ್ಯನಾಗಿಯೇ ಮುಂದುವರೆಯುತ್ತೇನೆ. ರಾಜಕೀಯವಾಗಿ ಬೇರೆ ಹಾದಿಯಲ್ಲಿದ್ದರೂ ಅವರ ಮತ್ತು ನನ್ನ ನಡುವಿನ ಸಂಬಂಧಕ್ಕೆ ಯಾವುದೇ ಅಡ್ಡಿಯಿಲ್ಲ ಎಂದು ನಂಜುಂಡಸ್ವಾಮಿ ಹೇಳಿದರು.

ಮುಸ್ಲಿಮರ 2ಬಿ ಮೀಸಲಾತಿ ರದ್ದು ಆದೇಶಕ್ಕೆ ಸುಪ್ರೀಂ ತಡೆ

ಕರ್ನಾಟಕ ಬಿಜೆಪಿ ಸರ್ಕಾರಕ್ಕೆ ಮುಖಭಂಗ

ನವದೆಹಲಿ, ಏ.25– ಮುಸ್ಲಿಂ ಮೀಸಲಾತಿ 2ಬಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿದ್ದ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಸುಪ್ರೀಂಕೋರ್ಟ್ ತಡೆ ನೀಡಿದೆ. ರಾಜ್ಯ ಸರ್ಕಾರದ 2ಬಿ ಮೀಸಲಾತಿ ರದ್ದತಿಗೆ ಸುಪ್ರೀಂಕೋರ್ಟ್ ತಡೆ ನೀಡಿದೆ. ನ್ಯಾಯಾಲಯದ ಆದೇಶದಿಂದ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ತೀವ್ರ ಹಿನ್ನಡೆಯಾಗಿದೆ. ಇತರೆ ಹಿಂದುಳಿದ ವರ್ಗಗಳ(ಒಬಿಸಿ) ವಿಭಾಗದಲ್ಲಿ ಮುಸ್ಲಿಮರಿಗೆ ನೀಡಲಾಗಿದ್ದ ಸುಮಾರು ಮೂರು ದಶಕಗಳಷ್ಟು ಹಿಂದಿನ ಶೇ.4ರ ಮೀಸಲಾತಿಯನ್ನು ರದ್ದುಗೊಳಿಸಿದ ಕರ್ನಾಟಕದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರದ ವಿವಾದಾತ್ಮಕ ನಿರ್ಧಾರದ ಬಗ್ಗೆ ಸುಪ್ರೀಂಕೋರ್ಟ್ ಅಸಮಾಧಾನ ವ್ಯಕ್ತಪಡಿಸಿ ಸರ್ಕಾರದ ಆದೇಶಕ್ಕೆ ತಡೆ ನೀಡಿ, ವಿಚಾರಣೆಯನ್ನು ಮೇ 9ಕ್ಕೆ ಮುಂದೂಡಿದೆ.

ಮುಸ್ಲಿಮರ ಶೇ 4ರ ಒಬಿಸಿ ಕೋಟಾವನ್ನು ರದ್ದುಪಡಿಸಿ, ಒಕ್ಕಲಿಗರು ಹಾಗೂ ಲಿಂಗಾಯತರ ಮೀಸಲಾತಿಯನ್ನು ತಲಾ ಶೇ 2ರಷ್ಟು ಹೆಚ್ಚಿಸುವ ನಿರ್ಧಾರವು ಮೇಲ್ನೋಟಕ್ಕೆ ಅಸ್ಥಿರ ಹಾಗೂ ದೋಷಪೂರಿತ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಸುಮಾರು ನಾಲ್ಕು ದಶಕಗಳಿಂದ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ನೀಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ರಾಜ್ಯ ಸರ್ಕಾರ ಮುಸ್ಲಿಮರ ಮೀಸಲಾತಿ ರದ್ದು ಮಾಡಿ, ಒಕ್ಕಲಿಗ ಮತ್ತು ಲಿಂಗಾಯತರಿಗೆ ತಲಾ ಶೇ. 2ರಷ್ಟು ಮೀಸಲಾತಿ ಹಂಚಿಕೆ ಮಾಡಿತ್ತು.

ಈ ಕುರಿತು ಸಲ್ಲಿಕೆಯಾಗಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ ಎಂ ಜೋಸೆಫ್ ಅವರ ನೇತೃತ್ವದ ಪೀಠ ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡಿದೆ. ಮೀಸಲಾತಿ ಪರಿಷ್ಕರಣೆ ವೇಳೆ ಮುಸ್ಲಿಮರಿಗೆ ರಾಜ್ಯ ಸರ್ಕಾರ ಶೇ.4ರ ಮೀಸಲಾತಿ ರದ್ದು ಮಾಡಿತ್ತು. ಸರ್ಕಾರದ ಈ ಆದೇಶ ಸಾಮಾಜಿಕ ವಲಯದಲ್ಲಿ ಹೆಚ್ಚು ಚರ್ಚೆಗೀಡಾಗಿತ್ತು. ಇದೀಗ ಸುಪ್ರೀಂಕೋರ್ಟ್ ಸರ್ಕಾರದ ಆದೇಶಕ್ಕೆ 'ಬ್ರೇಕ್' ಹಾಕಿದೆ. ಸುಪ್ರೀಂಕೋರ್ಟ್ ಆದೇಶದಿಂದಾಗಿ ಈಗ ಒಕ್ಕಲಿಗ ಮತ್ತು ಲಿಂಗಾಯತ ಮೀಸಲಾತಿ ಹೆಚ್ಚಳದ ಮೇಲೆ ಪರಿಣಾಮ ಬೀರಲಿದೆ.

ಮುಸ್ಲಿಮರ ಮೀಸಲಾತಿ ಸಂಬಂಧ ಸದ್ಯಕ್ಕೆ ಯಾವ ನಿರ್ಧಾರವಿಲ್ಲ

ಬೆಂಗಳೂರು, ಏ.25(ಕೆಎಂಶಿ)–ಮುಸ್ಲಿಮರ ಮೀಸಲಾತಿ ಕುರಿತು ಈಗಾಗಲೇ



ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಪೂರ್ಣವಾಗುವವರೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಈಗಾಗಲೇ ನ್ಯಾಯಾಲಯಕ್ಕೆ ತಿಳಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ವೋಚ್ಛ ನ್ಯಾಯಾಲಯವು ಮೇ 9ಕ್ಕೆ ದಿನಾಂಕ ಮುಂದೂಡಿದ್ದು, ಕೋರ್ಟ್‌ನಿಂದ ಯಾವುದೇ ತಡೆಯಾಜ್ಞೆ ಸಿಕ್ಕಿಲ್ಲ. ಅಲ್ಲಿಯವರೆಗೂ ಯಥಾಸ್ಥಿತಿ ಮುಂದುವರೆಯಲಿದೆ ಎಂದರು. ಮುಸ್ಲಿಮರಲ್ಲಿ ಸುಮಾರು 17 ಉಪಜಾತಿಗಳಿವೆ. ಅವೆಲ್ಲವೂ ಹಿಂದುಳಿದ ವರ್ಗದಲ್ಲಿಯೇ ಇವೆ. ಇಲ್ಲಿಯೂ ಕಡಿಮೆ ಆದಾಯಕ್ಕೆ ಮೀಸಲಾತಿ ಸಿಗುತ್ತಿತ್ತು. ನಾವು ಈಗ ಮಾಡಿದ ಮೀಸಲಾತಿಯಲ್ಲಿಯೂ ಅದೇ ಸಿಗುತ್ತದೆ. ಹೀಗಾಗಿ ಅನ್ಯಾಯ ಆಗಿಲ್ಲ ಮಾನದಂಡಗಳೂ ಬದಲಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರು ಬಂದ ಮೇಲೆ ರಾಜ್ಯ ಸಂಪೂರ್ಣ ಬಿಜೆಪಿಮಯ ಆಗುವುದರಲ್ಲಿ ಸಂಶಯವಿಲ್ಲ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ವಿಧಾನಸಭಾ ಚುನಾವಣೆ: ಸ್ಪರ್ಧಿಗಳಿಗೆ ತರಹೇವಾರಿ ಚಿಹ್ನೆಗಳ ನಿಗದಿ

ಮೈಸೂರು, ಏ.25(ಎಸ್‌ಬಿಡಿ)– ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಪಕ್ಷೇತರ ಅಭ್ಯರ್ಥಿಗಳಿಗೆ ತರಹೇವಾರಿ ಚಿಹ್ನೆಗಳನ್ನು ನೀಡಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗಳಿಗೆ 'ಕೈ', ಬಿಜೆಪಿ ಅಭ್ಯರ್ಥಿಗಳಿಗೆ 'ಕಮಲ', ಜೆಡಿಎಸ್ ಅಭ್ಯರ್ಥಿಗಳಿಗೆ 'ತಲೆಯ ಮೇಲೆ ಭತ್ತದ ತೆನೆ ಹೊತ್ತ ರೈತ ಮಹಿಳೆ', ಬಹುಜನ ಸಮಾಜವಾದಿ ಪಕ್ಷದ ಅಭ್ಯರ್ಥಿಗಳಿಗೆ 'ಆನೆ', ಆಮ್ ಆದ್ಮಿ ಪಕ್ಷದ ಅಭ್ಯರ್ಥಿಗಳಿಗೆ 'ಪೊರಕೆ', ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿಗೆ 'ಫುಟ್ಬಾಲ್' ಹೀಗೆ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳಿಗೆ ನಿಗದಿತ ಚಿಹ್ನೆಗಳಿದ್ದು, ನೋಂದಾಯಿತ, ನೋಂದಾಯಿತವಲ್ಲದ ಪಕ್ಷಗಳ ಅಭ್ಯರ್ಥಿಗಳು ಹಾಗೂ ಪಕ್ಷೇತರರಿಗೆ ವಿಭಿನ್ನ ಚಿಹ್ನೆಗಳು ಲಭ್ಯವಾಗಿವೆ.

ಎಸ್‌ಡಿಪಿಐ ಅಭ್ಯರ್ಥಿ ಸೇರಿದಂತೆ ಹಲವರಿಗೆ 'ಗ್ಯಾಸ್ ಸಿಲಿಂಡರ್', ಉತ್ತಮ ಪ್ರಜಾಕೀಯ ಪಕ್ಷದ ಅಭ್ಯರ್ಥಿಗಳಿಗೆ 'ಆಟೋ ರಿಕ್ಷಾ' ಚಿಹ್ನೆ ನೀಡಲಾಗಿದೆ. ಬ್ಯಾಟರಿ ಟಾರ್ಚ್, ಹೆಲ್ಮೆಟ್, ಬ್ಯಾಟ್ಸ್‌ಮನ್, ಗ್ಯಾಸ್ ಒಲೆ, ಉಂಗುರ, ಪ್ರೆಷರ್ ಕುಕ್ಕರ್, ತೆಂಗಿನ ತೋಟ, ಕ್ಯಾಮೆರಾ, ಲೂಡೋ, ರೋಡ್ ರೋಲರ್, ಗಣಕಯಂತ್ರ, ಗಾಜಿನ ಲೋಟ, ಡ್ರಿಲ್ ಮಷಿನ್, ಸಿಸಿಟಿವಿ ಕ್ಯಾಮರಾ, ಸೇಬು, ದೂರದರ್ಶನ, ಸೀಟಿ(ವ್ಹಿಸಲ್), ಕೊಳಲು, ಕರಣಿ, ವಜ್ರ, ಹೆಲಿಕಾಪ್ಟರ್, ದೂರವಾಣಿ, ಬ್ಯಾಟ್, ಚದುರಂಗ ಫಲಕ, ಕಲ್ಲಂಗಡಿ, ಕೈಗಾಡಿ, ಕಹಳೆ ಊದುತ್ತಿರುವ ಮನುಷ್ಯ, ಹೊಲಿಗೆ ಯಂತ್ರ, ಗಡಿಯಾರ, ಕಬ್ಬು ರೈತ, ಏಳು ಕಿರಣಗಳ ಪೆನ್ನಿನ ನಿಬ್ ಸೇರಿದಂತೆ ವಿವಿಧ ಚಿಹ್ನೆಗಳನ್ನು ನೀಡಲಾಗಿದೆ.

ಡಾಕ್ಟರ್‌ಗೆ ಸ್ಟೆತೋಸ್ಕೋಪ್: ವರುಣಾ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಡಾ.ಯು.ಪಿ.ಶಿವಾನಂದ(72 ವರ್ಷ) ಅವರಿಗೆ 'ಸ್ಟೆತೋಸ್ಕೋಪ್' ಚಿಹ್ನೆ ಸಿಕ್ಕಿದೆ. ದಕ್ಷಿಣ ಕನ್ನಡ ಜಿಲ್ಲೆ, ಮತ್ತೂರು ಕಸಬಾ ನಿವಾಸಿಯಾದ ಇವರು ದಾವಣಗೆರೆ ಜೆಜೆಎಂ ಮೆಡಿಕಲ್ ಕಾಲೇಜಿನಲ್ಲಿ 1973ರಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದಾರೆ. ಮತ್ತೂರಿನವರಾದ ಇವರು ವರುಣದಲ್ಲಿ ಸ್ಪರ್ಧಿಸಿರುವ ಬಗ್ಗೆ ಪ್ರತಿಕ್ರಿಯೆಗೆ ಸಂಪರ್ಕ ಸಾಧ್ಯವಾಗಲಿಲ್ಲ.

ದೇವಲಾಪುರ ಜೆಎಸ್‌ಎಸ್ ಪಿಯು ಕಾಲೇಜಿಗೆ ಶೇ.98.18 ಫಲಿತಾಂಶ

ಮೈಸೂರು, ಏ.25– ತಾಲೂಕಿನ ದೇವಲಾಪುರ ಗ್ರಾಮದ ಜೆಎಸ್‌ಎಸ್ ಪದವಿ





ಪೂರ್ವ ಕಾಲೇಜು, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.98.18ರಷ್ಟು ಫಲಿತಾಂಶ ಸಾಧಿಸಿದೆ. ಪರೀಕ್ಷೆಗೆ ಹಾಜರಾಗಿದ್ದ 55 ವಿದ್ಯಾರ್ಥಿಗಳಲ್ಲಿ 54 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಇವರಲ್ಲಿ 12 ಮಂದಿ ಅತ್ಯುನ್ನತ ಶ್ರೇಣಿ, 36 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ. ಕಲಾ ವಿಭಾಗದ ರಾಧಿಕಾ 527 ಹಾಗೂ ವಾಣಿಜ್ಯ ವಿಭಾಗದ ಎಂ.ಸುಮಾ 559 ಅಂಕಗಳನ್ನು ಕಾಲೇಜಿಗೆ ಮೊದಲಿಗರಾಗಿದ್ದಾರೆ. ಉಳಿದಂತೆ ವಾಣಿಜ್ಯ ವಿಭಾಗದ ಸೃಷ್ಟಿ 551, ಸುಷ್ಮಾ 541, ಸೌಮ್ಯ 539, ಪವಿತ್ರ 538, ಪಲ್ಲವಿ 533 ಹಾಗೂ ಕಲಾ ವಿಭಾಗದ ಚಂದ್ರಶೇಖರ್ 524, ಶಿವಪ್ರಸಾದ್ 524, ಆಶಾ 517, ಹರೀಶ್ 515 ಅವರು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಒಂದನೇ ಪುಟದಿಂದ

ಸರ್ಕಾರ ರಚಿಸುವುದು ನಿಶ್ಚಿತ

ಬಲದಿಂದ ಸರ್ಕಾರ ರಚಿಸುತ್ತೇವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಜ್ವರದಿಂದ ಈಗ ತಾನೇ ಚೇತರಿಸಿಕೊಂಡಿದ್ದೇನೆ. ನಾನು ಈಗಾಗಲೇ ಜನರ ಹೃದಯ ಮುಟ್ಟಿದ್ದೇನೆ. ಇನ್ನೂ 10 ದಿನಗಳ ಕಾಲ ನಿರಂತರವಾಗಿ ಚುನಾವಣಾ ಪ್ರಚಾರದಲ್ಲಿರುತ್ತೇನೆ. ಉತ್ತರ ಕರ್ನಾಟಕ ಭಾಗದಲ್ಲೂ ಪಕ್ಷದ ಅಭ್ಯರ್ಥಿಗಳ ಪರ ಜನ ಪ್ರೀತಿ ತೋರಿದ್ದಾರೆ. ಹಾಗಾಗಿ ಜೆಡಿಎಸ್ ಅಧಿಕಾರಕ್ಕೆ ಬರಲಿದೆ ಎಂದು ಕುಮಾರಸ್ವಾಮಿ ನುಡಿದರು.

ಕಾಂಗ್ರೆಸ್ ಅಭ್ಯರ್ಥಿಗೆ ಸೋಲಿನ ಭಯ: ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯು ಸೋಲಿನ ಭಯದಿಂದ ಕುಮಾರಸ್ವಾಮಿ ಅವರು ನನ್ನನ್ನು ಬೆಂಬಲಿಸಿದ್ದಾರೆಂದು ಹೇಳಿ ನನ್ನ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದ ಹೆಚ್‌ಡಿಕೆ, ಅವರು ಈ ರೀತಿ ಮಾತನಾ ಡುವುದನ್ನು ನಿಲ್ಲಿಸಬೇಕು. ನಾನ್ಯಾಕೆ ಸಿದ್ದೇ ಗೌಡರಿಗೆ ಬೆಂಬಲ ನೀಡಲಿ? ಒಕ್ಕಲಿಗ ಸಮುದಾಯದವರು ಸಿದ್ದೇಗೌಡರ ಮಾತಿಗೆ ಕಿವಿಗೊಡಬಾರದು. ಸುಳ್ಳು ಹೇಳಿಕೊಂಡು ಓಡಾಡುತ್ತಿರುವವರನ್ನು ತಾಯಿ ಚಾಮುಂಡೇಶ್ವರಿದೇವಿ ನೋಡಿ ಕೊಳ್ಳುತ್ತಾಳೆ ಎಂದರು.

ಜಿಟಿಡಿ 50 ಸಾವಿರ ಅಂತರದಲ್ಲಿ ಗೆಲುವು: ಕಳೆದ ಬಾರಿ 37 ಸಾವಿರ ಮತಗಳ ಅಂತರದಿಂದ ಗೆದ್ದಿದ್ದ ಜಿ.ಟಿ.ದೇವೇಗೌಡರು, ಈ ಚುನಾವಣೆಯಲ್ಲಿ 50 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಯ ಗಳಿಸುತ್ತಾರೆ ಎಂದ ಕುಮಾರಸ್ವಾಮಿ, ಕ್ಷೇತ್ರದ ಜನ ಅಲ್ಲಿನ ಅಭಿವೃದ್ಧಿ ಕಾರ್ಯದಿಂದಾಗಿ ಜಿ.ಟಿ. ದೇವೇಗೌಡರನ್ನು ಬೆಂಬಲಿಸಿ, ಕಳುಹಿಸಲಿದ್ದಾರೆ ಎಂದರು. ಲಿಂಗಾಯತ ಸಿಎಂ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಯಾವುದೇ ಒಂದು ಸಮುದಾಯದ ಪ್ರತಿನಿಧಿಯಲ್ಲ. ನಾಡಿನ ಪ್ರತಿನಿಧಿ. ಸಿಎಂ ಹುದ್ದೆಯನ್ನು ಜಾತಿಗೆ ಸೀಮಿತ ಮಾಡಬೇಡಿ. ಸಂದರ್ಭಕ್ಕೆ ಅನುಗುಣವಾಗಿ ರಾಜಕೀಯ ಪಕ್ಷಗಳು ನಾಯಕ ರನ್ನು ಆಯ್ಕೆ ಮಾಡುತ್ತವೆ. ಆದ್ದರಿಂದ ಮುಖ್ಯಮಂತ್ರಿ ನಾಡಿನ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎಂದ ಕುಮಾರಸ್ವಾಮಿ, ಆ ಸಮುದಾಯದ ಬಗ್ಗೆ ಸಿದ್ದರಾಮಯ್ಯ ಹೇಳಿಕೆಯೂ ಸರಿಯಲ್ಲ. ಅವರೊಬ್ಬ ಅನುಭವಿಯಾಗಿ ಆ ಮಾತು ಹೇಳಬಾರದು ಎಂದರು.

ಬಿಜೆಪಿಗೆ ಮತ್ತೆ ಸ್ಪಷ್ಟ ಬಹುಮತ ನೀಡಿ

ಉತ್ತರ ಪ್ರದೇಶ ಡಿಸಿಎಂ ಬ್ರಜೇಶ್ ಪಾಠಕ್ ರಾಜ್ಯದ ಜನತೆಯಲ್ಲಿ ಕೋರಿಕೆ; ಡಬಲ್ ಇಂಜಿನ್ ಸರ್ಕಾರದಿಂದ ಕರ್ನಾಟಕದಲ್ಲಿ ಪ್ರಗತಿ



ಮೈಸೂರಿನ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಉತ್ತರ ಪ್ರದೇಶದ ಡಿಸಿಎಂ ಬ್ರಜೇಶ್ ಪಾಠಕ್ (ಎಡದಿಂದ 3ನೇಯವರು) ಮಾತನಾಡಿದರು.

ಮೈಸೂರು,ಏ.25 (ಪಿಎಂ)– ಪ್ರಧಾನಿ ನರೇಂದ್ರ ಮೋದಿ ಮತ್ತು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ 'ಡಬಲ್ ಇಂಜಿನ್ ಸರ್ಕಾರ' ಕರ್ನಾಟಕ ರಾಜ್ಯವನ್ನು ಪ್ರಗತಿಪಥದತ್ತ ಕೊಂಡೊಯ್ಯುತ್ತಿದ್ದು, ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ನೀಡುವಂತೆ ಉತ್ತರ ಪ್ರದೇಶದ ಉಪಮುಖ್ಯಮಂತ್ರಿ ಬ್ರಜೇಶ್ ಪಾಠಕ್, ರಾಜ್ಯದ ಜನತೆಯಲ್ಲಿ ಕೋರಿದರು.

ಮೈಸೂರಿನ ಆರ್‌ಟಿಓ ಕಚೇರಿ ಎದುರು ವಾಣಿವಿಲಾಸ ರಸ್ತೆಯಲ್ಲಿರುವ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 2014ರಿಂದ ವಿವಿಧ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಕರ್ನಾಟಕ ರಾಜ್ಯ ಬಿಜೆಪಿ ಸರ್ಕಾರವೂ ಕೈಜೋಡಿಸಿದೆ. ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಡಬಲ್ ಇಂಜಿನ್ ಸರ್ಕಾರದಿಂದ ಆಗಿದೆ ಎಂದರು.

ಕರ್ನಾಟಕದ ವಿವಿಧ ಯೋಜನೆಗಳಿಗೆ ಪ್ರಧಾನಿ ಮೋದಿಯವರು ಹೆಚ್ಚು ಅನುದಾನ ಕಲ್ಪಿಸಿದ್ದಾರೆ. ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ನಿರ್ಮಾಣ ಮಾಡಿ, ಅದರ ಉದ್ಘಾಟನೆ ನೆರವೇರಿಸಿದ ಮೋದಿಯವರು ಜನತೆಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ. ಇದರಿಂದ ಮೈಸೂರಿಗೆ ಮತ್ತಷ್ಟು ಕೈಗಾರಿಕೆಗಳು ಬರಲಿದ್ದು, ಸಾವಿರಾರು ಮಂದಿಗೆ ಉದ್ಯೋಗ ಸಿಗಲಿದೆ. ಪ್ರಧಾನಿ ನರೇಂದ್ರಮೋದಿಯವರು ಮೈಸೂರಿಗೆ ಸೆಮಿಕಂಡಕ್ಟರ್ ಹಬ್ ಘೋಷಿಸಿದ್ದು, ಈ ಹಬ್ ನಿರ್ಮಾಣದಿಂದ ಸಾವಿರಾರು ಮಂದಿಗೆ ಉದ್ಯೋಗ ಸಿಗಲಿದೆ. ಅಲ್ಲದೇ ಬೆಂಗಳೂರು ಬಿಟ್ಟರೆ ಮೈಸೂರು, ಬೃಹತ್ ನಗರವಾಗಿ ಬೆಳೆದು ವಿಶ್ವದ ಭೂಪಟದಲ್ಲಿ ಗುರುತಿಸಿಕೊಳ್ಳಲಿದೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ವಿಸ್ತರಣೆ ಹಾಗೂ ಅಭಿವೃದ್ಧಿಗೂ ಅನುದಾನ ನೀಡಿದೆ. ಮೈಸೂರಿನಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೂ ಪ್ರಕ್ರಿಯೆ ನಡೆಸಲಾಗುತ್ತಿದೆ. ಐದು ಟ್ರಿಲಿಯನ್ ಡಾಲರ್‌ಗೆ ಭಾರತದ ಆರ್ಥಿಕತೆ ಹೆಚ್ಚಿಸಲು ಮೋದಿಯವರು ಮುಂದಾಗಿದ್ದು, ಕರ್ನಾಟಕದಲ್ಲೂ ಒಂದು ಟ್ರಿಲಿಯನ್ ಆರ್ಥಿಕತೆ ಸಾಧಿಸುವ ಗುರಿ ಹೊಂದಲಾಗಿದೆ ಎಂದರು.

ಪ್ರತಿಯೊಂದು ಮನೆಗೂ ಜಲಜೀವನ್ ಮಿಷನ್, ಅಮೃತ್ ಯೋಜನೆಯಡಿ ಶುದ್ಧ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ಪ್ರತಿಯೊಂದು ಗ್ರಾಮಕ್ಕೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಡಬಲ್ ಎಂಜಿನ್ ಸರ್ಕಾರ ಮುಂದುವರೆದರೆ ಮಾತ್ರ ರಾಜ್ಯ ಹಾಗೂ ದೇಶದ ಅಭಿವೃದ್ಧಿ ಸಾಧ್ಯ. ಹಾಗಾಗಿ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಮತದಾರರು 150ಕ್ಕೂ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಿಸಿಕೊಡಬೇಕು. ಮೈಸೂರಿನಲ್ಲಿ ಕೆಆರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ಚಾಮರಾಜ ಕ್ಷೇತ್ರದ ಎಲ್.ನಾಗೇಂದ್ರ, ಎನ್‌ಆರ್ ಕ್ಷೇತ್ರದ ಸಂದೇಶ್ ಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಕವೀಶ್‌ಗೌಡ ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಒಂದೇ ನಾಣ್ಯದ ಎರಡು ಮುಖ: ಕಳೆದ 60 ವರ್ಷಗಳಿಂದ ಕಾಂಗ್ರೆಸ್, ರಾಜ್ಯ ಮತ್ತು ದೇಶದಲ್ಲಿ ಆಡಳಿತ ನಡೆಸಿದರೂ ಬಡವರು, ರೈತರ ಏಳಿಗೆ ಸಾಧ್ಯವಾಗಿಲ್ಲ. ಸರ್ಕಾರದ ಯೋಜನೆಗಳ ಫಲ ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿರಲಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಪ್ರತಿಯೊಂದು ಯೋಜನೆಗಳ ಫಲ ನೇರವಾಗಿ ಫಲಾನುಭವಿಗಳಿಗೆ ತಲುಪುವಂತೆ ಮಾಡಿದೆ ಎಂದರು.

ಕಾಂಗ್ರೆಸ್‌ನವರು ಸುಳ್ಳು ಭರವಸೆಗಳನ್ನು ಜನರಿಗೆ ನೀಡಿ, ಮರಳು ಮಾಡಿ ಅಧಿಕಾರಕ್ಕೆ ಬರುವ ಪ್ರಯತ್ನ ನಡೆಸುತ್ತಿದ್ದಾರೆ. ಕರ್ನಾಟಕದ ಜನತೆ ಇದಕ್ಕೆ ಅವಕಾಶ ನೀಡಬಾರದು. ಜೆಡಿಎಸ್–ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಾಗಾಗಿ ಜೆಡಿಎಸ್‌ಗೆ ಮತ ನೀಡಿದರೆ, ಕಾಂಗ್ರೆಸ್‌ಗೆ ನೀಡಿದಂತೆ. ಜೆಡಿಎಸ್ ಅನ್ನು ಜನರು ತಿರಸ್ಕರಿಸಬೇಕು. ಉತ್ತರ ಪ್ರದೇಶದ ಚುನಾವಣೆಯಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಪ್ರಚಾರ ನಡೆಸಿದರೂ, ಅಲ್ಲಿ ಅವರ ಯಾವುದೇ ಜಾದೂ ನಡೆಯಲಿಲ್ಲ. ಅದೇ ರೀತಿ ಕರ್ನಾಟಕ ರಾಜ್ಯದ ಚುನಾವಣೆಯಲ್ಲಿ ಅವರು ಪ್ರಚಾರ ನಡೆಸಿದರೂ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದು ಹೇಳಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಬಿಜೆಪಿ ನಗರ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್, ಜಿಲ್ಲಾ ಸಹ ವಕ್ತಾರ ಡಾ. ಕೆ.ವಸಂತ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು: ಸಂಸದ ಪ್ರತಾಪ್ ಸಿಂಹ ಭರವಸೆ

ಮೈಸೂರು,ಏ.25(ಪಿಎಂ)– ಜಲಜೀವನ್ ಮಿಷನ್ ಮತ್ತು ಅಮೃತ 2 ಯೋಜನೆಯಡಿ ಮುಂದಿನ 18ರಿಂದ 20 ತಿಂಗಳ ಒಳಗೆ ಮೈಸೂರು ಜಿಲ್ಲೆಯ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆ ಬಿಜೆಪಿ ಮುಂದಿದೆ. ಅಭಿವೃದ್ಧಿಗಾಗಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಜನತೆ ಬೆಂಬಲಿಸಬೇಕೆಂದು ಸಂಸದ ಪ್ರತಾಪ್ ಸಿಂಹ ಕೋರಿದರು.

ನಮ್ಮ ಡಬಲ್ ಇಂಜಿನ್ ಸರ್ಕಾರ ವಾಪಸ್ ಬಂದ ಕೂಡಲೇ ಅಭಿವೃದ್ಧಿ ಕಾರ್ಯ ಮುಂದುವರೆಸಲಿದೆ. ಮೈಸೂರಿನ ರಿಂಗ್ ರಸ್ತೆಯ ಜೊತೆಗೆ ಪೆರಿಫೆರಲ್ ರಿಂಗ್ ರಸ್ತೆ ಕೂಡ ಮಾಡುತ್ತೇವೆ ಅಲ್ಲದೆ, ಗ್ರೇಟರ್ ಮೈಸೂರು ನಿರ್ಮಾಣ ಬಿಜೆಪಿ ಕನಸು. ಇದನ್ನು ಈಡೇರಿಸುತ್ತೇವೆ. ಮೈಸೂರು ಜಿಲ್ಲೆಯ ಪ್ರತಿ ಮನೆಗೂ ಕಬಿನಿ ಅಥವಾ ಕಾವೇರಿಯಿಂದ ಶುದ್ಧ ಕುಡಿಯುವ ನೀರು ಪೂರೈಸಲಾಗುವುದು ಎಂದು ತಿಳಿಸಿದರು.

ಕೆಆರ್ ಕ್ಷೇತ್ರದಲ್ಲಿ ಟಿ.ಎಸ್.ಶ್ರೀವತ್ಸ ಬಿಜೆಪಿಯ ಹೊಸ ಅಭ್ಯರ್ಥಿಯಾದರೂ ಕಾರ್ಯಕರ್ತರಿಗೆ ಹಳಬರು.



ಅವರನ್ನು ಗೆಲ್ಲಿಸಿದರೆ ಅವರು ಅಭಿವೃದ್ಧಿ ಕಾರ್ಯಗಳ ಮೂಲಕ ಪ್ರತಿಯೊಬ್ಬರಿಗೂ ಚಿರಪರಿಚಿತರಾಗಲಿದ್ದಾರೆ. ಅವರು ನಿಷ್ಠಾವಂತ ಕಾರ್ಯಕರ್ತರು, ಕ್ರಿಯಾಶೀಲ ಸಂಘಟಕರಾಗಿದ್ದು, ಕ್ಷೇತ್ರದ ಜನತೆ ಅವರನ್ನು ಬೆಂಬಲಿಸಬೇಕು. ಕಾಂಗ್ರೆಸ್ ಬಂದರೆ ಮತ್ತೆ ಅದೇ ಜಾತಿ ಗಲಾಟೆ, ಅದೇ ವ್ಯವಹಾರಿಕ ರಾಜಕಾರಣ ಬಿಟ್ಟರೆ ಅಭಿವೃದ್ಧಿ ನಿರೀಕ್ಷಿಸಲಾಗದು ಎಂದು ದೂರಿದರು.

ಎಲ್.ನಾಗೇಂದ್ರರನ್ನು ಗೆಲ್ಲಿಸಿದರೆ ಸಚಿವರಾಗುವ ವಿಶ್ವಾಸ: ಚಾಮರಾಜ ಕ್ಷೇತ್ರದಲ್ಲಿ ಮಹಾರಾಜರು ಕಟ್ಟಿದ ಕೆಆರ್ ಆಸ್ಪತ್ರೆಗೆ ಎಲ್.ನಾಗೇಂದ್ರ ಶಾಸಕರಾಗಿರುವ ಅವಧಿಯಲ್ಲಿ 89.5 ಕೋಟಿ ರೂ. ವೆಚ್ಚದ ನವೀಕರಣ ಭಾಗ್ಯ ಸಿಕ್ಕಿದೆ. ಅಲ್ಲದೇ, ಮೈಸೂರಿನಲ್ಲಿ 130 ಕೋಟಿ ರೂ. ವೆಚ್ಚದಲ್ಲಿ ಕಿದ್ವಾಯಿ ಆಸ್ಪತ್ರೆ ನಿರ್ಮಾಣವಾಗಲಿದ್ದು, ಈಗಾಗಲೇ ಇದರಲ್ಲಿ 50 ಕೋಟಿ ಅನುದಾನ ಬಿಡುಗಡೆಯಾಗಿದೆ. ಮೈಸೂರಿನಲ್ಲಿ ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ಇರಲಿಲ್ಲ. ನಾಗೇಂದ್ರ ಅವರು ಆ ಕೊರತೆ ನಿವಾರಿಸುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ಮುಂದಿನ ಐದು ವರ್ಷ ಸೇವೆ ಸಲ್ಲಿಸಲು ಎಲ್.ನಾಗೇಂದ್ರ ಅವರಿಗೆ ಕ್ಷೇತ್ರದ ಜನತೆ ಅವಕಾಶ ಮಾಡಿಕೊಟ್ಟರೆ ಕ್ಷೇತ್ರದ ಸಮಗ್ರ ಅಭಿವೃದ್ಧಿಯಾಗಲಿದೆ. ಈ ಭಾಗದಲ್ಲಿ ಅವರು ಒಂದು ಸಮುದಾಯದ ನಾಯಕರೂ ಆಗಿರುವ ಹಿನ್ನೆಲೆಯಲ್ಲಿ ಈ ಬಾರಿ ಗೆಲ್ಲಿಸಿಕೊಟ್ಟರೆ ಅವರು ಸಚಿವರಾಗುವ ಖಚಿತ ವಿಶ್ವಾಸವಿದೆ ಎಂದು ಪ್ರತಾಪ್ ಸಿಂಹ ಹೇಳಿದರು.

ಎನ್‌ಆರ್ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಸಂದೇಶ ಸ್ವಾಮಿಯವರು 3 ಬಾರಿ ಸ್ಪರ್ಧೆ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಸತತವಾಗಿ ಒಂದೇ ಕುಟುಂಬದವರ ಆಳ್ವಿಕೆ ನಡೆಯುತ್ತಿದೆ. ಸಂದೇಶ್ ಸ್ವಾಮಿಯವರನ್ನು ಗೆಲ್ಲಿಸಿ ಹೊಸತನಕ್ಕೆ ಅವಕಾಶ ಮಾಡಿಕೊಟ್ಟರೆ, ದೀನ ದಲಿತರೇ ತುಂಬಿರುವ ಎನ್‌ಆರ್ ಕ್ಷೇತ್ರದಲ್ಲಿ ಪ್ರತಿಯೊಬ್ಬರಿಗೂ ಮನೆ ಮತ್ತು ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗುವುದು ಎಂದು ಪಕ್ಷದಿಂದ ಭರವಸೆ ನೀಡುತ್ತೇನೆ ಎಂದರು.

ಚಾಮುಂಡೇಶ್ವರಿಯಲ್ಲಿ ಕವೀಶ್‌ಗೌಡ ಪಕ್ಷದ ಅಭ್ಯರ್ಥಿಯಾಗಿದ್ದು, ಉದ್ದೇಶಿತ ಗ್ರೇಟರ್ ಮೈಸೂರು ಯೋಜನೆಯ ಅತಿ ಹೆಚ್ಚು ಲಾಭ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸಿಗಲಿದೆ. ಕ್ಷೇತ್ರದಲ್ಲಿರುವ ಹೂಟಗಳ್ಳಿ ನಗರಸಭೆ ಮತ್ತು 4 ಪಪಂ ಸೇರಿಸಿ ಬೃಹತ್ ಮೈಸೂರು ನಿರ್ಮಾಣ ಮಾಡುವ ಅಂತಿಮ ಗುರಿ ಹೊಂದಲಾಗಿದೆ. ಕವೀಶ್‌ಗೌಡರನ್ನು ಗೆಲ್ಲಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಕಾಶ ನೀಡಬೇಕೆಂದು ಕೋರಿದರು.

ಇಂದು ಶೇ.50ರಷ್ಟು ರಿಯಾಯಿತಿಯಲ್ಲಿ ಸಿನಿಮಾ ಪ್ರದರ್ಶನ



ಮೈಸೂರು,ಏ.25(ಪಿಎಂ)– ನಟ ರಮೇಶ್ ಅರವಿಂದ್ ಅಭಿನಯದ ಶಿವಾಜಿ ಸೂರತ್ಕಲ್–2 ಚಿತ್ರವನ್ನು ಚಿತ್ರತಂಡದೊಂದಿಗೆ ಪ್ರೇಕ್ಷಕರು ವೀಕ್ಷಿಸುವ ಅವಕಾಶವನ್ನು ಏ.26ರಂದು ಮಧ್ಯಾಹ್ನ 3ಕ್ಕೆ ಮೈಸೂರಿನ ಜಯಲಕ್ಷ್ಮೀಪುರಂನ ಡಿಆರ್‌ಸಿ ಚಿತ್ರಮಂದಿರದಲ್ಲಿ ಕಲ್ಪಿಸಲಾಗಿದೆ ಎಂದು ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ವಿವಿಧ ಕನ್ನಡಪರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಪ್ರೇಕ್ಷಕರನ್ನು ಕನ್ನಡ ಚಿತ್ರಗಳತ್ತ ಸೆಳೆಯಲು ಈ ವ್ಯವಸ್ಥೆ ಮಾಡಲಾಗಿದೆ ಎಂದರು.

ಚಿತ್ರ ತಂಡದೊಂದಿಗೆ ಸಿನಿಮಾ ವೀಕ್ಷಿಸಲು ಶೇ.50ರಷ್ಟು ರಿಯಾಯಿತಿ ದರದಲ್ಲಿ ಟಿಕೆಟ್ ದೊರೆಯಲಿದೆ. ಜಯನಗರದಲ್ಲಿರುವ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ಗೆ ಭೇಟಿ ನೀಡಿ ಟಿಕೆಟ್ ಖರೀದಿಸಬಹುದು. ಚಿತ್ರದ ನಾಯಕ ನಟ ರಮೇಶ್ ಅರವಿಂದ್ ಹಾಗೂ ಚಿತ್ರತಂಡದ ಇನ್ನಿತರರು ಹಾಜರಿರುವರು. ಹೀಗಾಗಿ ಇವರನ್ನು ನೋಡುವ ಅವಕಾಶ ಚಿತ್ರಪ್ರೇಮಿಗಳಿಗೆ ದೊರಕಲಿದೆ ಎಂದು ಹೇಳಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎನ್.ಎಸ್.ಪುಟ್ಟಸ್ವಾಮಿ, ಟ್ರಸ್ಟಿ ಶ್ರೀನಿವಾಸ್, ಟ್ರಸ್ಟ್‌ನ ಮಹಿಳಾ ವಿಭಾಗದ ಅಧ್ಯಕ್ಷೆ ಶೋಭಾ ಗೋಷ್ಠಿಯಲ್ಲಿದ್ದರು.

ಮದ್ಯದ ಆಮಿಷಕ್ಕೆ ಒಳಗಾಗದೇ ಮತದಾನ ಮಾಡಿ; ಜನಜಾಗೃತಿ ವೇದಿಕೆ ಸಂದೇಶ

ಮೈಸೂರು,ಏ.25 (ಪಿಎಂ)– ಶ್ರೀ ಕ್ಷೇತ್ರ ಧರ್ಮಸ್ಥಳದ ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ವತಿಯಿಂದ ಮದ್ಯಪಾನದ ಆಮಿಷಕ್ಕೆ ಒಳಗಾಗದೇ



ಮತ ಚಲಾಯಿಸುವಂತೆ ಅರಿವು ಮೂಡಿಸಲಾಗುವುದು ಎಂದು ವೇದಿಕೆ ಅಧ್ಯಕ್ಷ ಅಂದನಹಳ್ಳಿ ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮದ್ಯಪಾನದ ಆಮಿಷಕ್ಕೆ ಒಳಗಾಗದೇ ಮತದಾನ ಮಾಡಬೇಕೆಂಬ ಸಂದೇಶವಿರುವ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅಧಿಕಾರ ವಿಕೇಂದ್ರೀಕರಣದ ಮಾದರಿ ವ್ಯವಸ್ಥೆ ಆಗಬೇಕಿದ್ದ ಚುನಾವಣೆಗಳು ಮದ್ಯ ಹಂಚುವ ಸಂದರ್ಭಗಳಾಗಿವೆ. ಇದರಿಂದ ಸಮಾಜ ತಪ್ಪು ದಾರಿಯಲ್ಲಿ ಸಾಗುವಂತಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು ಮದ್ಯ ಹಂಚುವುದಿಲ್ಲ, ಆಮಿಷ ಒಡ್ಡುವುದಿಲ್ಲ ಎನ್ನುವ ಸಂಕಲ್ಪ ಮಾಡಬೇಕು ಎಂದು ಒತ್ತಾಯಿಸಿದರು.

ನಾಗರಿಕರು ಮದ್ಯಪಾನದ ಮತ್ತು ಇತರ ಯಾವುದೇ ಆಮಿಷಕ್ಕೆ ಬಲಿಯಾಗಬಾರದು. ಮತದಾರರಿಗೆ ಮದ್ಯದ ಆಮಿಷವೊಡ್ಡಿ ಮತ ಪಡೆಯುವ ಪ್ರಯತ್ನ ನಡೆಯುತ್ತಿರುವುದು ಕಂಡು ಬಂದರೆ ಚುನಾವಣಾ ಆಯೋಗ ನಿಯೋಜಿಸಿರುವ ಅಧಿಕಾರಿಗಳಿಗೆ ಮಾಹಿತಿ ನೀಡಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೈಸೂರು ತಾಲೂಕು ಯೋಜನಾಧಿಕಾರಿ ನಂದಿನಿ ಶೇಖರ್, ವೇದಿಕೆಯ ಶಕುಂತಲಾ, ಕೆ.ಎಂ.ನಾಗರತ್ನ, ಸಂಪತ್‌ಕುಮಾರ್, ಆರ್.ರವಿ, ಎಂ.ಲಕ್ಷ್ಮಣ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜೆಡಿಎಸ್ ಬೆಂಬಲಿಸಲು ಬ್ರಾಹ್ಮಣರ ರಕ್ಷಣಾ ವೇದಿಕೆ ತೀರ್ಮಾನ




ಮೈಸೂರು,ಏ.25(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಬೆಂಬಲಿಸಲು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಗರಮಂಡಲ ಬ್ರಾಹ್ಮಣರ ರಕ್ಷಣಾ ವೇದಿಕೆ ತೀರ್ಮಾನಿಸಿದ್ದು, ಕ್ಷೇತ್ರದ ಸಮುದಾಯ ಬಾಂಧವರು ಜಿ.ಟಿ.ದೇವೇಗೌಡರನ್ನು ಬೆಂಬಲಿಸಬೇಕೆಂದು ವೇದಿಕೆ ಅಧ್ಯಕ್ಷ ಕಡಕೊಳ ಹರೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಕಳೆದ 15 ವರ್ಷಗಳಿಂದ ಬಿಜೆಪಿಯಲ್ಲಿದ್ದು, ಇದೀಗ ಹೊರಬಂದಿದ್ದೇನೆ. ಕ್ಷೇತ್ರದಲ್ಲಿ ಈವರೆಗೂ ಬಿಜೆಪಿಯಿಂದ ಸೂಕ್ತ ಅಭ್ಯರ್ಥಿ ಕಣಕ್ಕಿಳಿಸಿಲ್ಲ. ಹಾಗಾಗಿ ನಮ್ಮ ಬ್ರಾಹ್ಮಣ ಸಮುದಾಯಕ್ಕೆ ಯಾವುದೇ ಅನುಕೂಲ ಆಗಿಲ್ಲ. ಹಾಲಿ ಶಾಸಕರೂ ಆದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಅವರು ನಮ್ಮ ಸಮುದಾಯಕ್ಕೆ ಸ್ಪಂದಿಸುವ ಹಿನ್ನೆಲೆಯಲ್ಲಿ ಅವರನ್ನು ಬೆಂಬಲಿಸಲು ನಿರ್ಧರಿಸಲಾಗಿದೆ. ಕ್ಷೇತ್ರದಲ್ಲಿ ಸಮುದಾಯದ ಸುಮಾರು 20 ಸಾವಿರ ಮತದಾರರಿದ್ದಾರೆ. ಇವರೆಲ್ಲರೂ ಜಿ.ಟಿ. ದೇವೇಗೌಡರಿಗೆ ಮತ ಹಾಕುವಂತೆ ಮನವಿ ಮಾಡುವುದಾಗಿ ಹೇಳಿದರು. ವೇದಿಕೆಯ ಮುರುಳಿಕೃಷ್ಣ, ಸುರೇಶ್, ಹರೀಶ್, ಮೀನಾಕ್ಷಿ ಗೋಷ್ಠಿಯಲ್ಲಿದ್ದರು.

ಮೊಬೈಲ್ ಸ್ಫೋಟಗೊಂಡು ಎಂಟು ವರ್ಷದ ಬಾಲಕಿ ಸಾವು

ತ್ರಿಶೂರ್, ಏ.25– ಎಂಟು ವರ್ಷದ ಬಾಲಕಿಯೊಬ್ಬಳು ಬಳಸುತ್ತಿದ್ದ ಮೊಬೈಲ್ ಫೋನ್ ಸ್ಫೋಟಗೊಂಡಿದ್ದರಿಂದ ಆಕೆ ಮೃತಪಟ್ಟಿದ್ದಾಳೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ತಿರುವಿಲ್ವಾಮಲ ನಿವಾಸಿ ಆದಿತ್ಯಶ್ರೀ ಎಂಬ ಬಾಲಕಿ ಬಳಸುತ್ತಿದ್ದ ಮೊಬೈಲ್ ಫೋನ್ ಸೋಮವಾರ ರಾತ್ರಿ 10.30 ರ ಸುಮಾರಿಗೆ ಏಕಾಏಕಿ ಸ್ಫೋಟಗೊಂಡಿದೆ ಎಂದು ಪೊಲೀಸರು ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ. ಆದಿತ್ಯಶ್ರೀ ಸಮೀಪದ ಶಾಲೆಯೊಂದರಲ್ಲಿ ಮೂರನೇ ತರಗತಿ ಓದುತ್ತಿದ್ದಳು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ತಿಂಗಳುಗಳಿಂದ ಕೆಟ್ಟು ನಿಂತಿದೆ 'ಚಿಕ್ಕ ಗಡಿಯಾರ'




ಮೈಸೂರು, ಏ.25(ಎಸ್‌ಬಿಡಿ)– ಮೈಸೂರಿನ ದೇವರಾಜ ಮಾರುಕಟ್ಟೆ ಮುಂಭಾಗದ ಐತಿಹಾಸಿಕ ಹಾಗೂ ಪಾರಂಪರಿಕ 'ಚಿಕ್ಕಗಡಿಯಾರ' ಕೆಟ್ಟುನಿಂತು ತಿಂಗಳುಗಳೇ ಕಳೆದಿದೆ. ಇಲ್ಲಿನ ಸಣ್ಣಪುಟ್ಟ ವ್ಯಾಪಾರಿಗಳು, ಗ್ರಾಹಕರು ಆಗಾಗ್ಗೆ 'ಚಿಕ್ಕಗಡಿಯಾರ'ದತ್ತ ದೃಷ್ಟಿ ಹಾಯಿಸಿ ಸಮಯ ತಿಳಿಯುವುದು ರೂಢಿಯಾಗಿದೆ. ಮುಂಜಾನೆ ಇದೇ ಸ್ಥಳದಲ್ಲಿ ದಿನಪತ್ರಿಕೆಗಳ ವಿಂಗಡಿಸುವ ವಿತರಕರಿಗೆ ಈ ಗಡಿಯಾರದೊಂದಿಗೆ ಅವಿನಾಭಾವ ನಂಟು. ಮನೆ ಮನೆಗೆ ಪತ್ರಿಕೆ ತಲುಪಿಸುವ ಧಾವಂತದಲ್ಲಿ ಅದೆಷ್ಟೋ ಬಾರಿ ಗಡಿಯಾರದತ್ತ ನೋಡುತ್ತಾರೆ. ಇದೀಗ ಗಡಿಯಾರ ಕೆಟ್ಟು ನಿಂತಿರುವುದರಿಂದ ಇವರಿಗೆಲ್ಲಾ ಕಸಿವಿಸಿ ಉಂಟಾಗಿದೆ.

ಎಲ್ಲರ ಬಳಿ ಮೊಬೈಲ್ ಇರುವುದರಿಂದ ಕೈಯಲ್ಲಿ ವಾಚ್ ಕಟ್ಟುವವರ ಸಂಖ್ಯೆ ವಿರಳ. ಹಾಗಂತ ಪದೇ ಪದೆ ಜೇಬಿಂದ ಮೊಬೈಲ್ ತೆಗೆದು ಸಮಯ ನೋಡಲಾಗದು. ಅಲ್ಲದೆ ವಾಚ್, ಮೊಬೈಲ್

ಸುತ್ತಮುತ್ತ ಇರುವವರಿಗೆ ಸಮಯ ಪಾಲನೆ ಚಿಂತೆ

ಇದ್ದರೂ ಗಡಿಯಾರ ನೋಡುವುದು ಅಭ್ಯಾಸವಾಗಿದೆ. ಜೊತೆಗೆ ಇದೊಂದು ಶತಮಾನ ದಾಟಿರುವ ಐತಿಹಾಸಿಕ ಸ್ಮಾರಕ. ಇದನ್ನು ಸಮರ್ಪಕ ರೀತಿಯಲ್ಲಿ ನಿರ್ವಹಣೆ ಮಾಡಿ, ಸಂರಕ್ಷಿಸುವುದು ಬಹಳ ಮುಖ್ಯ. ಆದರೆ ಗಡಿಯಾರ ಕೆಟ್ಟುನಿಂತು ತಿಂಗಳುಗಳೇ ಕಳೆದಿದ್ದರೂ ನಗರಪಾಲಿಕೆಯವರು ಅಥವಾ ಸಂಬಂಧಪಟ್ಟವರು ಸರಿಪಡಿಸುವ ಪ್ರಯತ್ನವನ್ನೂ ಮಾಡದಿರುವುದು ವಿಷಾದನೀಯ ಎಂದು ಇಲ್ಲಿನ ಕೆಲ ವ್ಯಾಪಾರಿಗಳು ಬೇಸರ ವ್ಯಕ್ತಪಡಿಸಿದರು.



ಪಾರಂಪರಿಕ ದೇವರಾಜ ಮಾರುಕಟ್ಟೆಯ ಒಂದು ಭಾಗ ವಿರೂಪಗೊಂಡಿದೆ, ಲ್ಯಾನ್ಸ್‌ಡೌನ್ ಕಟ್ಟಡ ಹಾಳುಕೊಂಪೆಯಾಗಿದೆ. ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಕಟ್ಟಡದ ಮುಂಭಾಗ ಕುಸಿದು ವರ್ಷಗಳೇ ಕಳೆದಿವೆ. ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆಯೂ ದುಃಸ್ಥಿತಿಯಲ್ಲಿದೆ. ನವೀಕರಣ ಅಥವಾ ಪುನರ್ ನಿರ್ಮಾಣದ ಹಗ್ಗಜಗ್ಗಾಟದಲ್ಲಿ ಮೈಸೂರಿನ ಪಾರಂಪರಿಕ ಕುರುಹುಗಳು ಹಾಳಾಗುತ್ತಿವೆ. ಈ ಪಟ್ಟಿಗೆ ಚಿಕ್ಕಗಡಿಯಾರ ಸೇರದಿದ್ದರೆ ಸಾಕು. ಕೆಟ್ಟು ನಿಂತಿರುವ ಗಡಿಯಾರ ಸರಿಪಡಿಸಲು ತೋರುತ್ತಿರುವ ನಿರ್ಲಕ್ಷ್ಯ ಮುಂದುವರೆದರೆ ಮುಂದೊಂದು ದಿನ ಇಡೀ ಸ್ಮಾರಕ ಹಾಳಾಗಬಹುದೆಂಬ ಆತಂಕ ಜನರಲ್ಲಿದೆ. ಹಾಗಾಗಿ ಕೆಟ್ಟಿರುವ ಗಡಿಯಾರವನ್ನು ಕೂಡಲೇ ಸರಿಪಡಿಸಬೇಕೆಂದು ಆಗ್ರಹಿಸಿದ್ದಾರೆ.


ಮಹಾರಾಜ ಚಾಮರಾಜ ಒಡೆಯರ್ ಆಹ್ವಾನದ ಮೇರೆಗೆ ವೈಸರಾಯ್ ಲಾರ್ಡ್ ಡಫರಿನ್ ಮೈಸೂರಿಗೆ ಭೇಟಿ ನೀಡಿದ್ದರು. ಅವರ ಗೌರವಾರ್ಥವಾಗಿ 1886ರಲ್ಲಿ ಈ ಗಡಿಯಾರ ಗೋಪುರ ನಿರ್ಮಿಸಲಾಯಿತು. ಹಾಗಾಗಿ ಇದನ್ನು ಡಫರಿನ್ ಕ್ಲಾಕ್ ಟವರ್ ಎಂದು ಕರೆಯಲಾಗುತ್ತಿತ್ತು. ನಂತರದಲ್ಲಿ ರಂಗಾಚಾರ್ಲು ಪುರಭವನದ ಬಳಿ ಇರುವುದನ್ನು ದೊಡ್ಡ ಗಡಿಯಾರ, ದೇವರಾಜ ಮಾರುಕಟ್ಟೆ ಬಳಿ ಇರುವುದನ್ನು ಚಿಕ್ಕಗಡಿಯಾರ ಎಂದು ಜನಸಾಮಾನ್ಯರಾದಿಯಾಗಿ ಕರೆಯಲಾರಂಭಿಸಿದರು. ಗಡಿಯಾರ ಗೋಪುರದ ಸುತ್ತಲಿನ ಜಾಗದಲ್ಲಿ ವ್ಯಾಪಾರಿಗಳು ಹಾಗೂ ವಾಹನ ನಿಲುಗಡೆಗೆ ಸಾರ್ವಜನಿಕರು ಬಳಸಿಕೊಳ್ಳುತ್ತಿದ್ದರು. 2012ರಲ್ಲಿ ಗಡಿಯಾರ ಗೋಪುರದ ಸುತ್ತ ಟೈಲ್ಸ್, ಆಸನ ವ್ಯವಸ್ಥೆ, ವಿಶೇಷ ಅಲಂಕೃತ ವಿದ್ಯುತ್ ದೀಪಗಳಿಂದ ನವೀಕರಣಗೊಳಿಸಿದ್ದರಿಂದ ಸುಂದರ ತಾಣವಾಗಿ ರೂಪುಗೊಂಡಿತು. ಹೀಗೆಯೇ ಉತ್ತಮ ನಿರ್ವಹಣೆ ಕಾಯ್ದುಕೊಳ್ಳಬೇಕಿದೆ.

ಮೈಸೂರು ಮಿತ್ರ

ಬುಧವಾರ 26 ಏಪ್ರಿಲ್ 2023













ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಸಿಎಸ್‌ಕೆ	7	5	2	0	10
ಗುಜರಾತ್	7	5	2	0	10
ರಾಜಸ್ಥಾನ್	7	4	3	0	8
ಲಕ್ನೋ	7	4	3	0	8
ಆರ್‌ಸಿಬಿ	7	4	3	0	8
ಪಂಜಾಬ್	7	4	3	0	8
ಮುಂಬೈ	7	3	4	0	6
ಕೋಲ್ಕತ್ತಾ	7	2	5	0	4
ಎಸ್‌ಆರ್‌ಹೆಚ್	7	2	5	0	4
ಡೆಲ್ಲಿ	7	2	5	0	4

ಮುಂಬೈ ವಿರುದ್ಧ ಗುಜರಾತ್‌ಗೆ ಭರ್ಜರಿ ಜಯ



ಅಹಮದಾಬಾದ್, ಏ.25– ಶುಭ್‌ಮನ್ ಗಿಲ್ ಅವರ ಅರ್ಧ ಶತಕ ಹಾಗೂ ಅಭಿನವ್ ಮನೋಹರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಗುಜರಾತ್ ಟೈಟನ್ಸ್, ಮುಂಬೈ ಇಂಡಿಯನ್ಸ್ ವಿರುದ್ಧ 55 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ 10 ಅಂಕಗಳೊಂದಿಗೆ 2ನೇ ಸ್ಥಾನ ಗಳಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 207ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವೃದ್ಧಿಮಾನ್ ಸಾಹ ಕೇವಲ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಹಾರ್ದಿಕ್ ಪಾಂಡ್ಯ 13, ವಿಜಯ್ ಶಂಕರ್ 19ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು, ಮತ್ತೊಂದೆಡೆ ಅಬ್ಬರಿಸಿದ ಶುಭ್‌ಮನ್ ಗಿಲ್ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 34 ಎಸೆತಗಳಲ್ಲಿ 1 ಸಿಕ್ಸರ್, 7 ಬೌಂಡರಿ ಒಳಗೊಂಡ 56ರನ್ ಗಳಿಸಿ ಔಟಾದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಡೇವಿಡ್ ಮಿಲ್ಲರ್ ಹಾಗೂ ಕನ್ನಡಿಗ ಅಭಿನವ್ ಮನೋಹರ್ ಮಿಂಚಿನ ಬ್ಯಾಟಿಂಗ್ ನಡೆಸಿದರು. ಮುಂಬೈ ಬೌಲರ್‌ಗಳನ್ನು ಬೆಂಡೆತ್ತಿದ ಡೇವಿಡ್ ಮಿಲ್ಲರ್ 22 ಎಸೆತಗಳಲ್ಲಿ 4 ಸಿಕ್ಸರ್, 2 ಬೌಂಡರಿ ಒಳಗೊಂಡ 46ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಭಿನವ್ ಮನೋಹರ್ 21ಎಸೆತಗಳಲ್ಲಿ ತಲ್ 3 ಸಿಕ್ಸರ್, ಬೌಂಡರಿ ಒಳಗೊಂಡ 42 ರನ್ ಗಳಿಸಿ ಔಟಾದರು. ಇನ್ನಿಂಗ್ಸ್ ಅಂತ್ಯದಲ್ಲಿ ರಾಹುಲ್ ತೇವಾಟಿಯಾ 5 ಎಸೆತಗಳಲ್ಲಿ 3 ಸಿಕ್ಸರ್ ಒಳಗೊಂಡ 20ರನ್ ಗಳಿಸಿ ತಂಡದ ಮೊತ್ತವನ್ನು 200 ಗಡಿ ದಾಟಿಸಿದರು. ಮುಂಬೈ ಪರ ಪಿಯುಷ್ ಚಾವ್ಲಾ 2, ಅರ್ಜುನ್ ತೆಂಡೂಲ್ಕರ್, ಜೇಸನ್ ಬೆಹ್ರೆನ್ಡಾರ್ಫ್, ರಿಲೆ ಮೆರೆಡಿತ್, ಕುಮಾರ್ ಕಾರ್ತಿಕೇಯ ತಲಾ ಒಂದೊಂದು ವಿಕೆಟ್ ಪಡೆದರು.

208ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 152ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ನಾಯಕ ರೋಹಿತ್ ಶರ್ಮಾ, ತಿಲಕ್ ವರ್ಮಾ ತಲಾ 2, ಇಶಾನ್ ಕಿಶನ್ 13, ಕ್ಯಾಮೆರೂನ್ ಗ್ರೀನ್ 33, ಸೂರ್ಯಕುಮಾರ್ ಯಾದವ್ 23, ನೆಹಾಲ್ ವಧೇರಾ 40, ಪಿಯುಷ್ ಚಾವ್ಲಾ 18, ಅರ್ಜುನ್ ತೆಂಡೂಲ್ಕರ್ 13ರನ್ ಗಳಿಸಿದರು. ಗುಜರಾತ್ ಟೈಟನ್ಸ್ ಪರ ನೂರ್ ಅಹಮದ್ 3, ಮೋಹಿತ್ ಶರ್ಮಾ, ರಶೀದ್ ಖಾನ್ ತಲಾ 2, ಹಾರ್ದಿಕ್ ಪಾಂಡ್ಯ 1 ವಿಕೆಟ್ ಕಬಳಿಸಿದರು. ಅಭಿನವ್ ಮನೋಹರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಭಾರತ ತಂಡ ಪ್ರಕಟ




ಮುಂಬೈ ಏ.25– ಬಹುನಿರೀಕ್ಷಿತ ಜೂ.7ರಿಂದ ಲಂಡನ್‌ನ ಓವಲ್ ಮೈದಾನದಲ್ಲಿ ನಡೆಯುವ 2ನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕೆ 15 ಆಟಗಾರರನ್ನೊಳಗೊಂಡ ಬಲಿಷ್ಠ ಭಾರತ ಕ್ರಿಕೆಟ್ ತಂಡವನ್ನು ಬಿಸಿಸಿಐ ಪ್ರಕಟಿಸಿದೆ.

ರೋಹಿತ್ ಶರ್ಮಾ ಭಾರತ ತಂಡವನ್ನು ಮುನ್ನಡೆಸಲಿದ್ದು, ಐಪಿಎಲ್‌ನಲ್ಲಿ ಮಿಂಚಿನ ಪ್ರದರ್ಶನದ ಮೂಲಕ ಫಾರ್ಮ್‌ಗೆ ಮರಳಿರುವ ಅಜಿಂಕ್ಯ ರಹಾನೆ ಭಾರತ ತಂಡ ಕೂಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಸೂರ್ಯಕುಮಾರ್ ಯಾದವ್ ಹಾಗೂ ಶ್ರೇಯಸ್ ಅಯ್ಯರ್, ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆಯಲು ವಿಫಲವಾಗಿದ್ದಾರೆ.

2ನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಗಾಗಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ಕಾದಾಡಲಿವೆ. ಫಾರ್ಮ್ ಸಮಸ್ಯೆಯಿಂದಾಗಿ ಕಳೆದೊಂದು ವರ್ಷದಿಂದ ಭಾರತ ಟೆಸ್ಟ್ ತಂಡದಿಂದ ಹೊರಬಿದ್ದಿದ್ದ ಮಧ್ಯಮ ಕ್ರಮಾಂಕದ ಬ್ಯಾಟರ್ ಅಜಿಂಕ್ಯಾ ಇದೀಗ ದೇಶಿ ಕ್ರಿಕೆಟ್ ಹಾಗೂ ಐಪಿಎಲ್‌ನಲ್ಲಿ ಮಿಂಚಿನ ಪ್ರದರ್ಶನ ತೋರುವ ಮೂಲಕ ರಾಷ್ಟ್ರೀಯ ತಂಡಕ್ಕೆ ಕಮ್‌ಬ್ಯಾಕ್ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ನಾಯಕ ರೋಹಿತ್ ಶರ್ಮಾ, ಶುಭ್‌ಮನ್ ಗಿಲ್, ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ ಹಾಗೂ ಅಜಿಂಕ್ಯ ರಹಾನೆ ಸ್ಥಾನ ಪಡೆದಿದ್ದಾರೆ. ಇನ್ನು ವಿಕೆಟ್ ಕೀಪರ್ ರೂಪದಲ್ಲಿ ಕೆ.ಎಸ್.ಭರತ್ ಸ್ಥಾನ ಪಡೆದಿದ್ದಾರೆ. ಇನ್ನು ಕನ್ನಡಿಗ ಕೆ.ಎಲ್. ರಾಹುಲ್ ಕೂಡಾ ವಿಕೆಟ್ ಕೀಪರ್ ಪಾತ್ರ ನಿಭಾಯಿಸಬಲ್ಲವರಾಗಿದ್ದಾರೆ. ಇನ್ನು ಸ್ಪಿನ್ ಆಲ್‌ರೌಂಡರ್ ವಿಭಾಗದಲ್ಲಿ ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ ಹಾಗೂ ಅಕ್ಷರ್ ಪಟೇಲ್ ಸ್ಥಾನ ಪಡೆದಿದ್ದಾರೆ. ಇನ್ನು ವೇಗಿಗಳ ರೂಪದಲ್ಲಿ ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ, ಉಮೇಶ್ ಯಾದವ್ ಹಾಗೂ ಜಯದೇವ್ ಉನಾದ್ಕತ್ ಸ್ಥಾನ ಪಡೆದಿದ್ದಾರೆ.

ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಶುಭ್‌ಮನ್ ಗಿಲ್, ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಅಜಿಂಕ್ಯ ರಹಾನೆ, ಕೆ.ಎಲ್.ರಾಹುಲ್, ಕೆ.ಎಸ್.ಭರತ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಜಯದೇವ್ ಉನಾದ್ಕತ್.



ಮೇ 1ರಂದು ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ



ಮೈಸೂರು,ಏ.25(ಪಿಎಂ)– ಲರ್ನರ್ಸ್ ಗ್ಲೋಬಲ್ ಸ್ಕೂಲ್ ಅಂಡ್ ಲರ್ನರ್ಸ್ ಪಿಯು ಕಾಲೇಜ್ ಮತ್ತು ಅಂತರ್ ದೃಷ್ಟಿ ಬ್ರೈನ್ ಅಕಾಡೆಮಿ ಜಂಟಿ ಆಶ್ರಯದಲ್ಲಿ ಮೇ 1ರಂದು ಕಾರ್ಮಿಕ ದಿನಾಚರಣೆ ಪ್ರಯುಕ್ತ ಪ್ರಕೃತಿ ಕುರಿತು ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಅಂತರ್ ದೃಷ್ಟಿ ಬ್ರೈನ್ ಅಕಾಡೆಮಿ ಸಂಸ್ಥಾಪಕ ಶಿವಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ಕ್ಕೆ ಸಾತಗಳ್ಳಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಬಳಿಯಿರುವ ಲರ್ನರ್ಸ್ ಗ್ಲೋಬಲ್ ಸ್ಕೂಲ್ ಅಂಡ್ ಲರ್ನರ್ಸ್ ಪಿಯು ಕಾಲೇಜ್ ಆವರಣದಲ್ಲಿ ಸ್ಪರ್ಧೆ ನಡೆಯಲಿದ್ದು, ಸ್ಪರ್ಧೆಗೆ ಪ್ರವೇಶ ಉಚಿತ ಎಂದರು.

ಪ್ರಿಕೆಜಿಯಿಂದ 2ನೇ ತರಗತಿ, 3ರಿಂದ 5ನೇ ತರಗತಿ, 6ರಿಂದ 8ನೇ ತರಗತಿವರೆಗೆ ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಪ್ರತಿ ವಿಭಾಗದಲ್ಲೂ ಕ್ರಮವಾಗಿ ಮೂರು ಸ್ಥಾನಗಳಿಗೆ ನಗದು ಬಹುಮಾನ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ನೋಂದಣಿಗಾಗಿ ಮೊ.ಸಂ. 90355 06790 ಸಂಪರ್ಕಿಸಬಹುದು ಎಂದು ತಿಳಿಸಿದರು. ಶಿಕ್ಷಣ ಸಂಸ್ಥೆ ಸಂಸ್ಥಾಪಕ ಮುರಳಿಮೋಹನ್, ಡಾ.ಲಕ್ಷ್ಮೀ ಶ್ರೀನಿವಾಸ್ ಗುರೂಜಿ ಗೋಶಾಲೆಯ ವ್ಯವಸ್ಥಾಪಕ ಎಂ.ಸುಂದರ್‌ರಾಜ್ ಗೋಷ್ಠಿಯಲ್ಲಿದ್ದರು.

ಮೈಸೂರಲ್ಲಿ ವಿಶ್ವಭೂಮಿ ದಿನಾಚರಣೆ

ಪರಿಸರ ಸಂಬಂಧ ಉಪನ್ಯಾಸ, ಸಂವಾದ



ಮೈಸೂರು, ಏ.25(ಜಿಎ)–ಹವಾಮಾನ ಬದಲಾವಣೆ ತಡೆಗಾಗಿರುವ ರಾಷ್ಟ್ರೀಯ ಕಾರ್ಯ ಯೋಜನೆಯೂ ಉತ್ಪಾದನೆ ಹೆಚ್ಚಳ ಮತ್ತು ಆರ್ಥಿಕ ಅಭಿವೃದ್ಧಿ ಹೆಚ್ಚಿಸುತ್ತಲೇ ಪ್ರಕೃತಿ ರಕ್ಷಣೆ ಮಾಡುತ್ತೇವೆ ಎನ್ನುತ್ತಿದೆ. ಆದರೆ ಇದು ಅಸಾಧ್ಯ ಎಂದು ನಿವೃತ್ತ ಮೇಜರ್ ಜನರಲ್ ಡಾ.ಜಿ.ಎಸ್.ಒಂಬತ್ಕೆರೆ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ವತಿಯಿಂದ ಆಯೋಜಿಸಿದ್ದ ವಿಶ್ವಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು 'ನಮ್ಮ ಗ್ರಹದಲ್ಲಿ ಹೂಡಿಕೆ ಮಾಡಿ' ಕುರಿತು ಉಪನ್ಯಾಸ ನೀಡಿದರು.

ವಿಶ್ವ ಭೂ ದಿನವು ಗ್ರಹದ ಮೇಲಿನ ಅತಿದೊಡ್ಡ ಪರಿಸರ ಆಂದೋಲನವಾಗಿದೆ. ಇದು ಗ್ರಹವನ್ನು ರಕ್ಷಿಸಲು, ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಮತ್ತು ಪ್ರಕೃತಿಯನ್ನು ರಕ್ಷಿಸಲು ಮತ್ತು ಹವಾಮಾನ ಬಿಕ್ಕಟ್ಟಿನ ಬಗ್ಗೆ ಜಾಗೃತಿ ಮೂಡಿಸಲು ಸಹಾಯ ಮಾಡುತ್ತದೆ ಎಂದರು.

ನಾವು ಅಳವಡಿಸಿಕೊಂಡಿರುವ ಬಂಡವಾಳ ಹೂಡಿಕೆಯ ಮಾದರಿಗಳು ಜಗತ್ತಿನ ಉಳಿವಿಗೆ ಏನನ್ನೂ ಕೊಡುಗೆ ನೀಡುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದ ಅವರು, ಇಂದಿನ ಅಂತ್ಯವಿಲ್ಲದ ಆರ್ಥಿಕ ಬೆಳವಣಿಗೆಯ ಪ್ರಸ್ತುತ ಶೋಷಣೆ, ಸಮರ್ಥನೀಯವಲ್ಲದ ಆರ್ಥಿಕ ಮಾದರಿಯನ್ನು ಪರಿವರ್ತಿಸಬೇಕಿದ್ದು, ಜನಸ್ನೇಹಿ ಅರ್ಥಶಾಸ್ತ್ರ, ಸಾಮಾಜಿಕ ಜವಾಬ್ದಾರಿಯುತ ಪರಿಸರದ ಧ್ವನಿ ಜೊತೆಗೆ ಆರ್ಥಿಕವಾಗಿ ಸುಸ್ಥಿರ ಬದಲಾವಣೆಯಾಗಬೇಕಿದೆ ಎಂದರು.

ಇತ್ತೀಚಿನ ಆರ್ಥಿಕ ಪರಿಸ್ಥಿತಿ, ಪರಿಸರದ ಕಾಳಜಿ ಸೇರಿದಂತೆ ಅನೇಕ ವಿಷಯಗಳ ಕುರಿತು ಉಪನ್ಯಾಸ ನೀಡಿ ನಂತರ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ಸಂಚಾಲಕ ಕೆ.ಬಿ. ಭಾಸ್ಕರ್, ಕಾರ್ಯದರ್ಶಿ ಎಚ್.ಎಸ್.ಸುರೇಶ್ ಬಾಬು, ಜಂಟಿ ಕಾರ್ಯದರ್ಶಿ ಡಾ.ಆರ್. ದೀಪು, ಐಎಸ್‌ಎಚ್‌ಆರ್‌ಎಇ ಅಧ್ಯಕ್ಷ ಡಾ. ಎಸ್.ಎ.ಮೋಹನ್ ಕೃಷ್ಣ, ಕಾರ್ಯಕ್ರಮ ಸಂಚಾಲಕ ಟಿ.ಎ.ಪ್ರಭಾಕರ್, ಕಾರ್ಯದರ್ಶಿ ಪ್ರೊ.ಇ.ಅಮೃತ್ ಇದ್ದರು.

ಪ್ರಾಮಾಣಿಕ ಮತದಾನ ಸಂಬಂಧ ಜಾಗೃತಿ



ಮೈಸೂರು, ಏ.25(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಪಂ, ನಗರಪಾಲಿಕೆ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿ ಮೂಡಿಸಲಾಯಿತು.

ಮತದಾನ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಪಂ ಸಿಇಓ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಕೆ.ಎಂ.ಗಾಯತ್ರಿ, ಸಂವಿಧಾನ ಹಾಗೂ ಕಾನೂನಿನ ಬಗ್ಗೆ ಅರಿವುಳ್ಳ ಕಾನೂನು ವಿದ್ಯಾರ್ಥಿಗಳು ಮತದಾನ ಮಾಡುವ ಮೂಲಕ ಬೇರೆಯವರಿಗೆ ಪ್ರೇರಣೆ ನೀಡಬೇಕು ಎಂದು ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆ ಮತದಾನ ಅತ್ಯಂತ ಪ್ರಮುಖವಾದ ಪ್ರಕ್ರಿಯೆಯಾಗಿದ್ದು, ಪ್ರತಿಯೊಬ್ಬರು ಇದರಲ್ಲಿ ಭಾಗವಹಿಸುವುದು ಮುಖ್ಯವಾಗಿದೆ. ಮತದಾನದ ಮೂಲಕ ದೇಶದ ಅಭಿವೃದ್ಧಿಗೆ ಸಹಕರಿಸಬೇಕು ಎಂದರಲ್ಲದೆ 'ಪ್ರಜಾಪ್ರಭುತ್ವದಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪೌರರಾದ ನಾವು, ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿ ಹಿಡಿಯುತ್ತೇವೆಂದು ಮತ್ತು ಪ್ರತಿಯೊಂದು ಚುನಾವಣೆಯಲ್ಲಿ ನಿರ್ಭೀತರಾಗಿ ಮತ್ತು ಧರ್ಮ, ಜನಾಂಗ, ಜಾತಿ, ಮತ, ಭಾಷೆ ಅಥವಾ ಯಾವುದೇ ಪ್ರೇರೇಪಣೆಗಳು, ದಾಕ್ಷಿಣ್ಯಗಳಿಂದ ಪ್ರಭಾವಿತರಾಗದೆ ಮತ ಚಲಾಯಿಸುತ್ತೇವೆಂದು ಈ ಮೂಲಕ ಪ್ರತಿಜ್ಞೆ ಸ್ವೀಕರಿಸುತ್ತೇವೆ' ಎಂಬ ಮತದಾರರ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಮೈಸೂರಿನ ರಾಜಮಾರ್ಗದಲ್ಲಿ ಮೋದಿ ರೋಡ್ ಶೋಗೆ ಸಿದ್ಧತೆ





ಮೈಸೂರು, ಏ.25(ಎಸ್‌ಬಿಡಿ)– ಪ್ರಧಾನಿ ಮೋದಿ ಅವರ ಬೃಹತ್ ರೋಡ್ ಶೋಗೆ ಮೈಸೂರಿನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಮೋದಿ ಅವರು ಏ.30ರಂದು ಮೈಸೂರಿಗೆ ಆಗಮಿಸಿ, ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ಅಂದು ಸಂಜೆ ಗನ್‌ಹೌಸ್ ಬಳಿಯಿಂದ ಬಸವೇಶ್ವರ ವೃತ್ತ, ಸಯ್ಯಾಜಿರಾವ್ ರಸ್ತೆ, ಕೃಷ್ಣರಾಜ ವೃತ್ತ ಮಾರ್ಗವಾಗಿ ರಾಜಮಾರ್ಗದಲ್ಲಿ ಹೈವೇ ಸರ್ಕಲ್‌ವರೆಗೆ ರೋಡ್ ಶೋನಲ್ಲಿ ಭಾಗಿಯಾಗಿ ಮತಬೇಟೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ರೋಡ್ ಶೋ ಮಾರ್ಗದ ಇಕ್ಕೆಲಗಳಲ್ಲಿ ದಸರಾ ಮಾದರಿಯಲ್ಲಿ ಮರದ ಬಂಬುಗಳಿಂದ ಬ್ಯಾರಿಕೇಡ್ ನಿರ್ಮಿಸಲಾಗುತ್ತಿದೆ. ಯಾವ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಬೇಕು, ಯಾವ ರೀತಿ ಭದ್ರತಾ ವ್ಯವಸ್ಥೆ ಕೈಗೊಳ್ಳಬೇಕೆಂದು ನಗರ ಪೊಲೀಸರು ಯೋಜನೆ ರೂಪಿಸುತ್ತಿದ್ದಾರೆ. ಮೋದಿ ಅವರು ಮೈಸೂರು ಪ್ರವಾಸದ ಅಧಿಕೃತ ವೇಳಾಪಟ್ಟಿ ಸದ್ಯ ಲಭ್ಯವಾಗಿಲ್ಲ. ಆದರೆ ರೋಡ್ ಶೋಗೆ ಎಲ್ಲಾ ರೀತಿಯ ಸಿದ್ಧತೆಗಳೂ ನಡೆದಿವೆ.


ವರ್ತಕರಲ್ಲಿ ಸಂದೇಶ್ ಸ್ವಾಮಿ ಮತಯಾಚನೆ



ಮೈಸೂರು, ಏ.25(ಜಿಎ)–ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಅವರು ಕ್ಷೇತ್ರದಾದ್ಯಂತ ಮತ ಯಾಚನೆ ಮುಂದುವರೆಸಿದ್ದು, ಮಂಗಳವಾರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮಾರುಕಟ್ಟೆಗಳಿಗೆ ಭೇಟಿ ನೀಡಿ, ಪ್ರಚಾರ ನಡೆಸಿದರು.

ಕ್ಷೇತ್ರದ ಎನ್.ಆರ್.ಮೊಹಲ್ಲಾ, ಕೆಸರೆ, ಕುರಿಮಂಡಿ ಮತ್ತು ವೀರನಗೆರೆಯಲ್ಲಿರುವ ಮಾರುಕಟ್ಟೆ ಭೇಟಿ ನೀಡಿದ ಅವರು ವರ್ತಕರನ್ನು ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಿದರು. ನಂತರ ಈ ಬಾರಿ ಬಿಜೆಪಿಗೆ ಮತ ನೀಡುವ ಮೂಲಕ ಕ್ಷೇತ್ರದಲ್ಲಿ ಬದಲಾವಣೆಯನ್ನು ತನ್ನಿ, ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು ಬಲ ನೀಡಿ ಎಂದು ಮನವಿ ಮಾಡಿದರು.

ಪಿಯುಸಿಯಲ್ಲಿ ಎಎಂಬಿ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಶೇ.90 ಫಲಿತಾಂಶ



ಹೇಮ ಪಲ್ಲವಿ ನೀತು ಬೇಬಿ ಶಾಲಿನಿ ಪಿ.ಮೇಘನಾ

ಮೈಸೂರು, ಏ.25– ಮೈಸೂರಿನ ಹೆಬ್ಬಾಳ 1ನೇ ಹಂತದ ಭೈರವೇಶ್ವರನಗರದಲ್ಲಿರುವ ಎಎಂಬಿ ಸಂಯುಕ್ತ ಪದವಿಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90 ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿನಿಯರಾದ ಹೇಮ.ಸಿ 568, ಪಲ್ಲವಿ 527, ಆರ್.ನೀತು 506, ಎಸ್.ಬೇಬಿ ಶಾಲಿನಿ 505, ಪಿ.ಮೇಘನಾ 477, ಎಸ್.ಎನ್.ಕೀರ್ತನ 466, ಕೆ.ಸಹನಾ 456, ಎಸ್.ಯೋಗೇಶ್ ಕುಮಾರ್ 450 ಹಾಗೂ ಎಂ.ಪವನ್ ಕುಮಾರ್ 430 ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿಗೆ ಟಾಪರ್ ಆಗಿದ್ದಾರೆ.


ತಪ್ಪದೇ ಮತ ಚಲಾಯಿಸಲು ಜೂನಿಯರ್ ವಿಷ್ಣುವರ್ಧನ್ ಮನವಿ



ಮೈಸೂರು,ಏ.25(ಪಿಎಂ)– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡಬೇಕು. ಅದರಲ್ಲೂ 18 ವರ್ಷ ತುಂಬಿದ ಎಲ್ಲರೂ ಕಡ್ಡಾಯವಾಗಿ ಸ್ವಪ್ರೇರಣೆಯಿಂದ ಮತ ಚಲಾಯಿಸಬೇಕೆಂದು ಜೂನಿಯರ್ ವಿಷ್ಣುವರ್ಧನ್ ಆದ ಎನ್.ಆರ್.ರಘು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ ಅಭ್ಯರ್ಥಿಗಳು ಚುನಾವಣೆ ವೇಳೆ ಅಭಿವೃದ್ಧಿ ಕಾರ್ಯ ಮಾಡುವುದಾಗಿ ಭರವಸೆ ನೀಡುತ್ತಾರೆ. ಆದರೆ ಗೆದ್ದ ಬಳಿಕ ಮರೆಯುವುದೇ ಹೆಚ್ಚು ಹೀಗಾಗಿ ಪ್ರತಿಯೊಬ್ಬರೂ ಸೂಕ್ತ ಅಭ್ಯರ್ಥಿಗೆ ಮತ ಚಲಾಯಿಸಬೇಕು. ಜೊತೆಗೆ ಅಭಿಮಾನಿಗಳ ಮನವಿ ಮೇರೆಗೆ ಸೂಕ್ತ ಅಭ್ಯರ್ಥಿಗಳ ಪರ ಪ್ರಚಾರ ಮಾಡುವುದಾಗಿ ಹೇಳಿದರು. ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಪ್ರಭಾಕರ್, ಪ್ರದೀಶ್, ಪಿ.ಶಾಂತರಾಜ ಅರಸ್ ಗೋಷ್ಠಿಯಲ್ಲಿದ್ದರು.

ಸಿ.ಐಶ್ವರ್ಯ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 25– ಮೈಸೂರಿನ ಬೇಸ್ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಸಿ. ಐಶ್ವರ್ಯ ಈ ಬಾರಿಯ ಪದವಿಪೂರ್ವ ಪರೀಕ್ಷೆಯಲ್ಲಿ 584 (ಶೇ. 97.5) ಅಂಕ ಗಳಿಸುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಂಯಾಗಿದ್ದಾರೆ. ಈಕೆ ಮೈಸೂರಿನ ಚಂದ್ರಶೇಖರಮೂರ್ತಿ ಮತ್ತು ಪವಿತ್ರ ದಂಪತಿ ಪುತ್ರಿ.

ಏ.24ರಿಂದ ವಿಶ್ವ ಪ್ರತಿರಕ್ಷಣಾ ಲಸಿಕಾ ಸಪ್ತಾಹ

ಮೈಸೂರು, ಏ.25– ವಿವಿಧ ಕಾಯಿಲೆಗಳಿಂದ ಮಕ್ಕಳನ್ನು ರಕ್ಷಿಸಲು ಲಸಿಕೆ ಬಳಕೆಯನ್ನು ಉತ್ತೇಜಿಸಲು ಪ್ರತಿ ವರ್ಷ ಏಪ್ರಿಲ್ ಕೊನೆಯ ವಾರ ಏ.24 ರಿಂದ 30 ರ ವರೆಗೆ "ವಿಶ್ವ ಪ್ರತಿರಕ್ಷಣಾ ಲಸಿಕಾ ಸಪ್ತಾಹ"ವನ್ನು ಆಚರಿಸಲಾಗುತ್ತದೆ.

ವಿಶ್ವ ಲಸಿಕಾ ಸಪ್ತಾಹದ ಈ ವರ್ಷದ ಧ್ಯೇಯ ವಾಕ್ಯ "ಎಲ್ಲರಿಗೂ ದೀರ್ಘಾಯುಷ್ಯ". ದೀರ್ಘ ಆಯಸ್ಸು ಮತ್ತು ಆರೋಗ್ಯವಂತ ಜೀವನಕ್ಕೆ ಲಸಿಕೆ ಮಹತ್ವ ಮತ್ತು ಲಸಿಕಾ ಸಮಾನತೆಯ ಅಗತ್ಯವನ್ನು ಈ ಧ್ಯೇಯ ಪ್ರತಿಪಾದಿಸುತ್ತದೆ. ಲಸಿಕೆ ಸಮಾನತೆಯ ವಿಷಯಕ್ಕೆ ಬಂದಾಗ ಮಹಿಳೆಯರು ಹಿಂದುಳಿದಿದ್ದಾರೆ. ಲಸಿಕೆ ಪಡೆಯದ ಮಹಿಳೆಯರು ಅದರಲ್ಲೂ ಗರ್ಭಿಣಿಯರು ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಇದು ನವಜಾತ ಶಿಶುವಿನ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಗರ್ಭಾವಸ್ಥೆಯ ಸಂದರ್ಭದಲ್ಲಿ ಮಹಿಳೆಯರ ದೇಹದಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತದೆ.

ತಮ್ಮ ಮಕ್ಕಳಿಗೆ 12 ಮಾರಕ ಕಾಯಿಲೆಗಳ ವಿರುದ್ಧ ವಿಶೇಷ ಮಾಹೆಯ ಏ.24 ರಿಂದ 30 ತನಕ ನಡೆಯಲಿರುವ ವಿಶ್ವ ಲಸಿಕಾ ಸಪ್ತಾಹದಲ್ಲಿ ಲಸಿಕೆಗಳಿಂದ ವಂಚಿತರಾಗಿರುವ ಮಕ್ಕಳಿಗೆ ಲಸಿಕೆಗಳನ್ನು ಹಾಕಿಸಿ ಮಾರಕ ಕಾಯಿಲೆಗಳಿಂದ ರಕ್ಷಣೆ ಕೊಡಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ನಾಗೇಂದ್ರ ಪರ ಉತ್ತರಪ್ರದೇಶ ಡಿಸಿಎಂ ಬ್ರಜೇಶ್ ಪಾಠಕ್ ರೋಡ್ ಶೋ



ಮೈಸೂರು, ಏ.25(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಪರ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್, ಭರ್ಜರಿ ರೋಡ್ ಶೋ ಮೂಲಕ ಮತದಾರರನ್ನು ಸೆಳೆದರು.

ಮೈಸೂರಿನ ಹೆಬ್ಬಾಳ 2ನೇ ಹಂತದಲ್ಲಿರುವ ಸಿಐಟಿಬಿ ಛತ್ರದಿಂದ ಆರಂಭವಾದ ಬೃಹತ್ ರೋಡ್ ಶೋ, ಅಭಿಷೇಕ್ ಸರ್ಕಲ್, ಸೂರ್ಯ ಬೇಕರಿ, ಚಾಮುಂಡೇಶ್ವರಿ ದೇವಸ್ಥಾನದ ಮಾರ್ಗದಿಂದ ಹೆಬ್ಬಾಳ ಮುಖ್ಯ ರಸ್ತೆ ಮೂಲಕ ಬಸವನಗುಡಿ, ಮೇಟಗಳ್ಳಿ ಬಸ್ ನಿಲ್ದಾಣದ ಮಾರ್ಗವಾಗಿ ಬಿಎಂಶ್ರೀ ನಗರ ಹಾಗೂ ಕರಕುಶಲನಗರದವರೆಗೆ ನಡೆಯಿತು.

ಅಪಾರ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು, ಬೆಂಬಲಿಗರೊಂದಿಗೆ ಸಾಗಿದ ರೋಡ್ ಶೋನಲ್ಲಿ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್, ಮತದಾರರ ಕಡೆಗೆ ಕೈ ಬೀಸಿ ಬೆಂಬಲ ನೀಡುವಂತೆ ಮನವಿ ಮಾಡಿದರು. ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಪಾಲಿಕೆ ಸದಸ್ಯ ರವೀಂದ್ರ, ಬಿಜೆಪಿ ಯುವಮೋರ್ಚಾ ನಗರಾಧ್ಯಕ್ಷ ಕಿರಣ್ ಗೌಡ ಸೇರಿದಂತೆ ಹಲವು ಬಿಜೆಪಿ ಮುಖಂಡರು ಸಾಥ್ ನೀಡಿದರು.

ಜೈಕಾರ ಘೋಷಣೆ, ಹೂ ಮಳೆ: ರೋಡ್ ಶೋ ಮಾರ್ಗದುದ್ದಕ್ಕೂ ಜೈಕಾರದ ಘೋಷಣೆಗಳು ಮೊಳಗಿದವು. ವೃತ್ತಗಳಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬಿಎಂಶ್ರೀ ನಗರ ಹಾಗೂ ಕರಕುಶಲ ನಗರದಲ್ಲಿ ಹೂ ಮಳೆ ಸುರಿಸುವ ಮೂಲಕ ಅಭಿಮಾನ ತೋರಿದರು.

ನಾಗೇಂದ್ರ ಗೆಲುವು ಖಚಿತ: ಈ ವೇಳೆ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್, ಚಾಮರಾಜ ಕ್ಷೇತ್ರದಲ್ಲಿ ಶಾಸಕ ನಾಗೇಂದ್ರ ಗೆಲುವು ಖಚಿತ. ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುತ್ತಾರೆ. ಈ ಮೂಲಕ ರಾಜ್ಯದಲ್ಲಿಯೂ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮೂಲಕ ಡಬಲ್ ಇಂಜಿನ್ ಸರ್ಕಾರ ಸ್ಥಾಪನೆಯಾಗಲಿದೆ. ಇದರಲ್ಲಿ ಯಾವುದೇ ಸಂಶಯಬೇಡ ಎಂದರು.

ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ: ಶಾಸಕ ಎಲ್.ನಾಗೇಂದ್ರ ಮಾತನಾಡಿ, ಚಾಮರಾಜ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಮತ್ತೊಂದು ಅವಕಾಶ ಕೊಡಿ. ಕಳೆದ 5 ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಕೆಲಸಕ್ಕೆ ಸಿಕ್ಕಿದ್ದು, ಕೇವಲ 2 ವರ್ಷಗಳು ಮಾತ್ರ. ಕಡಿಮೆ ಸಮಯದಲ್ಲಿ ಸುಮಾರು 950 ಕೋಟಿ ರೂ. ಅನುದಾನ ತಂದು ಕ್ಷೇತ್ರದ ಎಲ್ಲಾ ಬಡಾವಣೆಯ ರಸ್ತೆ, ಚರಂಡಿ ಅಭಿವೃದ್ಧಿ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗಾಗಿ ನನಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ವರುಣ ಸೇರಿ 123 ಸ್ಥಾನ ಗೆಲ್ಲುವುದೇ ನನ್ನ ಪಣ

ಕಾಟಾಚಾರಕ್ಕೆ ಭಾರತೀ ಶಂಕರ್‌ರನ್ನು ಅಭ್ಯರ್ಥಿ ಮಾಡಿಲ್ಲ: ಮಾಜಿ ಸಿಎಂ ಕುಮಾರಸ್ವಾಮಿ



ತಿ.ನರಸೀಪುರ, ಏ.25– ವರುಣದಲ್ಲಿ ಕಾಟಾಚಾರಕ್ಕೆ ಭಾರತೀ ಶಂಕರ್ ಅವರನ್ನು ಅಭ್ಯರ್ಥಿ ಮಾಡಿಲ್ಲ. ನನಗೆ ಪ್ರತಿಯೊಂದು ಕ್ಷೇತ್ರವೂ ಮುಖ್ಯವಾಗಿದ್ದು, 123 ಸಂಖ್ಯೆಯ ಗುರಿ ಮುಟ್ಟುವ ಉದ್ದೇಶ ಹೊಂದಿದ್ದೇನೆ. ವರುಣದಲ್ಲೂ ಗೆಲ್ಲುವ ಉದ್ದೇಶದಿಂದ ಅಭ್ಯರ್ಥಿ ಹಾಕಿದ್ದು ಸರಳ ಸಜ್ಜನಿಕೆಯ ಪ್ರಾಮಾಣಿಕ ಅಭ್ಯರ್ಥಿಗೆ ಮತ ನೀಡುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.

ತಿ.ನರಸೀಪುರ ಪುರಸಭೆ ವ್ಯಾಪ್ತಿಯ ತಿರುಮಕೂಡಲಿನ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಅಹಿಂದ ವರ್ಗದ ಸಮಾವೇಶದಲ್ಲಿ ವರುಣ ಕ್ಷೇತ್ರದ ಅಭ್ಯರ್ಥಿ ಭಾರತೀ ಶಂಕರ್ ಪರ ಮತ ಯಾಚನೆ ಮಾಡಿ ಅವರು ಮಾತನಾಡಿದರು.

ಕೆಲವರು ಯಾರಿಗೋ ತೊಂದರೆ ನೀಡಲು ಭಾರತೀ ಶಂಕರ್ ಅವರನ್ನು ವರುಣದಲ್ಲಿ ಅಭ್ಯರ್ಥಿಯಾಗಿ ಮಾಡಲಾಗಿದೆ ಎಂದು ಅರ್ಥೈಸಿಕೊಂಡಿದ್ದಾರೆ. ಆದರೆ ನಾವು ಯಾರಿಗೂ ತೊಂದರೆ ಕೊಡುವ ಉದ್ದೇಶದಿಂದ ಅಲ್ಲಿ ಅಭ್ಯರ್ಥಿ ಹಾಕಿಲ್ಲ. ಭಾರತೀ ಶಂಕರ್ ಅವರನ್ನು ಅಭ್ಯರ್ಥಿ ಮಾಡಿರುವುದು ವರುಣದಲ್ಲೂ ಜೆಡಿಎಸ್ ಪಕ್ಷ ಗೆಲ್ಲಬೇಕೆಂಬ ಉದ್ದೇಶದಿಂದ ಎಂದರು.

ಭಾರತೀ ಶಂಕರ್ ಅವರು ಪ್ರಸಕ್ತ ರಾಜಕಾರಣಕ್ಕೆ ಹೊಂದಾಣಿಕೆಯಾದರೆ ಅವರೇ ಚುನಾವಣೆಯಲ್ಲಿ ಮುನ್ನಡೆ ಸಾಧಿಸಲಿದ್ದಾರೆ. ನಾವೇನು ಇಲ್ಲಿ ಕಾಟಾಚಾರಕ್ಕೆ ಅಭ್ಯರ್ಥಿ ಹಾಕಿಲ್ಲ. ನಾನು 123 ಕ್ಷೇತ್ರ ಗೆಲ್ಲುವ ಗುರಿ ಹೊಂದಿದ್ದು, ಆ ಮೂಲಕ ಪ್ರತಿ ಕುಟುಂಬದ ಬದುಕು, ಭವಿಷ್ಯ ಸರಿಪಡಿಸುವ ಕೆಲಸಕ್ಕೆ ಮುಂದಾಗಿದ್ದೇನೆ. ನಿಮ್ಮ ಬದುಕು ಸರಿಪಡಿಸಲು ನೀವೇ ಒಳ್ಳೆ ಸರ್ಕಾರ ತನ್ನಿ ಎಂದು ಕರೆ ನೀಡಿದರು.

ವರುಣ ಕ್ಷೇತ್ರದಲ್ಲಿ ಎಲ್ಲ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರೆ, ಚುನಾವಣೆ ಎದುರಿಸಲು ಸಮಸ್ಯೆ ಇಲ್ಲ. ಕ್ಷೇತ್ರಕ್ಕೆ ನಾನು ಸಹ ಇನ್ನೆರಡು ಬಾರಿ ಬಂದು ನಿಮ್ಮೊಂದಿಗೆ ಇರುತ್ತೇನೆ. ನಾವು ಯಾರನ್ನೂ ಟೀಕಿಸುವುದು ಬೇಡ. ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿ ಗೆಲುವಿಗೆ ಬೇಕಾದ ಮಾರ್ಗಸೂಚಿ ಅನುಸರಿಸೋಣ ಎಂದು ಸಲಹೆ ನೀಡಿದರು.

ಒಮ್ಮೆ ಅವಕಾಶ ನೀಡಿ: ನನಗೆ ಒಮ್ಮೆ 5 ವರ್ಷಗಳ ಪೂರ್ಣಾವಧಿಯ ಅಧಿಕಾರ ನೀಡಿ ಎಂದು ಮನವಿ ಮಾಡಿದ ಕುಮಾರಸ್ವಾಮಿ, ನಾನೇನು 5 ವರ್ಷ ಮುಖ್ಯಮಂತ್ರಿಯಾಗಿ ಮಜಾ ಮಾಡಲು ಅವಕಾಶ ಕೇಳುತ್ತಿಲ್ಲ. 2 ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ರಾಜ್ಯದ ಆರೂವರೆ ಕೋಟಿ ಜನರ ಆಶೀರ್ವಾದದಿಂದ ಆದ ಮುಖ್ಯಮಂತ್ರಿ ನಾನಲ್ಲ. ಯಾವುದೋ ರಾಜಕೀಯ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಯಾದೆ. ಆ ಸಂದರ್ಭದಲ್ಲಿ ಜನರಿಗೆ ಮೋಸ ಮಾಡದೇ ಕೈಲಾದ ಮಟ್ಟಿಗೆ ಪ್ರಾಮಾಣಿಕ ಕೆಲಸ ಮಾಡಿದ್ದೇನೆ. ಆದರೆ ಎಲ್ಲವನ್ನೂ ಮಾಡಿದ್ದೇನೆ ಎಂದು ನಾನು ಹೇಳುವುದಿಲ್ಲ. ಆದರೆ ಇಂದು ಅಂಬೇಡ್ಕರ್ ಸಂದೇಶವನ್ನು ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ ಜಾರಿಗೆ ತರಲೇಬೇಕು ಎಂಬ ಸವಾಲಿಟ್ಟುಕೊಂಡು ಮುನ್ನುಗ್ಗಿದ್ದೇನೆ. ರೈತರ ಬದುಕು ಹಸನಾಗಿಸುವ ಪಂಚರತ್ನ ಯೋಜನೆ ಜಾರಿಗೆ ಎರಡೂವರೆ ಲಕ್ಷ ಕೋಟಿ ಹಣ ಸಂಗ್ರಹ ಮಾಡಬೇಕಿದೆ ಎಂದರು.

> ವರುಣ ಕ್ಷೇತ್ರ ಗೆಲ್ಲುವ ಡಾರ್ಕ್‌ಹಾರ್ಸ್ ನಾನೇ ಎಂಬುದನ್ನು ಸಾಬೀತುಪಡಿಸಲಿದ್ದೇನೆ. ಕ್ಷೇತ್ರವನ್ನು ಗೆದ್ದೇ ಗೆಲ್ಲುತ್ತೇನೆ. ಇಲ್ಲಿ ಸ್ಪರ್ಧೆ ಇರುವುದು ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ನಡುವೆ ಮಾತ್ರ. ಬಿಜೆಪಿಯವರು ಬಹಳ ಹಿಂದೆ ಇದ್ದಾರೆ. ಬಿಜೆಪಿ ಅಭ್ಯರ್ಥಿ ಸೋಲಿಗೆ ಹೆದರಿ ಚಾಮರಾಜನಗರ ಮತ್ತು ವರುಣದಲ್ಲಿ ಸ್ಪರ್ಧಿಸಿದ್ದಾರೆ. ಅವರಿಗೆ ವರುಣ ಕ್ಷೇತ್ರದ ಪರಿಚಯವೇ ಇಲ್ಲ. ಮೊನ್ನೆ ಮತಕ್ಷೇತ್ರವೊಂದರಲ್ಲಿ ಅವರಿಗೆ ಮತಯಾಚನೆ ಮಾಡಲು ಬಿಟ್ಟಿಲ್ಲ. ಹಾಗಾಗಿ ಸ್ಪರ್ಧೆ ಇರುವುದು ನನ್ನ ಮತ್ತು ಸಿದ್ದರಾಮಯ್ಯರ ನಡುವೆ ಮಾತ್ರ. ನೀವು ನಮ್ಮಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಬೇಕಾಗುತ್ತದೆ. ನನ್ನನ್ನೇಕೆ ಆಯ್ಕೆ ಮಾಡಬೇಕೆಂಬುದನ್ನು ಮುಂದಿನ ದಿನಗಳಲ್ಲಿ ಹಳ್ಳಿ ಹಳ್ಳಿಗೆ ಬಂದು ತಿಳಿಸಲಿದ್ದೇನೆ. ನಿಮ್ಮ ಮತ್ತು ಕುಮಾರಣ್ಣನವರ ಆಶೀರ್ವಾದ ಹೊತ್ತು ವಿಧಾನಸೌಧಕ್ಕೆ ಹೋಗುವ ಆಶಯ ಹೊಂದಿದ್ದು, ಎಲ್ಲರ ಆಶೀರ್ವಾದ ಕೋರುತ್ತೇನೆ.
>
> -ಡಾ.ಭಾರತೀ ಶಂಕರ್, ವರುಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

5 ಲಕ್ಷದ 65 ಸಾವಿರ ಕೋಟಿ ಸಾಲ: ರಾಜ್ಯ ಸರ್ಕಾರ 5 ಲಕ್ಷದ 65 ಸಾವಿರ ಕೋಟಿ ರೂ. ಸಾಲ ಮಾಡಿದ್ದು, ಇದು ಜನರಿಗೆ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಕೊಡುಗೆ. ಈ ಸಾಲ ನಿಮ್ಮ ತಲೆ ಮೇಲೆ ಹಾಕುತ್ತಾರೆ. ನೀವು ಜೀವನ ನಡೆಸಲು ಮಾಡುವ ಸಾಲದ ಜೊತೆಗೆ ಸರ್ಕಾರ ಮಾಡಿದ ಸಾಲವನ್ನು ತೀರಿಸಬೇಕಾಗುತ್ತದೆ ಎಂದರು.

ಕುತಂತ್ರವೂ ಇರಬೇಕು: ವರುಣ ಕ್ಷೇತ್ರದ ಪಕ್ಷದ ಅಭ್ಯರ್ಥಿ ಭಾರತೀ ಶಂಕರ್ ಜನಸಾಮಾನ್ಯರಿಗೆ ಸಿಗುವ ಪ್ರಾಮಾಣಿಕ ವ್ಯಕ್ತಿ. ಕುತಂತ್ರದ ರಾಜಕಾರಣಿಯಲ್ಲ. ಆದರೆ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಕುತಂತ್ರವೂ ಇರಬೇಕು. ಪ್ರಾಮಾಣಿಕ ಎಂದರೆ ಯಾರೂ ಮತ ಹಾಕುವುದಿಲ್ಲ. ಭಾರತೀ ಶಂಕರ್ ನಾನು ಲಕ್ಷ್ಮಿ ಪುತ್ರ ಅಲ್ಲ. ಸರಸ್ವತಿ ಪುತ್ರ ಎಂದು ತಮ್ಮ ಭಾಷಣದ ವೇಳೆ ಹೇಳಿದ್ದಾರೆ. ಈಗ ಸರಸ್ವತಿ ಪುತ್ರನ್ನ ಯಾರೂ ಕೇಳಲ್ಲ, ಲಕ್ಷ್ಮಿ ಪುತ್ರನ್ನ ಕೇಳ್ತಾರೆ. ಇದು ಇಂದಿನ ಸಮಾಜ. ಇವತ್ತು ಸರಸ್ವತಿ ಪುತ್ರನ್ನ ಬೆಳೆಸಿದರೆ, ನಮ್ಮ ಹಳ್ಳಿ ಉದ್ಧಾರವಾಗುತ್ತೆ. ಮಕ್ಕಳು ವಿದ್ಯಾವಂತರಾಗುತ್ತಾರೆ ಎನ್ನೋದನ್ನ ಯಾರೂ ಯೋಚನೆ ಮಾಡಲ್ಲ. ಅವನು ಎಷ್ಟು ದುಡ್ಡು ಚೆಲ್ತಾನೆ ಅನ್ನೋದರ ಮೇಲೆ ಅವನ ರಾಜಕೀಯ ಭವಿಷ್ಯ ಅಡಗಿದೆ ಎಂದು ಮಾರ್ಮಿಕವಾಗಿ ನುಡಿದರು.

ಜಿಲ್ಲಾಧ್ಯಕ್ಷ ಕೆ ಎಸ್ ನರಸಿಂಹಸ್ವಾಮಿ ಮಾಜಿ ಶಾಸಕ ಚಿಕ್ಕಣ್ಣ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ವೀರೇಶ್, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಜೆಡಿಎಸ್‌ನ ರಾಜ್ಯ ವಕ್ತಾರ ತಾಯೂರು ಪ್ರಕಾಶ್, ಮೈಮುಲ್ ನಿರ್ದೇಶಕ ಉಮಾ ಶಂಕರ್, ಹೆಚ್ ಕೆ ರಾಮು, ಸೋಮಣ್ಣ ಚನ್ನೇಗೌಡ, ಬಾಲಕೃಷ್ಣ ಬಸವರಾಜು, ಶಿವಪ್ರಸಾದ್, ಮೂಗೂರು ಶಿವಮೂರ್ತಿ ಕುಪ್ಪೇಗಾಲ ಬಾಬುಇದ್ದರು.

ಹುಣಸೂರಿನ ಅಭಿವೃದ್ಧಿಗೆ ಜೆಡಿಎಸ್ ಬೆಂಬಲಿಸಿ

ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಮನವಿ



ಹಿರಿಕ್ಯಾತನಹಳ್ಳಿ, ಏ.25– ಹುಣಸೂರಿನ ಸಮಗ್ರ ಅಭಿವೃದ್ಧಿಗೆ ಈ ಬಾರಿ ಜೆಡಿಎಸ್ ಬೆಂಬಲಿಸಿ ಎಂದು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಮನವಿ ಮಾಡಿದರು.

ಇಲ್ಲಿನ ಕೊತ್ತೇಗಾಲ, ಹರವೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಪ್ರಚಾರ ಕೈಗೊಂಡು ಮಾತನಾಡಿದ ಅವರು, ಕ್ಷೇತ್ರದಲ್ಲಿ ಅತ್ಯುತ್ತಮ ಆಡಳಿತ ನಡೆಸುವವರು ಗೆಲ್ಲಬೇಕು ಎಂದ ಅವರು ಬಡವರು, ದೀನ ದಲಿತರು, ಜನರ ಹಾಗೂ ರೈತರ ಹಿತ ಕಾಯುವ ಕಾಯುವ ಕುಮಾರಸ್ವಾಮಿ ನೇತೃತ್ವದ ಸರ್ಕಾರ ರಾಜ್ಯಕ್ಕೆ ಅವಶ್ಯಕ ಎಂದರು.

ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್ ಮಾತನಾಡಿ, ನಿತ್ಯ ತಾಲೂಕಿನಲ್ಲಿ ಓಡಾಡಿಕೊಂಡು ಎಲ್ಲರ ಜೊತೆ ಬೆರೆತು ಕೆಲಸ ಮಾಡುವ ಜಿ.ಡಿ.ಹರೀಶ್ ಗೌಡರು ಕ್ಷೇತ್ರದ ಜನಸಾಮಾನ್ಯರ ಬಗ್ಗೆ ಕಾಳಜಿ ಹೊಂದಿದ್ದಾರೆ. ಅವರನ್ನು ಕ್ಷೇತ್ರದ ಜನತೆ ಇಷ್ಟಪಟ್ಟಿದ್ದು, ಈ ಬಾರಿ ಶಾಸಕರಾಗುವುದು ಖಚಿತ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಟಿ.ರಾಜಣ್ಣ ಮಾತನಾಡಿದರು. ಈ ವೇಳೆ ಮಾಜಿ ಶಾಸಕ ಡಿ.ಕರಿಯಪ್ಪಗೌಡ ಪುತ್ರ ಗಣೇಶ್‌ಗೌಡ, ತಾಪಂ ಮಾಜಿ ಉಪಾಧ್ಯಕ್ಷ ಪ್ರೇಮಕುಮಾರ್, ಗ್ರಾಪಂ ಉಪಾಧ್ಯಕ್ಷ ಜಯಣ್ಣ, ರಮೇಶ್, ಜಗದೀಶ್, ಶಿವಣ್ಣ ಮತ್ತಿತರರಿದ್ದರು.



ಬೆಟ್ಟದಪುರದ ಚಪ್ಪರದಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಎ.ಸಿ.ಧರಣೇಶ್ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಉಪಾಧ್ಯಕ್ಷೆ ಪ್ರೇಮಮ್ಮ, ಸದಸ್ಯರಾದ ಸಿ.ಕೆ.ವೆಂಕಟೇಶ್, ಸಿ.ಪಿ.ಸುರೇಶ್, ದೇವೇಗೌಡ, ಶಶಿಕಲಾ, ಶೋಭಾ, ಮಂಜುಳಾ, ಸುನೀತಾ, ಸರಸ್ವತಿ, ಜಯಶ್ರೀ, ಮೀನಾಕ್ಷಿ, ಪಿಡಿಓ ಶ್ರೀದೇವಿ, ಬಿಲ್ ಕಲೆಕ್ಟರ್ ರಮಣಯ್ಯ, ಡಿಇಓ ಮಹೇಂದ್ರ ಸೇರಿದಂತೆ ಇತರರಿದ್ದರು.

ಒಕ್ಕಲಿಗ ಸಮುದಾಯ ಅನಿಲ್ ಬೆಂಬಲಿಸಿ

ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್



ಹೆಚ್.ಡಿ.ಕೋಟೆ, ಏ.25– ಒಕ್ಕಲಿಗ ಸಮುದಾಯ ಈ ಬಾರಿಯ ಚುನಾವಣೆಯಲ್ಲಿ ಶಾಸಕ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅನಿಲ್ ಚಿಕ್ಕಮಾದು ಅವರನ್ನು ಬೆಂಬಲಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ತಿಳಿಸಿದರು.

ಪಟ್ಟಣದ ಬಿಜಿಎಸ್ ಸಭಾ ಭವನದಲ್ಲಿ ಆಯೋಜಿಸಿದ್ದ ಕೋಟೆ, ಸರಗೂರು ತಾಲೂಕಿನ ಒಕ್ಕಲಿಗರ ಸಮುದಾಯದ ಸಭೆಯಲ್ಲಿ ಮಾತನಾಡಿದ ಅವರು, ಅನಿಲ್ ಚಿಕ್ಕಮಾದು ಅವರು ತಮ್ಮ ಅಧಿಕಾರವಧಿಯಲ್ಲಿ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಪಕ್ಷಾತೀತವಾಗಿ ಶ್ರಮಿಸಿದ್ದಾರೆ. ಎಲ್ಲಾ ಸಮುದಾಯದವರೊಂದಿಗೆ ಪ್ರೀತಿ, ವಿಶ್ವಾಸ ಇಟ್ಟುಕೊಂಡಿರುವ ನಿಷ್ಠಾವಂತ ವ್ಯಕ್ತಿಯನ್ನು ಬೆಂಬಲಿಸುವ ಮೂಲಕ ಶಾಸಕರಾಗಿ ಮಾಡಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ದಿ.ಚಿಕ್ಕಮಾದು ಅವರು, ಹೆಚ್.ಡಿ.ಕೋಟೆಗೆ ಸಾಕಷ್ಟು ಕೊಡುಗೆ ನೀಡಿದ್ದು, ಅಭಿವೃದ್ಧಿ ಕಾರ್ಯಗಳ ಮೂಲಕ ತಾಲೂಕಿನ ಜನತೆಯ ಮನಸ್ಸನ್ನು ಗೆದ್ದಿದ್ದಾರೆ. ಅದೇ ರೀತಿ ಅವರ ಪುತ್ರ ಶಾಸಕ ಅನಿಲ್ ಚಿಕ್ಕಮಾದು ಅವರ ತಂದೆ ಹೆಸರನ್ನು ಉಳಿಸುವ ನಿಟ್ಟಿನಲ್ಲಿ ಒಬ್ಬ ನಿಷ್ಠಾವಂತ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಹೀಗಾಗಿ ಒಕ್ಕಲಿಗ ಸಮುದಾಯ ಈ ಬಾರಿ ಹೆಚ್ಚಿನ ಮತಗಳನ್ನು ನೀಡಿ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಲು ಆಶೀರ್ವದಿಸಬೇಕು ಎಂದರು.

> ಹೆಚ್.ಡಿ.ಕೋಟೆಗೆ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅಪಾರ ಕೊಡುಗೆ ನೀಡಿದ್ದಾರೆ. ನಾನು ಸಹ ವಿಧಾನಪರಿಷತ್ ಸದಸ್ಯನಾದ ವೇಳೆ ಕ್ಷೇತ್ರದ ಅಭಿವೃದ್ಧಿಗೆ 12 ಕೋಟಿಗೂ ಹೆಚ್ಚು ಅನುದಾನ ನೀಡಿದ್ದೇನೆ. ಕ್ಷೇತ್ರದ ಅಭಿವೃದ್ಧಿಗೆ ಸಾವಿರಾರು ಕೋಟಿ ಅನುದಾನ ತಂದು ಶ್ರಮಿಸಿರುವ ಅನಿಲ್ ಚಿಕ್ಕಮಾದು ಅವರನ್ನು ಅತೀ ಹೆಚ್ಚು ಮತಗಳಿಂದ ಗೆಲ್ಲಿಸಿ.
>
> - ಸಂದೇಶ್ ನಾಗರಾಜ್, ಮಾಜಿ ಎಂಎಲ್‌ಸಿ.

ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಕೋಟೆ ಕ್ಷೇತ್ರ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾಣಬೇಕಾದರೆ ಅನಿಲ್ ಚಿಕ್ಕಮಾದು ಅವರನ್ನು ಮತ್ತೊಂದು ಬಾರಿ ಶಾಸಕರಾಗಿ ಆಯ್ಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರದಾಗಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನನ್ನ ಅಧಿಕಾರಾವಧಿಯಲ್ಲಿ ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದೇನೆ. ಇನ್ನೂ ಹೆಚ್ಚಿನ ಅಭಿವೃದ್ಧಿಗಾಗಿ ಮತ್ತೊಮ್ಮೆ ನನ್ನನ್ನು ಒಕ್ಕಲಿಗ ಸಮಾಜ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ನೂರಾರು ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಇದೇ ವೇಳೆ ಒಕ್ಕಲಿಗ ಸಮುದಾಯದಿಂದ ಸಂದೇಶ್ ನಾಗರಾಜ್, ಅನಿಲ್ ಚಿಕ್ಕಮಾದು ಅವರನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಮೈಮುಲ್ ನಿರ್ದೇಶಕ ಈರೇಗೌಡ, ಸತೀಶ್‌ಗೌಡ, ಜಿಪಂ ಮಾಜಿ ಉಪಾಧ್ಯಕ್ಷೆ ನಂದಿನಿ, ತಾಲೂಕು ಮಹಿಳಾ ಅಧ್ಯಕ್ಷೆ ಶೀಲಾ, ಗ್ರಾಪಂ ಅಧ್ಯಕ್ಷ ಸಂತೋಷ್, ಮಾಜಿ ಉಪಾಧ್ಯಕ್ಷ ಕಾಳಿಂಗೇಗೌಡ, ಜನಾರ್ಧನ್, ತಾಪಂ ಮಾಜಿ ಉಪಾಧ್ಯಕ್ಷ ಬಾಲಚಂದ್ರ, ಸದಸ್ಯ ನಟರಾಜ್, ವಿಎಸ್‌ಎಸ್‌ಎನ್ ಅಧ್ಯಕ್ಷ ಮಹೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಪಿ.ಭಾಸ್ಕರ್, ಮುಖಂಡರಾದ ಸೋಮೇಶ್, ಕೆಂಡಗಣ್ಣ ಜಯರಾಮು, ನಾಗೇಶ್, ಧನಂಜಯ, ಮಹೇಶ್, ಹೇಮಂತ, ಕುಮಾರ್, ಸತ್ಯ, ನಾಗೇಶ್, ಮಹೇಂದ್ರ ಒಕ್ಕಲಿಗ ಸಮುದಾಯದ ಮುಖಂಡರು ಹಾಜರಿದ್ದರು.

ಸತ್ಯನಾರಾಯಣ ರಾವ್ ಶಿಂಧೆ ನಿಧನ



ಹುಣಸೂರು, ಏ.25– ತಾಲೂಕಿನ ರತ್ನಪುರಿ ಗ್ರಾಮದ ನಿವಾಸಿ ಸತ್ಯನಾರಾಯಣ ರಾವ್ ಶಿಂಧೆ (90) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರಾವಂದೂರು ಸಮೀಪದ ಅರೇನಹಳ್ಳಿ ಗ್ರಾಮದಲ್ಲಿ ಪಿರಿಯಾಪಟ್ಟಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್ ಮತಯಾಚಿಸಿದರು. ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಗೌಡ, ಮುಖಂಡರಾದ ಸೋಮಶೇಖರ್, ಆರ್.ಟಿ.ಸತೀಶ್, ದೇವರಾಜ್, ಲೋಕೇಶ್ ಚಂದ್ರು, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಅಶೋಕ್, ಪ್ರಭಾಕರರಾಧ್ಯ ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

ಸಾರಾ ಗೆಲ್ಲಿಸಿ ಹೆಚ್‌ಡಿಕೆಗೆ ಬಹುಮತದ ಹಾರ ಹಾಕಿ



> ಕುಮಾರಸ್ವಾಮಿ ತಮ್ಮ ಪ್ರಣಾಳಿಕೆಯಲ್ಲಿ ತಿಳಿಸಿರುವಂತೆ ವಯೋವೃದ್ಧರಿಗೆ 5 ಸಾವಿರ ಮಾಸಾಶನ ಮತ್ತು ಮಹಿಳೆಯರು ಸ್ತ್ರೀಶಕ್ತಿ ಸಂಘಗಳಲ್ಲಿ ಮಾಡಿರುವ ಸಾಲ ಸೇರಿದಂತೆ ರೈತರಿಗೆ 10 ಸಾವಿರ ಸಹಾಯ ಧನ, ರೈತರ ಮಕ್ಕಳ ವಿವಾಹಕ್ಕೆ 2 ಲಕ್ಷ, ಎಲ್ಲಾ ಗ್ರಾಪಂಗಳಲ್ಲಿ ಉಚಿತ ಆಂಗ್ಲ ಮಾಧ್ಯಮ ಶಾಲೆ ಸೇರಿದಂತೆ ವಿವಿಧ ಜನಪರ ಯೋಜನೆಗಳನ್ನು ಜಾರಿಗೆ ತರಲು ಜೆಡಿಎಸ್ ಬೆಂಬಲಿಸಿ.
>
> -ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಚುಂಚನಕಟ್ಟೆ, ಏ.25– ರಾಜ್ಯದ ಜನರ ಕಣ್ಣೀರು ಒರೆಸಲು, ಪೂರ್ಣ ಪ್ರಮಾಣದ ಸರ್ಕಾರ ರಚಿಸಲು ಶಾಸಕ ಸಾ.ರಾ.ಮಹೇಶ್ ಅವರನ್ನು ಆಯ್ಕೆ ಮಾಡುವ ಮೂಲಕ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಬಹುಮತ ನೀಡುವಂತೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮನವಿ ಮಾಡಿದರು.

ಮಿರ್ಲೆ ಗ್ರಾಮದಲ್ಲಿ ಜೆಡಿಎಸ್ ಅಭ್ಯರ್ಥಿ, ಶಾಸಕ ಸಾ.ರಾ.ಮಹೇಶ್ ಪರ ಮತಯಾಚಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಜನಪರ ಆಡಳಿತ ನಡೆಸಿ ನುಡಿದಂತೆ ನಡೆಯುವ ಏಕೈಕ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸರ್ಕಾರವನ್ನು ಅಧಿಕಾರಕ್ಕೆ ತರಲು ಎಲ್ಲರೂ ಕೈ ಜೋಡಿಸಬೇಕು ಎಂದರು.

ರಾಜ್ಯದಲ್ಲಿ ಪರಿಶಿಷ್ಟ ಪಂಗಡ, ಮುಸ್ಲಿಮರು ಹಾಗೂ ಮಹಿಳೆಯರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಪಡೆದಿದ್ದರೇ ಅದಕ್ಕೆ ನಾನು ಕಾರಣ ಎಂಬುದನ್ನು ಮರೆಯದಿರಿ. ರಾಜ್ಯದಲ್ಲಿ ನೀರಾವರಿ ಯೋಜನೆಗಾಗಿ ಕೈ ನಡುಗುತ್ತಿದ್ದರೂ ರಾಜ್ಯಸಭೆಯಲ್ಲಿ ಹೋರಾಟ ಮಾಡಿದ ನನ್ನ ಕೈ ಹಿಡಿದ ಪ್ರಧಾನ ಮಂತ್ರಿಗಳು ತಮಿಳುನಾಡಿನಲ್ಲಿ ಅತೀ ಹೆಚ್ಚು ಸಂಸದರು ಹೊಂದಿರುವುದರಿಂದ ನಾನು ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲ. ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮಾಡಿ ಎಂದರು ಎಂದು ತಮ್ಮ ಇಳಿ ವಯಸ್ಸಿನ ಹೋರಾಟ ನೆನಪಿಸಿದರು.

5 ವರ್ಷ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಎಲ್ಲಾ ಯೋಜನೆಗಳಿಗೆ ಹಣ ಬೇಕು. ಹೀಗಾಗಿ ರೈತರ ಸಾಲ ಮನ್ನಾ ಸಾಧ್ಯವಿಲ್ಲ ಎಂದು ರೈತರ ಮನವಿ ತಿರಸ್ಕರಿಸಿದರು. ಆದರೆ 14 ತಿಂಗಳು ಮುಖ್ಯಮಂತ್ರಿಯಾದ ಹೆಚ್.ಡಿ.ಕುಮಾರಸ್ವಾಮಿ ಅನ್ನದಾತರ ಅಳಲನ್ನು ನೋಡಲಾರದೇ ರೈತರ ಸಾಲ ಮನ್ನಾ ಮಾಡಿದರು ಎಂದರು.

ಎರಡೂ ರಾಷ್ಟ್ರೀಯ ಪಕ್ಷಗಳ ಬೆಂಬಲವಿಲ್ಲದೇ ಸ್ವತಂತ್ರವಾಗಿ ಸರ್ಕಾರ ರಚಿಸಿ, ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ 2 ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ ತನ್ನ ಜೀವವನ್ನು ಲೆಕ್ಕಿಸದೇ ಕಳೆದ ಒಂದು ವರ್ಷದಿಂದ ರಾಜ್ಯಾದ್ಯಂತ ಪಂಚರತ್ನ ರಥಯಾತ್ರೆ ಮೂಲಕ ಪ್ರವಾಸ ಮಾಡುತ್ತಿರುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಕೈ ಬಲಪಡಿಸಲು ತಾಲೂಕಿನ ಜನಪ್ರಿಯ ಶಾಸಕ ಸಾ.ರಾ.ಮಹೇಶ್ ಅವರನ್ನು ಅತೀ ಹೆಚ್ಚು ಮತಗಳಿಂದ ಗೆಲ್ಲಿಸುವಂತೆ ಮಿರ್ಲೆಯ ಮಗನಾಗಿ ಕೇಳಿಕೊಳ್ಳುತ್ತೇನೆ ಎಂದರು.

ಈ ವೇಳೆ ಶಾಸಕ ಸಾ.ರಾ.ಮಹೇಶ್, ಜಿಪಂ ಮಾಜಿ ಸದಸ್ಯ ಅಚ್ಯುತಾನಂದ, ನೇತ್ರಾವತಿ, ಶೋಭಾ, ಅಣ್ಣೇಗೌಡ, ಮೋಹನ, ಧನಂಜಯ, ತುಕಾರಾಂ, ರಾಧಾಕೃಷ್ಣ, ಅರವಿಂದ, ಮಧು, ಪ್ರಸನ್ನ, ಎ.ಟಿ.ಗೋಪಾಲ್, ತಿಮ್ಮಪ್ಪ, ರಂಗಸ್ವಾಮಿ, ಲೋಕನಾಥ್ ಸೇರಿದಂತೆ ಇನ್ನಿತರಿದ್ದರು.

ಕೆ.ಆರ್.ನಗರದಲ್ಲಿ ಪ್ರಿಯಾಂಕ ಗಾಂಧಿ ಬೃಹತ್ ರೋಡ್ ಶೋ

ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಡಿ.ರವಿಶಂಕರ್ ಗೆಲ್ಲಿಸಲು ಮನವಿ

ಕೆಆರ್.ನಗರ, ಏ.25– ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಅವರು ಪಟ್ಟಣದಲ್ಲಿ ಬೃಹತ್ ರೋಡ್ ಶೋ ನಡೆಸುವ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಪರ ಪ್ರಚಾರ ನಡೆಸಿ, ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಡಿ.ರವಿಶಂಕರ್ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಪಟ್ಟಣದ ಕಾಲೇಜು ಮೈದಾನಕ್ಕೆ ಹೆಲಿಕಾಪ್ಟರ್ ಮೂಲಕ ಬಂದಿಳಿದ ಪ್ರಿಯಾಂಕ ಗಾಂಧಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಬಳಿಯಿಂದ ಮೈಸೂರು–ಹಾಸನ ಮುಖ್ಯರಸ್ತೆ, ಗರುಡಗಂಭ ವೃತ್ತ, ಬಜಾರ್ ರಸ್ತೆ ಮತ್ತು ಸಿ.ಎಂ.ರಸ್ತೆಗಳಲ್ಲಿ ಬೃಹತ್ ರೋಡ್ ಶೋ ನಡೆಸಿದರು. ಈ ಸಂದರ್ಭ ರಸ್ತೆಯ ಎರಡು ಬದಿಯಲ್ಲೂ ಮಹಿಳೆಯರು ಸೇರಿದಂತೆ ಸಾವಿರಾರು ಅಭಿಮಾನಿಗಳು ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕಿಕ್ಕಿರಿದು ನೆರೆದಿದ್ದರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಈ ಬಾರಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರದಿದ್ದರೆ ಪಕ್ಷ ವಿಸರ್ಜನೆ ಮಾಡುತ್ತೇನೆ ಎಂದು ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಇದಕ್ಕೆ ಪಕ್ಷದ ಕಾರ್ಯಕರ್ತರು ವಿಚಲಿತಗೊಳ್ಳುವ ಅವಶ್ಯಕತೆ ಇಲ್ಲ. ನಿಮ್ಮ ಪರ ನಾನಿದ್ದೇನೆ ಎಂದು ಭರವಸೆ ನೀಡಿದರು.

ಕೋಮುವಾದಿ ಬಿಜೆಪಿಯನ್ನು ದೂರವಿಡಬೇಕು ಎಂಬ ಒಂದೇ ಕಾರಣಕ್ಕೆ ಕೆಲವೇ ಕ್ಷೇತ್ರಗಳಲ್ಲಿ ಜಯಗಳಿಸಿದ್ದ ಜೆಡಿಎಸ್‌ಗೆ ಅಧಿಕಾರ ನೀಡಲಾಗಿತ್ತು. ಅದನ್ನು ಉಳಿಸಿಕೊಳ್ಳುವಲ್ಲಿ ವಿಫಲಗೊಂಡ ಹೆಚ್‌ಡಿಕೆ ಅವರು ಪಕ್ಷ ವಿಸರ್ಜನೆ ಮಾಡುವುದಾಗಿ ಹೇಳಿದ್ದಾರೆ ಇದು ಈ ಬಾರಿ ಸಾಬೀತಾಗಲಿದೆ ಕಾರಣ ಕಾಂಗ್ರೆಸ್ 150 ಕ್ಷೇತ್ರಗಳಲ್ಲಿ ಜಯಗಳಿಸಲಿದೆ ಎಂದರು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅಲ್ಪ ಮತಗಳಿಂದ ಸೋತರೂ ಧೃತಿಗೆಡದೆ ಜನರ ಮಧ್ಯೆ ಇರುವುದರಿಂದ ಕ್ಷೇತ್ರದ ಜನತೆಯಲ್ಲಿ ರವಿಶಂಕರ್ ಪರ ಒಲವು ಇದೆ. ಹಾಗಾಗಿ ಅತ್ಯಧಿಕ ಮತಗಳಿಂದ ಜಯಗಳಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಡಿಕೆಶಿ ನಾನು ಮುಖ್ಯಮಂತ್ರಿಯಾಗಲು ರವಿಶಂಕರ್ ಅವರನ್ನು ಒಕ್ಕಲಿಗರು ಸೇರಿದಂತೆ ಎಲ್ಲಾ ಸಮುದಾಯದವರು ಸೇರಿ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಕುಟುಂಬದ ಮಹಿಳೆಗೆ ಮಾಸಿಕ 2 ಸಾವಿರ, 200 ಯೂನಿಟ್ ಉಚಿತ ವಿದ್ಯುತ್, ನಿರುದ್ಯೋಗಿ ಪದವೀಧರರಿಗೆ ಸಹಾಯ ಧನ ಮತ್ತು ತಲಾ 10 ಕೆಜಿ ಅಕ್ಕಿ ವಿತರಿಸಲು ಪಕ್ಷ ತೀರ್ಮಾನಿಸಿದ್ದು, ನಾನು ಮತ್ತು ಸಿದ್ದರಾಮಯ್ಯನವರ ಸಹಿ ಇರುವ ಗ್ಯಾರಂಟಿ ಕಾರ್ಡ್‌ಗಳನ್ನು ಮನೆ ಮನೆಗೆ ವಿತರಿಸಲಾಗಿದೆ. ಇದನ್ನು ಜನತೆ ಅರ್ಥ ಮಾಡಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಕೋರಿದರು. ರಸ್ತೆಯುದ್ದಕ್ಕೂ ನೆರೆದಿದ್ದ ಸಾವಿರಾರು ಮಂದಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಮತ್ತು ಅಭ್ಯರ್ಥಿ ಡಿ.ರವಿಶಂಕರ್ ಅವರಿಗೆ ಜಯಕಾರ ಕೂಗಿ ಸಂಭ್ರಮಿಸಿದರು.

ಎಐಸಿಸಿ ಉಸ್ತುವಾರಿ ರಣದೀಪ್ ಸುರ್ಜೆವಾಲ, ಶಾಸಕ ಹೆಚ್.ಪಿ.ಮಂಜುನಾಥ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕಾರ್ಯದರ್ಶಿ ಶಿವಪ್ರಕಾಶ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯೆ ದೊಡ್ಡಸ್ವಾಮೇಗೌಡ, ಜಿಪಂ ಮಾಜಿ ಸದಸ್ಯ ಪುಷ್ಪಲತಾ, ಪುರಸಭೆ ಅಧ್ಯಕ್ಷ ಸೈಯದ್‌ಸಿದ್ದಿಕ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಶ್ರೀನಿವಾಸ್, ಬಾಬು, ಕೆ.ಸಿ.ಹರೀಶ್, ಎಸ್.ಪಿ.ತಮ್ಮಯ್ಯ, ಎ.ಟಿ. ಗೋವಿಂದೇಗೌಡ, ಕಾಂತರಾಜು, ಗೀತಾ, ಸಾ.ಮಾ.ಯೋಗೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್ ಸೇರಿದಂತೆ ಸಾವಿರಾರು ಮಂದಿ ಹಾಜರಿದ್ದರು.

PUBLIC NOTICE

This is to bring to the kind notice of the members of the General Public that my client Chaitra Gruha Nirmana Sahakara Sangha Niyamitha, Represented by its Secretary/ Authorised signatory having office at No. 324/1, Ground Floor, D. Subbaiah Road, Mysuru -24 has preferred Com A.A. No. 1/2023 on the file of the Prl. District and Sessions Judge and Designated Commercial Court at Mysuru against M/s Upkar Ventures Pvt. Ltd., now called as Upkar Plots and Properties Represented by its partners Sri.G.M.Mohammed Inam, Sri.K.H.Khan, Smt.Zubaida Khanum seeking for the relief of Permanent Injunction with respect to the schedule properties. The Hon'ble Prl. District and Sessions Judge and Designated Commercial Court at Mysuru has granted an interim order of temporary injunction restraining the Respondent from alienating the schedule properties vide orders dated 21-04-2023. Under the circumstances my client is constrained to inform the General Public not to enter into any transaction of sale or otherwise with respect to the schedule properties in view of the interim order of temporary injunction in the Com A.A. No. 1/2023. However, in spite of this public notice if any person/s would proceed in the direction of entering into the transaction of sale/lease / mortgage etc., they shall be doing so at their own risk and any such transaction shall not be binding upon my client, who would be constrained to challenge such transaction and seek for its annulment, since it would amount to violation of the orders of the Hon'ble Court in which event all the persons concerned shall be liable for the consequences thereof.

SCHEDULE PROPERTIES: (1) The land bearing sy.no. 373/2 measuring 21 guntas. **(2)** The land bearing sy.no. 373/3 measuring 2 acres 26 guntas. **(3)** The land bearing sy.no. 373/4 measuring 3 acres 16 guntas. **(4)** The land bearing sy.no. 374/1 measuring 1 acres 32 guntas. **(5)** The land bearing sy.no. 378 measuring 5 acres 04 guntas. **(6)** The land bearing sy.no. 375/2 measuring 5 acres 26 guntas.

All the above properties are situated at Kadakola Village, Jayapura Hobli, Mysore Taluk.

Sd/- J.M.Aiyanna, Advocate , KAR No: 1635/1995, # 1143/1E, Chanakya Circle, Chamarajapuram, Mysore -4.Ph: 9845113628

Dated: 24-04-2023